ಮಂಗಳವಾರ, ಏಪ್ರಿಲ್ 1, 2025 | ₹ 7.00

www.prajavani.net


prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಧಿಕ ತಾಪಮಾನ

- ಏಪ್ರಿಲ್–ಜೂನ್‌ನಲ್ಲಿ ಈ ಪ್ರದೇಶಗಳಲ್ಲಿ ಸಾಮಾನ್ಯಕ್ಕಿಂತ ಅಧಿಕ ತಾಪಮಾನ ದಾಖಲಾಗಲಿದೆ. ಜೊತೆಗೆ, ಸಾಮಾನ್ಯಕ್ಕಿಂತ ಅಧಿಕ ದಿನಗಳಲ್ಲಿ ಬಿಸಿಗಾಳಿ ಬೀಸಲಿದೆ
- ಕೇರಳ ಮತ್ತು ಕರ್ನಾಟಕದ ಪಶ್ಚಿಮಘಟ್ಟದಲ್ಲಿ ಭೂಕುಸಿತದ ಭೀತಿ



ಅತಂತ್ರ ಸ್ಥಿತಿಯಲ್ಲಿ 49 ಅಧಿಕಾರಿಗಳು

ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ • ಸ್ಥಳ ನಿಯುಕ್ತಿ ಮಾಡದೆ ವರ್ಗಾವಣೆ, ವೇತನಕ್ಕೂ ತಡೆ

• ಜಯಸಿಂಹ ಆರ್.

ಬೆಂಗಳೂರು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಅದರ ಅಧೀನದ ವಿವಿಧ ನಿರ್ದೇಶನಾಲಯಗಳಲ್ಲಿ 2024ರ ನವೆಂಬರ್‌ನಲ್ಲಿ 97 ಸಿಬ್ಬಂದಿಯನ್ನು ವರ್ಗಾವಣೆ ಮಾಡಿದ್ದು, ಅವರಲ್ಲಿ 49 ಮಂದಿಗೆ ಸ್ಥಳ ನಿಯುಕ್ತಿ ಮಾಡಿರಲಿಲ್ಲ. ಅವರಲ್ಲಿ ಬಹುತೇಕರು ಕೆಲಸವಿಲ್ಲದೇ ಖಾಲಿ ಕುಳಿತಿದ್ದಾರೆ.

ಸ್ಥಳ ನಿಯುಕ್ತಿ ಆಗದೆ ಹುದ್ದೆ ನಿರೀಕ್ಷಣೆಯಲ್ಲಿ ಇರುವ ಸಿಬ್ಬಂದಿಗೆ ಹಲವು ತಿಂಗಳಿಂದ ವೇತನವೂ ಪಾವತಿಯಾಗಿಲ್ಲ.

2023ರ ಜುಲೈನಿಂದ ಇಲಾಖೆಯು 30 ವರ್ಗಾವಣೆ ಆದೇಶಗಳನ್ನು ಹೊರಡಿಸಿ, 1,230 ಅಧಿಕಾರಿ ಮತ್ತು ಸಿಬ್ಬಂದಿಯನ್ನು ವರ್ಗಾವಣೆ ಮಾಡಿದೆ. 102 ಸಿಬ್ಬಂದಿಗೆ ಸ್ಥಳ ನಿಯುಕ್ತಿ ಆಗಿರಲಿಲ್ಲ. ಇವರಲ್ಲಿ ಕೆಲವು ಸಿಬ್ಬಂದಿಗೆ ಹೆಚ್ಚುವರಿ ಆದೇಶ ಹೊರಡಿಸಿ ಸ್ಥಳ ನಿಯುಕ್ತಿ ನೀಡಿದ್ದು, 86 ಮಂದಿ ಯಾವುದೇ ಹುದ್ದೆ ಇಲ್ಲದೆ ಇದ್ದಾರೆ.

ಮುಖ್ಯಾಂಶಗಳು

- ಲಂಚ ಕೊಟ್ಟರೆ ನಿಯುಕ್ತಿಯ ಭರವಸೆ
- ಸ್ಥಳ ನಿಗದಿಯಾಗದವರಿಗೆ ಸಿಗದ ವೇತನ
- ಕೇಂದ್ರ ಕಚೇರಿಗೆ ಬಂದು ಸಹಿ ಹಾಕಿದರಷ್ಟೆ ವೇತನ

‘ಮುಂಬಡ್ತಿ ನೀಡಿ ಮತ್ತು ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗುತ್ತದೆ. ಆದರೆ, ಸ್ಥಳ ನಿಯುಕ್ತಿ ಮಾತ್ರ ಮಾಡುವುದಿಲ್ಲ. ಸ್ಥಳ ನಿಯುಕ್ತಿ ಸಿಗದ ಸಿಬ್ಬಂದಿ ಲಂಚ ನೀಡಿದರೆ ಒಂದೆರಡು ದಿನಗಳಲ್ಲೇ ಅವರಿಗೆ ಹುದ್ದೆ ನೀಡಲಾಗುತ್ತಿದೆ ಅಥವಾ ವರ್ಗಾವಣೆಯನ್ನು ರದ್ದು ಮಾಡಿ ಹೊಸ ಆದೇಶ ನೀಡಲಾಗುತ್ತಿದೆ’ ಎಂದು ಇಲಾಖೆಯ ಪ್ರಧಾನ ಕಚೇರಿಯ ಅಧಿಕಾರಿಯೊಬ್ಬರು ಆರೋಪಿಸಿದರು.

2024ರ ಜುಲೈ 26ರಂದು ಎರಡು ಆದೇಶಗಳನ್ನು ಹೊರಡಿಸಿ 116 ಅಧಿಕಾರಿ ಮತ್ತು ಸಿಬ್ಬಂದಿಯನ್ನು ವರ್ಗಾವಣೆ ಮಾಡಲಾಗಿತ್ತು. ಅದೇ ಜುಲೈ 31ರಂದು ಮತ್ತೊಂದು ಆದೇಶ ಹೊರಡಿಸಿ 14 ಮಂದಿಯ ವರ್ಗಾವಣೆ ಆದೇಶವನ್ನು ರದ್ದುಪಡಿಸಲಾಗಿದೆ. ಬೇರೆ ಜಿಲ್ಲೆಗಳಿಗೆ ವರ್ಗಾವಣೆ ಆಗಿದ್ದವರ ಆದೇಶವನ್ನು ಮಾರ್ಪಡಿಸಿ, ಅವರು ಈ ಮೊದಲು ಇದ್ದ ಜಿಲ್ಲೆಯಲ್ಲೇ ಉಳಿಸಲಾಗಿದೆ.

‘ವರ್ಗಾವಣೆ ಹೆಸರಿನಲ್ಲಿ ಹಣ ಮಾಡಲು ಇಲಾಖೆಯ ಉನ್ನತ ಅಧಿಕಾರಿಗಳು ಅನುಸರಿಸುತ್ತಿರುವ ತಂತ್ರ ಇದು. ಇಲಾಖೆಯಲ್ಲಿ ಇದು ದೊಡ್ಡ ದಂಧೆಯಾಗಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಉನ್ನತ ಅಧಿಕಾರಿಯೊಬ್ಬರ ಆಣತಿಯಂತೆ ಇದು ನಡೆಯುತ್ತಿದೆ’ ಎಂದು ಅಧಿಕಾರಿ ವಿವರಿಸಿದರು.

ಸ್ಥಳನಿಯುಕ್ತಿ ಆಗದಿದ್ದವರು ಸಂಬಂಧಿತ ನಿರ್ದೇಶನಾಲಯ ಅಥವಾ ಇಲಾಖೆಯ ಕೇಂದ್ರ ಕಚೇರಿಗೆ ಬಂದು ಸಹಿ ಮಾಡಬೇಕು. ಆಗಷ್ಟೇ ಅವರಿಗೆ ಆ ಅವಧಿಯ ವೇತನ, ಸ್ಥಳ ನಿಯುಕ್ತಿಯ ನಂತರ ಪಾವತಿಯಾಗುತ್ತದೆ. ಸಹಿ ಮಾಡದ ಸಿಬ್ಬಂದಿಗೆ ವೇತನ ಬಿಡುಗಡೆ ಆಗುವುದೇ ಇಲ್ಲ ಎನ್ನುತ್ತಾರೆ ಕೇಂದ್ರ ಕಚೇರಿಯ ಸಿಬ್ಬಂದಿ.

ಮಾಹಿತಿ ಇಲ್ಲ ಎಂದ ಇಲಾಖೆ

ಸ್ಥಳ ನಿಯುಕ್ತಿ ಆಗದೆ ಇರುವ ಸಿಬ್ಬಂದಿ ಮತ್ತು ಅವರಲ್ಲಿ ವೇತನ ಪಾವತಿ ಆಗುತ್ತಿರುವವರ ವಿವರ ತನ್ನ ಬಳಿ ಇಲ್ಲ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹೇಳಿದೆ.

ಈ ಸಂಬಂಧ ವಿವರ ಕೇಳಿ ಮಾಹಿತಿ ಹಕ್ಕು ಕಾಯ್ದೆ ಅಡಿ ಇಲಾಖೆಗೆ ನಾಲ್ಕು ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಅವುಗಳಿಗೆ ಉತ್ತರ ನೀಡಿರುವ ಇಲಾಖೆಯು, ‘ಗ್ರೂಪ್‌–ಎ ಅಧಿಕಾರಿಗಳ ವಿವರ ಮಾತ್ರ ಇಲಾಖೆಯಲ್ಲಿ ಲಭ್ಯವಿದೆ. ಗ್ರೂಪ್‌–ಬಿ, ಸಿ ಮತ್ತು ಡಿ ದರ್ಜೆಯ ನೌಕರರು ಇಲಾಖೆಯ ವಿವಿಧ ನಿರ್ದೇಶನಾಲಯಗಳ ಅಡಿಯಲ್ಲಿ ಬರುತ್ತಾರೆ. ಅವರಿಗೆ ಸಂಬಂಧಿಸಿದ ಮಾಹಿತಿ ನಮ್ಮಲ್ಲಿ ಲಭ್ಯವಿಲ್ಲ’ ಎಂದಿದೆ.

‘ಹುದ್ದೆಯ ನಿರೀಕ್ಷಣೆಯಲ್ಲಿ ಇರುವ ಅಧಿಕಾರಿ ಅಥವಾ ಸಿಬ್ಬಂದಿಗೆ ಸ್ಥಳ ನಿಯುಕ್ತಿ ಆದ ನಂತರವೇ ವೇತನ ಪಾವತಿಯಾಗುವುದು ನಿಯಮ. ಆದರೆ ವೇತನ ಪಾವತಿಯ ವಿವರ ನಮ್ಮಲ್ಲಿ ಲಭ್ಯವಿಲ್ಲ’ ಎಂದೂ ಇಲಾಖೆ ಉತ್ತರಿಸಿದೆ.

‘ನನ್ನ ಗೆಲುವಿಗೆ ಯಡಿಯೂರಪ್ಪ ಕೊಡುಗೆ ಅಪಾರ’

ಪ್ರಜಾವಾಣಿ ವಾರ್ತೆ

ವಿಜಯಪುರ: ‘ಎಲ್ಲರ ಪ್ರಾಮಾಣಿಕ ಪ್ರಯತ್ನದಿಂದ ನಾನು ಲೋಕಸಭಾ ಚುನಾವಣೆಯಲ್ಲಿ ಗೆದ್ದಿದ್ದೇನೆ. ಚಿತ್ರದುರ್ಗಕ್ಕೆ ಹೊಸಬನಾಗಿದ್ದರೂ ನನ್ನ ಗೆಲುವಿಗೆ ಕ್ಷೇತ್ರದ ನಾಯಕರು, ಕಾರ್ಯಕರ್ತರು ಶ್ರಮಿಸಿದರು’ ಎಂದು ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ ಹೇಳಿದರು.


ಗೋವಿಂದ ಕಾರಜೋಳ


‘ಚಿತ್ರದುರ್ಗದಲ್ಲಿ ಗೋವಿಂದ ಕಾರಜೋಳ ಅವರನ್ನು ಸೋಲಿಸಲು ಯಡಿಯೂರಪ್ಪ ಪ್ರಯತ್ನಿಸಿದರು’ ಎಂಬ ಯತ್ನಾಳ ಹೇಳಿಕೆಗೆ ಭಾನುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಯಡಿಯೂರಪ್ಪ ಅವರು ಮೂರು ಬಾರಿ ಕ್ಷೇತ್ರಕ್ಕೆ ಬಂದು ಪ್ರಚಾರ ಮಾಡಿದ್ದಾರೆ. ನನ್ನ ಗೆಲುವಿಗೆ ಅವರ ಕೊಡುಗೆ ತುಂಬಾ ಇದೆ. ಯಾರೂ ನನ್ನನ್ನು ಸೋಲಿಸಲು ಪ್ರಯತ್ನಿಸಿಲ್ಲ’ ಎಂದರು.

ಸುದ್ದಿ 2 ನಿಮಿಷ

ವಿವಿಧೆಡೆ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಮಂಗಳವಾರ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಹಾಸನ , ಮೈಸೂರು, ಚಾಮರಾಜನಗರ ಜಿಲ್ಲೆಗಳ ಕೆಲವು ಪ್ರದೇಶಗಳಲ್ಲಿ ಗಂಟೆಗೆ 30 ಕಿ.ಮೀ ನಿಂದ 40 ಕಿ.ಮೀ. ವೇಗದಲ್ಲಿ ಬೀಸುವ ಗಾಳಿಯೊಂದಿಗೆ ಗುಡುಗು ಸಹಿತ ಹಗುರ ಮಳೆಯಾಗಲಿದೆ.



ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಗದಗ, ಹಾವೇರಿ ಜಿಲ್ಲೆಗಳ ಕೆಲವೆಡೆ 40ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಬೀಸಬಹುದು. ಗುಡುಗು ಸಹಿತ ಹಗುರ ಮಳೆಯಾಗಲಿದೆ. ಉಳಿದ ಜಿಲ್ಲೆಗಳಲ್ಲಿ ಒಣ ಹವೆ ಮುಂದುವರಿಯಲಿದೆ. ಮೂರ್ನಾಲ್ಕು ದಿನ ಇದೇ ವಾತಾವರಣ ಇರಲಿದೆ ಎಂದು ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ ಎಂದೂ ಇಲಾಖೆ ಮುನ್ಸೂಚನೆ ನೀಡಿದೆ.

ಬಿಎಸ್‌ವೈ – ಶ್ರೀರಾಮುಲು ಚರ್ಚೆ

ಬೆಂಗಳೂರು: ಕೆಲ ತಿಂಗಳ ಹಿಂದೆ ಬಿಜೆಪಿ ಪ್ರಮುಖ ನಾಯಕರ ಸಭೆಯಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ರಾಜ್ಯ ಉಸ್ತುವಾರಿ ರಾಧಾಮೋಹನ್ ಅಗರ್‌ವಾಲ್ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದ ಬಿ.ಶ್ರೀರಾಮುಲು ಅವರು ಸೋಮವಾರ ಬಿ.ಎಸ್‌.ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ವಿಜಯೇಂದ್ರ ಅವರ ಜತೆ ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿದ್ದ ಅವರು ಬಳಿಕ ಯಡಿಯೂರಪ್ಪ ಅವರನ್ನೂ ಭೇಟಿ ಮಾಡಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘2028ರಲ್ಲಿ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತರಲು ಒಗ್ಗೂಡಿ ಕೆಲಸ ಮಾಡಬೇಕಾಗಿದೆ. ಈ ಬಗ್ಗೆ ವಿಜಯೇಂದ್ರ ಮತ್ತು ಯಡಿಯೂರಪ್ಪ ಅವರ ಜತೆ ಮಾತನಾಡಿದ್ದೇನೆ. ಮುಂದಿನ ದಿನಗಳಲ್ಲಿ ಪಕ್ಷದ ಸಂಘಟನೆ ಮಾಡುತ್ತೇವೆ’ ಎಂದರು.

‘ಪಕ್ಷ ನನ್ನ ತಾಯಿ ಇದ್ದಂತೆ ಎಂಬ ಚಿಂತನೆ ನನ್ನದು. ಕಾಂಗ್ರೆಸ್ ಸರ್ಕಾರದಲ್ಲಿ ಅಭಿವೃದ್ಧಿ ಕೆಲಸಗಳು ನಿಂತ ನೀರಾಗಿವೆ’ ಎಂದು ಹೇಳಿದ ಅವರು, ‘ಯತ್ನಾಳ ಅವರ ವಿಚಾರದಲ್ಲಿ ಪಕ್ಷವು ಸೂಕ್ತ ಸಮಯದಲ್ಲಿ ನಿರ್ಧರಿಸಲಿದೆ’ ಎಂದು ಪ್ರತಿಕ್ರಿಯಿಸಿದರು.

ರಾಯಚೂರಿನಲ್ಲಿ ಐಐಟಿ ಬೇಕೆಂದು ಜನರು ಪ್ರತಿಭಟಿಸುತ್ತಿದ್ದಾರೆ. ಈ ವಿಚಾರದಲ್ಲಿ ಪಕ್ಷದ ನಾಯಕ ಶಿವನಗೌಡರ ಜೊತೆಗೂಡಿ ದೆಹಲಿಗೆ ನಿಯೋಗ ತೆರಳಿ ಕೇಂದ್ರಕ್ಕೆ ಮನವಿ ಸಲ್ಲಿಸುತ್ತೇವೆ ಎಂದರು.

‘ಪ್ರಜಾಪ್ರಭುತ್ವ ಮೌಲ್ಯ ಅರಿಯಲಿ’

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಮತ

ಪ್ರಜಾವಾಣಿ ವಾರ್ತೆ

ಸಕಲೇಶಪುರ (ಹಾಸನ ಜಿಲ್ಲೆ): ‘ಪ್ರಜಾಪ್ರಭುತ್ವದ ಮೌಲ್ಯವನ್ನು ಎಲ್ಲರೂ ಅರಿಯಬೇಕು. ಹಿಂದಿನ– ಈಗಿನ ರಾಜಕಾರಣಕ್ಕೆ ಬಹಳ ಅಂತರವಿದೆ. ದುಡ್ಡು ಕೊಟ್ಟು ಗೆದ್ದು ಬಂದು, ಬೆಂಗಳೂರಿನಲ್ಲಿ ಕುಳಿತು ದುಡ್ಡು ಮಾಡಿ, ಮತ್ತೆ ದುಡ್ಡು ಖರ್ಚು ಮಾಡಿ ಆಯ್ಕೆಯಾಗುವ ಪರಿಪಾಠವಿದೆ. ಎಲ್ಲಿಯವರೆಗೆ ದುಡ್ಡು ಕೊಟ್ಟು ಮತ ಹಾಕಿಸಿಕೊಳ್ಳುತ್ತಾರೆಯೋ, ಅಲ್ಲಿಯವರೆಗೆ ಪ್ರಜಾಪ್ರಭುತ್ವವನ್ನು ಕೇಳುವವರು ಇರುವುದಿಲ್ಲ’ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯ ಪಟ್ಟರು.

ಇಲ್ಲಿ ಭಾನುವಾರ ಸುದ್ದಿಗಾರ ರೊಂದಿಗೆ ಮಾತನಾಡಿ, ‘ಪರಿಸ್ಥಿತಿ ಹೀಗೆಯೇ ಮುಂದುವರಿದರೆ ರಾಜೀನಾಮೆ ಕೊಡಬೇಕೆಂದು ತೀರ್ಮಾನಿಸಿದ್ದೇನೆ’ ಎಂದು ತಿಳಿಸಿದರು.


ಬಸವರಾಜ ಹೊರಟ್ಟಿ

‘ಸದನಕ್ಕೆ ಕಾಲಿಟ್ಟರೆ ಎಲ್ಲರೂ ಶಾಸಕರೇ. ವಯಸ್ಸಿನ ಪ್ರಶ್ನೆ ಇಲ್ಲ. ಅನುಭವಿಗಳು ಹೇಳಿದ್ದನ್ನು ಕೇಳುವುದಿಲ್ಲ. ಯಾರಿಗೂ ಯಾರ ಹೆದರಿಕೆಯೂ ಇಲ್ಲ. ದುಡ್ಡು ಕೊಟ್ಟು ಆರಿಸಿ ಬರುತ್ತೇನೆ ಎಂಬ ಭಾವನೆ ಇದೆ. ಇನ್ನೊಂದೆಡೆ ಜಾತಿ ವ್ಯವಸ್ಥೆಯೂ ಇದೆ’ ಎಂದರು.

‘ವಿರೋಧ ಪಕ್ಷದ ನಾಯಕರು ಸಭಾಧ್ಯಕ್ಷರಿಗೆ ಗೌರವ ಕೊಡುವುದನ್ನು ಕಲಿಯಬೇಕು. ಮಕ್ಕಳಂತೆ ಶಾಸಕರಿಗೂ ತರಬೇತಿ ಕೊಡಬೇಕಾಗಿದೆ. ಸಭಾಪತಿಯ ಪೀಠದ ಮೇಲೆ ಕುಳಿತುಕೊಳ್ಳುವುದು, ಅಧ್ಯಕ್ಷರ ಮುಖದ ಮೇಲೆ ಕಾಗದದ ಚೂರುಗಳನ್ನು ಎಸೆಯುವುದು ಒಳ್ಳೆಯದಲ್ಲ. ಸಭಾಪತಿ ಸುಪ್ರೀಂ ಕೋರ್ಟ್ ನ್ಯಾಯಾಧೀಶರಂತೆ. ಅವರಿಗೆ ಗೌರವ ಕೊಡಬೇಕು’ ಎಂದು ಹೇಳಿದರು.



ಸಂಗಮ ಸ್ನಾನ....

ಶಿವಮೊಗ್ಗ ಜಿಲ್ಲೆಯ ಹೊಳೆಹೊನ್ನೂರು ಸಮೀಪದ ಕೂಡ್ಲಿ ಗ್ರಾಮದಲ್ಲಿ ಯುಗಾದಿ ಮರುದಿನವಾದ ಸೋಮವಾರ ನಡೆದ ಸಂಗಮೇಶ್ವರ ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ್ದ ಸಾವಿರಾರು ಭಕ್ತರು ತುಂಗಾ ಮತ್ತು ಭದ್ರಾ ನದಿಗಳ ಸಂಗಮ ಸ್ಥಳದಲ್ಲಿ ಪುಣ್ಯಸ್ನಾನ ಮಾಡಿದರು

ಚಿತ್ರ: ಕುಮಾರ್ ಅಗಸನಹಳ್ಳಿ

ಸಂಕ್ಷಿಪ್ತ ಸುದ್ದಿ

‘ಮಧುಬಲೆಯ ಮಹಾನಾಯಕ: ಸೂಕ್ತ ವೇಳೆ ತಿಳಿಸುವೆ’

ಹುಬ್ಬಳ್ಳಿ: ‘ಮಧುಬಲೆ ಮಾಡಿಸಿದ ಮಹಾನಾಯಕ ಯಾರು ಎಂಬುದನ್ನು ಸಮಯ ಬಂದಾಗ ತಿಳಿಸುವೆ. ಸದ್ಯ ಪ್ರಕರಣಕ್ಕೆ ಸಂಬಂಧಿಸಿ ಸಚಿವ ಕೆ.ಎನ್. ರಾಜಣ್ಣ ಅವರ ಪುತ್ರ ಪೊಲೀಸ್ ದೂರು ನೀಡಿದ್ದಾರೆ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಮೊದಲು ಪೊಲೀಸರು ತನಿಖೆ ನಡೆಸಲಿ. ಮಹಾನಾಯಕ ಯಾರು ಎಂದು ಕಾದು ನೋಡೋಣ’ ಎಂದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಕುರಿತು ಪ್ರತಿಕ್ರಿಯಿಸಿದ ಅವರು, ‘ಅಧ್ಯಕ್ಷರ ಬದಲಾವಣೆ ನಮ್ಮ ಹಂತದಲ್ಲಿ ಇಲ್ಲ. ಅದರ ಕುರಿತು ನಿರ್ಣಯವನ್ನು ಪಕ್ಷದ ಹೈಕಮಾಂಡ್ ಕೈಗೊಳ್ಳುತ್ತದೆ’ ಎಂದರು.

ರಾಜಣ್ಣ ಪುತ್ರನ ಕೊಲೆಗೆ ಸುಪಾರಿ: ಪೊಲೀಸರಿಂದ ತನಿಖೆ

ವಿಜಯಪುರ: ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರ ಪುತ್ರ, ವಿಧಾನ ಪರಿಷತ್ತು ಸದಸ್ಯ ಆರ್.ರಾಜೇಂದ್ರ ಅವರ ಕೊಲೆಗೆ ಸುಪಾರಿ ನೀಡಿದ ವಿಷಯವನ್ನು ಪೊಲೀಸರು ತನಿಖೆ ನಡೆಸುತ್ತಾರೆ. ಗೃಹ ಸಚಿವ ಜಿ.ಪರಮೇಶ್ವರ ಅವರು ಕೂಡ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದಾರೆ’ ಎಂದು ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಮಧುಬಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆ.ಎನ್.ರಾಜಣ್ಣ ಈವರೆಗೆ ಯಾಕೆ ದೂರು ಕೊಟ್ಟಿಲ್ಲ ಎಂಬುದು ಗೊತ್ತಿಲ್ಲ. ಪಕ್ಷದಲ್ಲಿ ಯಾವುದೇ ಒತ್ತಡವಿಲ್ಲ. ದೂರು ಕೊಡುವುದು ಅಥವಾ ಬಿಡುವುದು, ಅವರಿಗೆ ಬಿಟ್ಟ ವಿಷಯ. ಯಾಕೆ ಎಂಬುದನ್ನು ರಾಜಣ್ಣ ಅವರೇ ಹೇಳಬೇಕು’ ಎಂದು ಅವರು ತಿಳಿಸಿದರು.

ಸಿಡಿಲು ಬಡಿದು ಸಾವು

ಧಾರವಾಡ: ತಾಲ್ಲೂಕಿನ ಮುಗದ ಗ್ರಾಮದಲ್ಲಿ ಭಾನುವಾರ ಸಂಜೆ ಜಮೀನಿನಲ್ಲಿ ಆಡು ಮೇಯಿಸಲು ಹೋಗಿದ್ದ ರಸೂಲ್‌ಸಾಬ ಚಾಂದವಾಲೆ (63) ಎಂಬುವರಿಗೆ ಸಿಡಿಲು ಬಡಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಳೆ ಬಿಜೆಪಿ ಅಹೋರಾತ್ರಿ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಬಡ, ಮಧ್ಯಮ ವರ್ಗದವರ ಮೇಲೆ ಬೆಲೆ ಏರಿಕೆಯ ಬರೆಯನ್ನು ಹಾಕಿದ್ದು, ಅದನ್ನು ವಿರೋಧಿಸಿ ಸರ್ಕಾರದ ವಿರುದ್ಧ ರಾಜ್ಯ ವ್ಯಾಪಿ ಸರಣಿ ಪ್ರತಿಭಟನೆ ಮತ್ತು ಹೋರಾಟ ನಡೆಸುವುದಾಗಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಏ.2 ರ ಬೆಳಿಗ್ಗೆ 11 ರಿಂದ ಅಹೋರಾತ್ರಿ ಧರಣಿ ಆರಂಭಿಸಲಿದ್ದೇವೆ. ಈ ಧರಣಿಯಲ್ಲಿ ಎಲ್ಲ ಶಾಸಕರು, ವಿಧಾನಪರಿಷತ್ ಸದಸ್ಯರು, ಪದಾಧಿಕಾರಿಗಳು ಭಾಗವಹಿಸುತ್ತಾರೆ’ ಎಂದು ಹೇಳಿದರು.

ಬಿಜೆಪಿಯ ಶಾಸಕರ ಅಮಾನತು ಕ್ರಮ ಖಂಡಿಸಿ ಅದೇ ದಿನ ಕೆಂಗಲ್ ಹನುಮಂತಯ್ಯ ಅವರ ಪ್ರತಿಮೆ ಮುಂದೆ ಪ್ರತಿಭಟಿಸುತ್ತೇವೆ. ಅಲ್ಲದೇ, ಏ. 5 ರಂದು ರಾಜ್ಯದ ಎಲ್ಲ ಜಿಲ್ಲಾ ಕೇಂದ್ರ, ತಾಲ್ಲೂಕು ಕೇಂದ್ರ ಮತ್ತು ಮಂಡಲ ಮಟ್ಟದಲ್ಲಿ ಕಾರ್ಯಕರ್ತರು ಬೀದಿಗಿಳಿದು ಪ್ರತಿಭಟಿಸಲಿದ್ದಾರೆ’ ಎಂದು ತಿಳಿಸಿದರು.



ದೇಶದಲ್ಲೇ ಅತ್ಯಂತ ದುಬಾರಿ ಜೀವನವನ್ನು ಈ ನಾಡಿನ ಜನ ನಡೆಸಬೇಕಾಗಿದೆ. ಇದಕ್ಕೆ ಕಾಂಗ್ರೆಸ್ ಕಾರಣ. ಸೇವಿಸುವ ಗಾಳಿ ಬಿಟ್ಟು, ಉಳಿದೆಲ್ಲವುಗಳ ದರ ಏರಿಸಲಾಗಿದೆ

ಬಿ.ವೈ.ವಿಜಯೇಂದ್ರ, ಅಧ್ಯಕ್ಷ, ರಾಜ್ಯ ಬಿಜೆಪಿ

7 ರಿಂದ ಜನಜಾಗೃತಿ : ಏ.7 ರಂದು ಮೈಸೂರಿನಿಂದ ಜನಜಾಗೃತಿಗಾಗಿ ‘ಜನಾಕ್ರೋಶ’ ಹೋರಾಟ ಆರಂಭವಾಗಲಿದೆ. ಅಂದು ಮಧ್ಯಾಹ್ನ 3ಕ್ಕೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಹೋರಾಟಕ್ಕೆ ಚಾಲನೆ ನೀಡಲಿದ್ದಾರೆ. 7ರಂದು ಮೈಸೂರು, ಚಾಮರಾಜನಗರ ಜಿಲ್ಲೆ, 8 ರಂದು ಬೆಳಿಗ್ಗೆ ಮಂಡ್ಯ, ಮಧ್ಯಾಹ್ನ ಹಾಸನ, 9 ರಂದು ಕೊಡಗು ಮತ್ತು ಮಂಗಳೂರು, 10 ರಂದು ಉಡುಪಿ ಮತ್ತು ಚಿಕ್ಕಮಗಳೂರಿನಲ್ಲಿ ಹೋರಾಟ ನಡೆಯಲಿದೆ ಎಂದು ವಿಜಯೇಂದ್ರ ವಿವರಿಸಿದರು.

‘ಇದು ಮೊದಲ ಹಂತದ ಹೋರಾಟ. ಈ ಕುರಿತು ಕೇಂದ್ರ ಸಚಿವರಾದ ವಿ.ಸೋಮಣ್ಣ, ಶೋಭಾ ಕರಂದ್ಲಾಜೆ ಜತೆ ಚರ್ಚಿಸಿದ್ದೇನೆ. 2ನೇ ಹಂತದ ಹೋರಾಟ ಏ.13ರಿಂದ ಶಿವಮೊಗ್ಗ, ಉತ್ತರಕನ್ನಡ ಜಿಲ್ಲೆಗಳಲ್ಲಿ ನಡೆಯಲಿದೆ. ಪ್ರತಿ ಜಿಲ್ಲಾಕೇಂದ್ರದಲ್ಲಿ 2 ರಿಂದ 3 ಕಿ.ಮೀ ಪಾದಯಾತ್ರೆ ನಡೆಸಿ, ಆ ಬಳಿಕ ಸಾರ್ವಜನಿಕ ಸಭೆ ನಡೆಸಲಾಗುವುದು. ಪಕ್ಷದ ಮುಖಂಡರು ಭಾಗವಹಿಸುತ್ತಾರೆ’ ಎಂದರು.

‘ಹಿಂದೂಗಳು ಏನು ತಪ್ಪು ಮಾಡಿದ್ದಾರೆ’

ರಾಜ್ಯ ಬಜೆಟ್ ಮೂಲಕ ಅಲ್ಪಸಂಖ್ಯಾತರಿಗೆ ಓಲೈಕೆ ಮಾತ್ರವಲ್ಲದೆ, ಹಿಂದೂಗಳಿಗೆ ಅಪಮಾನ ಮಾಡಿದ್ದಾರೆ. ಸರ್ಕಾರಿ ಕಾಮಗಾರಿಗಳಲ್ಲಿ ಮುಸ್ಲಿಮರಿಗೆ ಶೇ 4 ಮೀಸಲಾತಿ ನೀಡಿರುವುದು ಕಾನೂನಿಗೆ ವಿರುದ್ಧವಾಗಿದೆ. ಉನ್ನತ ಶಿಕ್ಷಣಕ್ಕೆ ವಿದೇಶಗಳಿಗೆ ಮುಸ್ಲಿಂ ಸಮುದಾಯದ ವಿದ್ಯಾರ್ಥಿಗಳಿಗೆ ತಲಾ ₹20 ಲಕ್ಷ ಇದ್ದದ್ದನ್ನು ₹30 ಲಕ್ಷಕ್ಕೆ ಏರಿಸಿದ್ದಾರೆ. ಹಿಂದೂಗಳಲ್ಲಿನ ಹಿಂದುಳಿದ ಸಮುದಾಯಕ್ಕೆ ಸೇರಿದವರು ಯಾವ ತಪ್ಪು ಮಾಡಿದ್ದಾರೆ. ಅವರಿಗೆ ಈ ಸೌಲಭ್ಯ ಏಕಿಲ್ಲ? ಮುಸ್ಲಿಂ ಹೆಣ್ಣು ಮಕ್ಕಳ ಆತ್ಮರಕ್ಷಣೆ ತರಬೇತಿಗೆ ನೂರಾರು ಕೋಟಿ ಖರ್ಚು ಮಾಡುತ್ತಿದ್ದಾರೆ. ಹಿಂದೂಗಳ ಹೆಣ್ಣು ಮಕ್ಕಳಿಗೆ ತರಬೇತಿ ಏಕಿಲ್ಲ ಅವರೇನು ತಪ್ಪು ಮಾಡಿದ್ದಾರೆ’ ಎಂದು ವಿಜಯೇಂದ್ರ ಪ್ರಶ್ನಿಸಿದರು.

ವಿಜಯದಶಮಿಗೆ ಘೋಷಿಸುವೆ: ಶಾಸಕ ಬಸನಗೌಡ ಪಾಟೀಲ ಯತ್ನಾಳ

‘ಜನಾಭಿಪ್ರಾಯವಿದ್ದರೆ ಹೊಸ ಪಕ್ಷ’

ಪ್ರಜಾವಾಣಿ ವಾರ್ತೆ

ವಿಜಯಪುರ: ‘ಹಿಂದೂಗಳ ರಕ್ಷಣೆಗೆ ಹೊಸ ರಾಜಕೀಯ ಪಕ್ಷ ಕಟ್ಟುವಂತೆ ಜನರ ಬೇಡಿಕೆಯಿದೆ. ಎಲ್ಲವೂ ಸೇರಿ ಒಮ್ಮತದ ಅಭಿಪ್ರಾಯ ವ್ಯಕ್ತವಾದರೆ, ಮುಂದಿನ ವಿಜಯದಶಮಿ ದಿನ ಹೊಸ ರಾಜಕೀಯ ಪಕ್ಷ ಘೋಷಿಸುವೆ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.


ಬಸನಗೌಡ ಪಾಟೀಲ ಯತ್ನಾಳ

‘ಹಿಂದೂ ನಾಯಕರನ್ನು ಮೂಲೆಗುಂಪು ಮಾಡುವ ಕುತಂತ್ರ ಯಡಿಯೂರಪ್ಪ ಕುಟುಂಬದಿಂದ ನಡೆದಿದೆ. ಬಿ.ವೈ.ವಿಜಯೇಂದ್ರ ಅವರನ್ನು ಮುಂದಿನ ಮುಖ್ಯಮಂತ್ರಿಯಾಗಿ ಬಿಂಬಿಸಿದರೆ, ರಾಜ್ಯದ ಜನ, ಅಭಿವೃದ್ಧಿ ಮತ್ತು ಸನಾತನ ಧರ್ಮ ರಕ್ಷಣೆಗೆ ನಿರ್ಧರಿಸುವೆ. ಜನಜಾಗೃತಿ ಮೂಡಿಸುವೆ’ ಎಂದು ಅವರು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

ಯತ್ನಾಳ ಅವರನ್ನು ಬಿಜೆಪಿಯಿಂದ ಉಚ್ಚಾಟಿಸಿರುವ ನಿರ್ಣಯವನ್ನು ಕೇಂದ್ರದ ನಾಯಕರು ಮರುಪರಿಶೀಲಿಸಬೇಕು. ಉಚ್ಚಾಟನೆ ಹಿಂಪಡೆದು ಹಿಂದುತ್ವದ ಪರ ನಿಲ್ಲಲಿ

ಪ್ರಮೋದ ಮುತಾಲಿಕ, ಅಧ್ಯಕ್ಷ, ಶ್ರೀರಾಮಸೇನೆ ಸಂಘಟನೆ


ದೊಡ್ಡ ದೊಡ್ಡವರೇ ಹೊಸ ಪಕ್ಷ ಹುಟ್ಟು ಹಾಕಿದರೂ ಯಶಸ್ವಿ ಆಗಿಲ್ಲ. ಹೀಗಾಗಿ, ಯತ್ನಾಳ ಹೊಸ ಪಕ್ಷ ಕಟ್ಟಿದರೆ ಯಶಸ್ಸು ಸಿಗುತ್ತದೆ ಎಂದು ನನಗಂತೂ ಅನಿಸುವುದಿಲ್ಲ

ದಿನೇಶ್ ಗುಂಡೂರಾವ್, ಸಚಿವ

‘ನನ್ನ ಹೋರಾಟ ಮೋದಿ ಅಥವಾ ಪಕ್ಷದ ವಿರುದ್ಧ ಅಲ್ಲ. ಯಡಿಯೂರಪ್ಪ ಕುಟುಂಬವೇ ಬೇಕು ಎನ್ನುವುದಾದರೆ, ಮುಂದಿನ ನಿರ್ಣಯ ಕೈಗೊಳ್ಳುವೆ. ಕಾಂಗ್ರೆಸ್ ಜೊತೆ ಬಿ.ಎಸ್.ಯಡಿಯೂರಪ್ಪ ಅವರದ್ದು ಹೊಂದಾಣಿಕೆ ಇದೆ. ಡಿ.ಕೆ ಶಿವಕುಮಾರ್ ಜೊತೆ ವ್ಯಾಪಾರ ಇದೆ, ಜಮೀರ್ ಅಹ್ಮದ ಖಾನ್ ಜೊತೆ ಸರಸ ಸಲ್ಲಾಪವಿದೆ. ರಾಜ್ಯದಲ್ಲಿ ಬಿಜೆಪಿಯ ಮಹತ್ವ ಕುಸಿಯಲು ಬಿ.ವೈ.ವಿಜಯೇಂದ್ರ ಕಾರಣ’ ಎಂದರು.

‘ಉಚ್ಚಾಟನೆಗೂ ಪಂಚಮಸಾಲಿಗೆ ಸಂಬಂಧವಿಲ್ಲ’

ಬೆಳಗಾವಿ: ‘ಶಾಸಕ ಬಸನಗೌಡ ಪಾಟೀಲ ಯತ್ನಾಳ ಒಬ್ಬರಿಗೇ ಇಡೀ ಪಂಚಮಸಾಲಿ ಸಮಾಜ ಬರೆದುಕೊಟ್ಟಿಲ್ಲ. ಅವರ ಉಚ್ಚಾಟನೆ ವಿಷಯದಲ್ಲಿ ಸಮಾಜವನ್ನು ಎಳೆದುತಂದ ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರ ಮಾತು ಬೇಸರ ತಂದಿದೆ’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದರು.


ಲಕ್ಷ್ಮೀ ಹೆಬ್ಬಾಳಕರ



ಯತ್ನಾಳ ಒಂದು ಸಮುದಾಯ, ಧರ್ಮದ ಜನರ ಬಗ್ಗೆ ಮನಸೋಇಚ್ಛೆ ಮಾತನಾಡಿ ಕೀಳಾಗಿ ಅಪಮಾನಿಸಿದ್ದಾರೆ. ಹೀಗಾಗಿ ಅವರ ಕಾಂಗ್ರೆಸ್ ಸೇರ್ಪಡೆ ಕಷ್ಟ

ಎಂ.ಬಿ.ಪಾಟೀಲ, ಸಚಿವ

‘ಯತ್ನಾಳ ಅವರನ್ನು ಬಿಜೆಪಿಯಿಂದ ಉಚ್ಚಾಟಿಸಿದ ಕ್ರಮ ಖಂಡಿಸಿ ಏಪ್ರಿಲ್ 13ರಂದು ಸ್ವಾಮೀಜಿ ಅವರ ನೇತೃತ್ವದಲ್ಲಿ ಹಮ್ಮಿಕೊಂಡ ಪ್ರತಿಭಟನೆ ತೀರ ವೈಯಕ್ತಿಕ ವಿಷಯ’ ಎಂದು ಅವರು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

‘ರಾಜ್ಯದಲ್ಲಿ ಶೇ 80ರಷ್ಟು ಪಂಚಮಸಾಲಿಗರು ಬಿಜೆಪಿಯಲ್ಲಿದ್ದಾರೆ ಎಂದು ಸ್ವಾಮೀಜಿ ಹೇಳಿದ್ದು ನನ್ನ ಮನಸ್ಸಿಗೆ ಬಹಳ ನೋವು ಮಾಡಿದೆ. ಸ್ವಾಮೀಜಿ ಹೀಗೆ ಹೇಳಬಾರದಿತ್ತು. ಸ್ವಾಮೀಜಿಗಳು ಸಮಾಜಕ್ಕೆ ಮಾರ್ಗದರ್ಶನ ಮಾಡಬೇಕು. ಒಂದು ಇತಿ–ಮಿತಿ ಇರಬೇಕು’ ಎಂದರು.

‘ಹೊಸ ಪಕ್ಷ ಕಟ್ಟುವ ಯತ್ನಾಳ ಅವರ ಯತ್ನ ಸಫಲವಾಗಲಿ. ಅವರಿಗೆ ಒಳ್ಳೆಯದಾಗಲಿ ಎಂದು ಹಾರೈಸುವೆ’ ಎಂದರು.

‘ಕೆಪಿಸಿಸಿ ಅಧ್ಯಕ್ಷ ಸ್ಥಾನ ಶಾಶ್ವತ ಹುದ್ದೆಯಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆಪಿಸಿಸಿ ಅಧ್ಯಕ್ಷ ಸ್ಥಾನ ಶಾಶ್ವತ ಹುದ್ದೆ ಅಲ್ಲ. ಆ ಹುದ್ದೆಯಲ್ಲಿ ಒಬ್ಬರೇ ಮುಂದುವರಿಯಬೇಕು ಎಂದು ಕೂಡ ಇಲ್ಲ. ಈ ವಿಚಾರದಲ್ಲಿ ತೀರ್ಮಾನ ತೆಗೆದುಕೊಳ್ಳುವುದು ಹೈಕಮಾಂಡ್‌ಗೆ ಬಿಟ್ಟದ್ದು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.


ದಿನೇಶ್ ಗುಂಡೂರಾವ್

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಹಾಲಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನೇ ಮುಂದುವರಿಸುವುದಿದ್ದರೂ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಯಾರೇ ಅಧ್ಯಕ್ಷರಾದರೂ ಬೇರೆ ಬೇರೆ ಅಭಿಪ್ರಾಯಗಳು ಇದ್ದೇ ಇರುತ್ತವೆ’ ಎಂದರು.

‘ಕೆಪಿಸಿಸಿ ಅಧ್ಯಕ್ಷ ಸ್ಥಾನದಲ್ಲಿ ಒಬ್ಬರೇ ಕುಳಿತುಕೊಳ್ಳಲು ಸಾಧ್ಯವಿಲ್ಲ. ಬದಲಾವಣೆ ಎನ್ನುವುದು ಸಹಜವಾಗಿ ನಡೆಯುತ್ತದೆ. ಡಿ.ಕೆ.ಶಿವಕುಮಾರ್ ಒಳ್ಳೆಯ ಕೆಲಸ ಮಾಡಿದ್ದಾರೆ. ಪಕ್ಷ ಸಂಘಟನೆ ಚೆನ್ನಾಗಿ ಮಾಡಿದ್ದಾರೆ. ಅಧ್ಯಕ್ಷರ ಬದಲಾವಣೆ ವಿಚಾರವಾಗಿ ನಮ್ಮಲ್ಲಿ ಯಾವುದೇ ಗೊಂದಲ ಇಲ್ಲ. ಹೈಕಮಾಂಡ್ ಯಾವುದೇ ದುಡುಕಿನ ತೀರ್ಮಾನ ತೆಗೆದುಕೊಳ್ಳುವುದಿಲ್ಲ’ ಎಂದೂ ಹೇಳಿದರು.

ಬಿಜೆಪಿಯ ಉಚ್ಚಾಟಿತ ನಾಯಕ ಬಸನಗೌಡ ಪಾಟೀಲ ಯತ್ನಾಳ್ ಹೊಸ ಪಕ್ಷ ಕಟ್ಟಲು ಮುಂದಾಗಿರುವ ಬಗ್ಗೆ ಕೇಳಿದ ಪ್ರಶ್ನೆಗೆ, ‘ಆ ಬಗ್ಗೆ ನಾನು ವಿಶ್ಲೇಷಿಸುವುದಿಲ್ಲ’ ಎಂದರು.

‘ಯತ್ನಾಳ್ ಯಾವುದೇ ಕಾರಣಕ್ಕೂ ಕಾಂಗ್ರೆಸ್ ಕಡೆ ಬರಲು ಸಾಧ್ಯವಿಲ್ಲ. ಅವರ ಸಿದ್ಧಾಂತವೇ ಬೇರೆ. ನಮ್ಮ ಪಕ್ಷದ ಸಿದ್ಧಾಂತವೇ ಬೇರೆ’ ಎಂದು ತಿಳಿಸಿದರು.

ವರಿಷ್ಠರ ಜೊತೆ ಎಲ್ಲ ವಿಚಾರ ಚರ್ಚೆ: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಯಲ್ಲಿ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ಎಲ್ಲ ವಿಚಾರ ಚರ್ಚೆ ಮಾಡಲಿದ್ದಾರೆ’ ಎಂದು ದಿನೇಶ್ ತಿಳಿಸಿದರು.

‘ಯಾವ ಸ್ಥಾನ ಕೊಟ್ಟರೂ ನಿಭಾಯಿಸುವೆ’

ಬಳ್ಳಾರಿ: ‘ಪಕ್ಷ ಯಾವುದೇ ಜವಾಬ್ದಾರಿ ಕೊಟ್ಟರೂ ನಾನು ವಹಿಸಿಕೊಳ್ಳಲು ಸಿದ್ಧ. ನಾನು ಪಕ್ಷದ ಶಿಸ್ತಿನ ಸಿಪಾಯಿ’ ಎಂದು ಬಳ್ಳಾರಿ–ವಿಜಯನಗರ ಸಂಸದ ಇ.ತುಕಾರಾಂ ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ತಮ್ಮ ಹೆಸರು ಕೇಳಿ ಬರುತ್ತಿರುವ ವಿಷಯದ ಕುರಿತು ಸೋಮವಾರ ಸುದ್ದಿಗಾರರಿಗೆ ಉತ್ತರಿಸಿದ ಅವರು, ‘ಕಾಂಗ್ರೆಸ್ ಮೊದಲಿನಿಂದಲೂ ಹೈಕಮಾಂಡ್ ಅಣತಿಯಂತೆ ನಡೆಯುತ್ತದೆ. ಯಾರಿಗೆ ಯಾವ ಜವಾಬ್ದಾರಿ ಕೊಡಬೇಕು ಎಂಬುದು ಸೇರಿ ಇತರೆ ವಿಷಯಗಳನ್ನು ಪಕ್ಷದ ಹಿರಿಯರು ಚರ್ಚಿಸಿ, ನಿರ್ಧರಿಸುತ್ತಾರೆ’ ಎಂದರು.


ಇ.ತುಕಾರಾಂ

‘ಶಾಸಕ ನಾಗಿದ್ದ ನನಗೆ ಲೋಕಸಭೆಗೆ ಸ್ಪರ್ಧಿಸಲು ಸೂಚಿಸಲಾಯಿತು. ಶಾಸಕನಾಗಿದ್ದುಕೊಂಡೇ ಸಂಸದನಾದೆ. ಪಕ್ಷ ಯಾವುದೇ ಜವಾಬ್ದಾರಿ ಕೊಟ್ಟರೂ ಹೊರುವೆ’ ಎಂದರು.

ಬಂಡೀಪುರ: ಮಾರ್ಗಸೂಚಿ ಕಡೆಗಣಿಸಿ ಕಾಟೇಜ್ ದುರಸ್ತಿ

‘ಸುಪ್ರೀಂ’ ತೀರ್ಪಿನ ಉಲ್ಲಂಘನೆ?

• ಮೋಹನ್ ಕುಮಾರ ಸಿ.

ಮೈಸೂರು: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ‘ಸೂಕ್ಷ್ಮ ಪ್ರದೇಶ’ದಲ್ಲಿ ಪ್ರವಾಸೋದ್ಯಮಕ್ಕಾಗಿ ಅರಣ್ಯ ಇಲಾಖೆಯೇ ಸುಪ್ರೀಂ ಕೋರ್ಟ್ ತೀರ್ಪು ಹಾಗೂ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (ಎನ್‌ಟಿಸಿಎ) ನಿಯಮಗಳನ್ನು ಉಲ್ಲಂಘಿಸಿರುವ ಆರೋಪ ವ್ಯಕ್ತವಾಗಿದೆ.

ಕೋರ್ ಕ್ರಿಟಿಕಲ್ (ನಿರ್ಣಾಯಕ) ಹುಲಿ ಆವಾಸಸ್ಥಾನವಾದ ಅರಣ್ಯದಲ್ಲಿರುವ ‘ಹರಿಣೆ ಕಾಟೇಜ್’ನಲ್ಲಿ ದುರಸ್ತಿ ಹಾಗೂ ಪುನರ್‌ನವೀಕರಣ ಮಾಡಿರುವುದಾಗಿ ಸಂರಕ್ಷಿತ ಪ್ರದೇಶದ ಇನ್‌ಸ್ಟಾಗ್ರಾಂ ಖಾತೆಯಲ್ಲಿ (https://www.instagram.com/bandipur_tr/) ಪ್ರಕಟವಾಗಿದ್ದು, ಹೊಸ ಸೌಲಭ್ಯಗಳ ಚಿತ್ರಗಳನ್ನು ಪೋಸ್ಟ್ ಮಾಡಲಾಗಿದೆ.

ಪ್ರವಾಸಿಗರಿಗೆ ಯಾವುದೇ ಹೊಸ ಕಟ್ಟಡ ನಿರ್ಮಿಸಬಾರದು ಹಾಗೂ ಪ್ರವಾಸೋದ್ಯಮ ಉದ್ದೇಶಕ್ಕಾಗಿ ಇರುವ ಎಲ್ಲ ಕಟ್ಟಡಗಳನ್ನು ಹೊರಗೆ ಹಾಕುವಂತೆ ಅಜಯ್ ದುಬೆ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಎನ್‌ಟಿಸಿಎ ಕೂಡ ಈ ತೀರ್ಪು ಹಾಗೂ ವನ್ಯಜೀವಿ ಸಂರಕ್ಷಣಾ ಕಾಯ್ದೆ–1972ರ ಅನುಸಾರ ಮಾರ್ಗಸೂಚಿಗಳನ್ನು ರೂಪಿಸಿದ್ದು, 2019ರ ಅ.19ರಂದು ಹೊರಡಿಸಿರುವ ಸುತ್ತೋಲೆಯಲ್ಲೂ ‘ನಿರ್ಣಾಯಕ ಹುಲಿ ಆವಾಸಸ್ಥಾನಗಳಲ್ಲಿ ಕಾಯಂ ಪ್ರವಾಸಿ ಸೌಲಭ್ಯಗಳನ್ನು ನಿರ್ದಿಷ್ಟ ಕಾಲಾವಧಿಯೊಳಗೆ ಹೊರವಲಯಕ್ಕೆ ಸ್ಥಳಾಂತರಿಸಬೇಕು’ ಎಂದಿದೆ.

‘ಪೆಟ್ರೋಲಿಂಗ್ ಕ್ಯಾಂಪ್‌ಗಳು, ಚೌಕಿಗಳು ಹಾಗೂ ವೀಕ್ಷಣಾ ಗೋಪುರ ಸೌಲಭ್ಯವನ್ನು ಪ್ರವಾಸಿಗರು ಬಳಸುವಂತಿಲ್ಲ. ರಾತ್ರಿ ತಂಗುದಾಣಗಳನ್ನು ಕಾಲಮಿತಿಯಲ್ಲಿ ಕಾಯಂ ಆಗಿ ಸ್ಥಳಾಂತರ ಮಾಡಬೇಕು’ ಎಂದೂ ಹೇಳಿದೆ.



ಚಾಮರಾಜನಗರ ಜಿಲ್ಲೆಯ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿನ ‘ಹರಿಣಿ ಕಾಟೇಜ್’ ಅನ್ನು ನವೀಕರಣ ಮಾಡಲಾಗಿದೆ

ಮುಖ್ಯಾಂಶಗಳು

- ಕಾಟೇಜ್ ದುರಸ್ತಿಗೆ ಆಕ್ಷೇಪ
- ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ನಿಯಮ ಉಲ್ಲಂಘನೆ ಆರೋಪ
- ತಪ್ಪಿತಸ್ಥ ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

ಆದರೆ, ಹರಿಣೆ ಕಾಟೇಜ್‌ನಲ್ಲಿ ಗಾಜಿನ ಕಿಟಕಿಯ ಹಜಾರದ ಗ್ಯಾಲರಿ ಸೌಲಭ್ಯವನ್ನು ಪ್ರವಾಸಿಗರಿಗೆ ಹೊಸದಾಗಿ ನೀಡಲಾಗಿದೆ. ಈ ಕಾಟೇಜ್ 1959ರ ಮೇ 4ರಂದು ಆಗಿನ ಕೇಂದ್ರ ಕೃಷಿ ಸಚಿವ ಪಂಜಾಬ್‌ರಾವ್ ದೇಶ್‌ಮುಖ್ ಉದ್ಘಾಟಿಸಿದ್ದರು. ಪಾರಂಪರಿಕ ಶೈಲಿಯಲ್ಲಿದ್ದ ಈ ಕಟ್ಟಡವನ್ನು ನವೀಕರಿಸಿದ್ದು, ಇದು ನಿಯಮಗಳ ಸ್ಪಷ್ಟ ಉಲ್ಲಂಘನೆ. ಅದಕ್ಕಾಗಿ ಪರಿಸರ ಪ್ರಿಯರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ಸೂಕ್ಷ್ಮ ಪ್ರದೇಶದಲ್ಲಿದ್ದ ಸಫಾರಿ ಟಿಕೆಟ್ ಕೌಂಟರ್‌ಗಳನ್ನು ಎನ್‌ಟಿಸಿಎ ಮಾರ್ಗಸೂಚಿಯಂತೆ ಮೇಲುಕಾಮನಹಳ್ಳಿಗೆ ಸ್ಥಳಾಂತರಿಸಲಾಗಿದೆ. ಬಂಡೀಪುರ ಅರಣ್ಯ ಸಂರಕ್ಷಣಾಧಿಕಾರಿಗಳು ನಿಯಮ ಉಲ್ಲಂಘಿಸಿದ್ದಲ್ಲದೆ, ಇನ್‌ಸ್ಟಾಗ್ರಾಂ ಮೂಲಕ ಪ್ರಚಾರವನ್ನೂ ಮಾಡುತ್ತಿರುವುದು ಎಷ್ಟು ಸರಿ? ಕೂಡಲೇ ಹೊಸ ಕಟ್ಟಡ ನೆಲಸಮ ಮಾಡಬೇಕು. ತಪ್ಪಿತಸ್ಥ ಸಿಎಫ್, ಎಸಿಎಫ್ ಹಾಗೂ ಆರ್‌ಎಫ್‌ಒ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು’ ಎನ್ನುತ್ತಾರೆ ವನ್ಯಜೀವಿ ಛಾಯಾಗ್ರಾಹಕ ಪ್ರಮೋದ್.

‘ಯೋಜನೆಯಂತೆ ನಡೆದಿದೆ’

‘ಕಾಟೇಜ್ 1973ರಿಂದಲೂ ಇದ್ದು, ಇದೀಗ ನವೀಕರಣ ಮಾಡಲಾಗಿದೆ. ಕ್ರಿಯಾ ಯೋಜನೆಯಂತೆಯೇ ಈಗಾಗಲೇ ಇದ್ದ ಕಟ್ಟಡ ಪುನರುಜ್ಜೀವನಗೊಳಿಸಲಾಗಿದೆ. ಹೊಸ ಕಟ್ಟಡ ವೇನೂ ಕಟ್ಟಿಲ್ಲ’ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಸುಭಾಷ್ ಕೆ. ಮಾಲ್ಖಡೆ ಪ್ರತಿಕ್ರಿಯಿಸಿದರು.

ವಿಕ್ಟೋರಿಯಾದಲ್ಲಿ ಸ್ಥಾಪನೆಗೆ ಕ್ರಮ; ₹1 ಕೋಟಿ ಅನುದಾನ

ಶೀಘ್ರ ‘ಅಂಗಾಂಗ ಮರು ಪಡೆಯುವ ಕೇಂದ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ದಕ್ಷಿಣ ಭಾರತದ ಅತಿ ದೊಡ್ಡ ‘ಅಂಗಾಂಗ ಮರು ಪಡೆಯುವ ಕೇಂದ್ರ’ ಸ್ಥಾಪಿಸಲು ರಾಜ್ಯ ಸರ್ಕಾರ ಮುಂದಾಗಿದೆ.

‘ನಾಲ್ಕರಿಂದ ಆರು ತಿಂಗಳಲ್ಲಿ ಈ ಕೇಂದ್ರ ಕಾರ್ಯಾರಂಭ ಮಾಡಲಿದೆ’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ ತಿಳಿಸಿದ್ದಾರೆ.

ವೈದ್ಯಕೀಯ ಶಿಕ್ಷಣ ಇಲಾಖೆಯು ವಿಕ್ಟೋರಿಯಾದಲ್ಲಿ ಈ ಕೇಂದ್ರ ಸ್ಥಾಪಿಸಲು ಮತ್ತು ಅಸ್ತಿತ್ವದಲ್ಲಿರುವ ಸೌಲಭ್ಯಗಳನ್ನು ನವೀಕರಿಸಲು ₹ 1 ಕೋಟಿ ಅನುದಾನ ಮಂಜೂರು ಮಾಡಿದೆ. ವಿಕ್ಟೋರಿಯಾ ಆಸ್ಪತ್ರೆಯ 125ನೇ ವರ್ಷಾಚರಣೆ ಸಂದರ್ಭದಲ್ಲಿ ಈ ಮಹತ್ವದ ಕೇಂದ್ರ ಆರಂಭವಾಗಲಿದೆ.



ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ ಕಟ್ಟಡ

‘ಕಸಿಗೆ ಅಂಗಾಂಗಗಳ ಖರೀದಿಯನ್ನು ಸುಗಮಗೊಳಿಸುವ ಮೂಲಕ ಅಂಗಾಂಗ ಮರು ಪಡೆಯುವಿಕೆ ಕೇಂದ್ರ ಆಸ್ಪತ್ರೆಗಳಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಇಲ್ಲಿ ತೀವ್ರ ನಿಗಾ ಘಟಕ, ಶಸ್ತ್ರಚಿಕಿತ್ಸಾ ಕೊಠಡಿ, ಪ್ರಯೋಗಾಲಯ ಸೌಲಭ್ಯಗಳು ಮತ್ತು ವಿವಿಧ ಹಂತದ ತನಿಖಾ ಸಾಮರ್ಥ್ಯಗಳನ್ನು ಹೊಂದಿರುವ ಸಮಗ್ರ ಸೇವೆ ಲಭ್ಯವಾಗಲಿದೆ’ ಎಂದು ಸಚಿವರು ತಿಳಿಸಿದ್ದಾರೆ.

‘ಸಂಭಾವ್ಯ ದಾನಿಗಳ ಗುರುತಿಸುವಿಕೆ ಮತ್ತು ಸುರಕ್ಷಿತ ಅಂಗಾಂಗ ದಾನ ಪ್ರಕ್ರಿಯೆಗೆ ಕುಟುಂಬ ಸಮಾಲೋಚನೆ, ಉನ್ನತ ಮಟ್ಟದ ಐಸಿಯು ಆರೈಕೆ ಮತ್ತು ಕಾನೂನು ಕ್ರಮಗಳು ಅಗತ್ಯವಿದೆ. ಈ ನಿಟ್ಟಿನಲ್ಲಿ ಸಮಗ್ರ ಅಭಿವೃದ್ಧಿಗೆ ಅನುದಾನ ಒದಗಿಸಲಾಗಿದೆ. ಅಂಗಾಂಗ ಸಾಗಣೆಗೆ ಅನುಕೂಲ ಆಗಲೆಂದು ಆಸ್ಪತ್ರೆಯಲ್ಲಿ ಹೆಲಿಪ್ಯಾಡ್ ನಿರ್ಮಿಸಲು ಕೂಡಾ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಯೋಜನೆಯಿಂದ ಬಡ ರೋಗಿಗಳಿಗೆ ಅನುಕೂಲ ಆಗಲಿದೆ’ ಎಂದಿದ್ದಾರೆ.

‘ಸಮಗ್ರ ಅಂಗಾಂಗ ಮರು ಪಡೆಯುವಿಕೆ ಕೇಂದ್ರ ಆರಂಭಿಸುವುದರಿಂದ ಅಂಗಾಂಗ ದಾನ ಕಾರ್ಯಕ್ರಮವನ್ನು ಹೆಚ್ಚಿಸಲು ನಮಗೆ ಅವಕಾಶ ಸಿಗಲಿದೆ’ ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ದೀಪಕ್ ಹೇಳಿದ್ದಾರೆ.

ಸಂಪುಟ ಪುನರ್ ರಚನೆ ಪ್ರಸ್ತಾಪ ಇಲ್ಲ: ಪರಮೇಶ್ವರ

ಪ್ರಜಾವಾಣಿ ವಾರ್ತೆ

ತುಮಕೂರು: ‘ಸಚಿವ ಸಂಪುಟ ಪುನರ್ ರಚನೆ ಪ್ರಸ್ತಾಪವೇ ಇನ್ನೂ ಬಂದಿಲ್ಲ. ಈ ವಿಚಾರವೇ ಚರ್ಚೆಯಲ್ಲಿ ಇಲ್ಲದಿರುವಾಗ ಇನ್ನು ತಿಕ್ಕಾಟ ಎಲ್ಲಿಂದ ಬಂತು’ ಎಂದು ಗೃಹ ಸಚಿವ ಜಿ.ಪರಮೇಶ್ವರ ಪ್ರಶ್ನಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ. ಈ ಬಗ್ಗೆ ಹೈಕಮಾಂಡ್ ನೋಡಿಕೊಳ್ಳಲಿದೆ’ ಎಂದು ಸ್ಪಷ್ಟಪಡಿಸಿದರು.

ಮಂಗಳವಾರ, ಏಪ್ರಿಲ್ 1, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 90 | ಪುಟ 12
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಲ್ಪಸಂಖ್ಯಾತರ ಮೇಲಿನ ಹಿಂಸಾಚಾರದ ದೂರುಗಳು

2014ರಿಂದ 2025ರವರೆಗೆ: **568** ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗಕ್ಕೆ ನೀಡಿರುವ ದೂರುಗಳು

ಕರ್ನಾಟಕ: **10** 11 ವರ್ಷಗಳಲ್ಲಿ ದಾಖಲಾದ ದೂರುಗಳ ಸಂಖ್ಯೆ (2023 ಮತ್ತು 2024ರಲ್ಲಿ ಶೂನ್ಯ)

2018ರಲ್ಲಿ: **109** ಸಲ್ಲಿಕೆಯಾದ ದೂರುಗಳ ಸಂಖ್ಯೆ (11 ವರ್ಷಗಳಲ್ಲೇ ಅತೀ ಹೆಚ್ಚು)

ಉತ್ತರ ಪ್ರದೇಶ: **251** ಅತೀ ಹೆಚ್ಚು ದೂರು ದಾಖಲಾದ ರಾಜ್ಯ

(ರಾಜ್ಯಸಭೆಯಲ್ಲಿ ಕೇಂದ್ರ ಸರ್ಕಾರ ನೀಡಿದ ಮಾಹಿತಿ)

ಆಳ-ಅಗಲ
ಆನ್‌ಲೈನ್ ಆಟ ಬೇಕಿದೆ ಅಂಕುಶ
‘ಕನ್ನತ್ವ ಪರೀಕ್ಷೆಗೆ ಒತ್ತಾಯ ಅಸಾಂವಿಧಾನಿಕ’ 9
ಸಣ್ಣ ಸಮುದಾಯಗಳಿಗೆ ಸಿಗುವುದೇ ಅವಕಾಶ? 5

ಚಿನ್ನ (Std. 10g) ₹95,017 (ಬೆಂಗಳೂರು)
ಶುದ್ಧ ಬೆಳ್ಳಿ (kg) ₹1.06 ಲಕ್ಷ (ಬೆಂಗಳೂರು)

ಹೊಸ ಆರ್ಥಿಕ ವರ್ಷದಲ್ಲಿ ತೆರಿಗೆ ಪಾವತಿ, ಹಣಕಾಸು ವಹಿವಾಟುಗಳಿಗೆ ಸಂಬಂಧಿಸಿ ಗಮನಿಸಬೇಕಾದ ಅಂಶಗಳು

ಇಂದಿನಿಂದ ಏನೆಲ್ಲಾ ಬದಲಾವಣೆ?



ಪ್ರಜಾವಾಣಿ ವಾರ್ತೆ

ಹೊಸ ಆರ್ಥಿಕ ವರ್ಷ ಮಂಗಳವಾರದಿಂದ ಆರಂಭವಾಗಿದೆ. ಹಣಕಾಸಿಗೆ ಸಂಬಂಧಿಸಿದ ಹಲವು ಬದಲಾವಣೆಗಳು ಏಪ್ರಿಲ್ ಒಂದರಿಂದ ಜಾರಿಗೆ ಬರಲಿವೆ. ಇವೆಲ್ಲವೂ ಜನರ ಜೀವನದ ಮೇಲೆ ನೇರವಾಗಿ ಪರಿಣಾಮ ಬೀರಬಲ್ಲ ವಿಚಾರಗಳು. ಏಪ್ರಿಲ್ 1ರಿಂದ ಏನೆಲ್ಲ ಬದಲಾವಣೆಗಳು ಆಗಲಿವೆ ಎಂಬುದರ ಸಮಗ್ರ ಚಿತ್ರಣ ಇಲ್ಲಿದೆ:

ತೆರಿಗೆ ವಿನಾಯಿತಿ

2025-26ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಆದಾಯ ತೆರಿಗೆ ಸ್ಲ್ಯಾಬ್ ಮಿತಿಯಲ್ಲಿ ಬದಲಾವಣೆ ಮಾಡಲಾಗಿದೆ. ಇದರ ಪ್ರಕಾರ ತೆರಿಗೆದಾರರು ಎಷ್ಟೇ ಆದಾಯ ಗಳಿಸಿದರೂ ಮೊದಲ ₹4 ಲಕ್ಷದವರೆಗಿನ ಗಳಿಕೆಗೆ ತೆರಿಗೆ ಇಲ್ಲ. ವೈಯಕ್ತಿಕ ತೆರಿಗೆದಾರರ ₹12 ಲಕ್ಷದವರೆಗಿನ ಆದಾಯಕ್ಕೆ ತೆರಿಗೆ ವಿನಾಯಿತಿ ಇದೆ. ಸಂಬಳದಾರರಿಗೆ ಸ್ಟ್ಯಾಂಡರ್ಡ್ ಡಿಡಕ್ಷನ್ ₹75 ಸಾವಿರ ಒಳಗೊಂಡು ₹12.75 ಲಕ್ಷದವರೆಗಿನ ಆದಾಯಕ್ಕೆ ತೆರಿಗೆ ಇರುವುದಿಲ್ಲ. ಹೊಸ ತೆರಿಗೆ ಪದ್ಧತಿ ಆಯ್ದುಕೊಳ್ಳುವವರಿಗಷ್ಟೇ ಈ ವಿನಾಯಿತಿ ಲಭ್ಯ.

ಹಳೆಯ ತೆರಿಗೆ ಪದ್ಧತಿ ಯಥಾಸ್ಥಿತಿ

ಹಳೆಯ ತೆರಿಗೆ ಪದ್ಧತಿಯಲ್ಲಿ ಯಾವುದೇ ಬದಲಾವಣೆ ಇಲ್ಲ. ಇದರಡಿ ತೆರಿಗೆ ಸ್ಲ್ಯಾಬ್‌ಗಳು ಮತ್ತು ವಿನಾಯಿತಿಯು ಯಥಾಸ್ಥಿತಿಯಲ್ಲಿದೆ. ಸೆಕ್ಷನ್ 80ಸಿ ಅಡಿ ಮಕ್ಕಳ ಬೋಧನಾ ಶುಲ್ಕ, ಗೃಹ ಸಾಲದ ಮೇಲಿನ ಅಸಲು ತೀರುವಳಿ, ಸುಕನ್ಯಾ ಸಮೃದ್ಧಿ, ಜೀವ ವಿಮೆ, ಹಿರಿಯ ನಾಗರಿಕರ ಉಳಿತಾಯ ಯೋಜನೆ, ಐದು ವರ್ಷದ ತೆರಿಗೆ ಉಳಿತಾಯ ಸ್ಥಿರ ಠೇವಣಿ ಯೋಜನೆ ಇತ್ಯಾದಿ ಅಡಿ ತೆರಿಗೆ ವಿನಾಯಿತಿ ಪಡೆಯಬಹುದು.

ಮೂಲದಲ್ಲೇ ತೆರಿಗೆ ಕಡಿತ

ಮೂಲದಲ್ಲೇ ತೆರಿಗೆ ಕಡಿತದ ನಿಯಮಗಳನ್ನು ಸರಳೀಕರಿಸಲಾಗಿದೆ. ತೆರಿಗೆದಾರರಲ್ಲಿ ನಗದು ಹರಿವು ಹೆಚ್ಚಿಸುವುದು ಇದರ ಹಿಂದಿರುವ ಆಶಯ. ಹಿರಿಯ ನಾಗರಿಕರು ಬ್ಯಾಂಕ್‌ಗಳಲ್ಲಿ ಇಡುವ ಎಫ್‌ಡಿ, ಆರ್‌ಡಿ ಮತ್ತು ಇತರೆ ಠೇವಣಿ ಮೇಲಿನ ಟಿಡಿಎಸ್ ಕಡಿತದ ಮಿತಿಯನ್ನು ₹1 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಸಾಮಾನ್ಯ ನಾಗರಿಕರಿಗೆ ಬಡ್ಡಿ ಆದಾಯದ ಮೇಲಿನ ಟಿಡಿಎಸ್ ಮಿತಿಯನ್ನು ₹40 ಸಾವಿರದಿಂದ ₹50 ಸಾವಿರಕ್ಕೆ ಹೆಚ್ಚಿಸಲಾಗಿದೆ. ಈ ಮಿತಿ ಮೀರಿದರೆ ಬ್ಯಾಂಕ್‌ಗಳು ಬಡ್ಡಿ ಕಡಿತ ಮಾಡಲಿವೆ.

8ನೇ ಪುಟ ನೋಡಿ

ಪರಿಷ್ಕೃತ ದರ ಇಂದಿನಿಂದ

ಹಾಲು ದುಬಾರಿ



ಕರ್ನಾಟಕ ಹಾಲು ಮಹಾ ಮಂಡಳದ (ಕೆಎಂಎಫ್) ‘ನಂದಿನಿ’ ಹಾಲು ಮತ್ತು ಮೊಸರಿನ ಬೆಲೆ ಏರಿಕೆಯಾಗಿದ್ದು, ಹೊಸ ದರ ಮಂಗಳವಾರದಿಂದ ಜಾರಿಗೆ ಬರಲಿದೆ. ‘ನಂದಿನಿ’ಯ ಎಲ್ಲಾ ಬ್ರ್ಯಾಂಡ್‌ನ ಹಾಲಿನ ಪ್ರತಿ ಲೀಟರ್ ಬೆಲೆಯಲ್ಲಿ ₹4ರಷ್ಟು ಹೆಚ್ಚಾಗಲಿದೆ. ಮೊಸರಿನ ಬೆಲೆಯೂ ₹4 ಹೆಚ್ಚಾಗಲಿದೆ. ಈ ಮೂಲಕ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಬಳಸುವವರ ತಿಂಗಳ ವೆಚ್ಚವೂ ಹೆಚ್ಚಾಗಲಿದೆ.

ವಿದ್ಯುತ್ ತುಟ್ಟಿ

ಕೆಇಆರ್‌ಸಿ ಆದೇಶದ ಅನ್ವಯ ಪರಿಷ್ಕೃತಗೊಂಡಿರುವ ವಿದ್ಯುತ್ ದರ ಕೂಡ ಮಂಗಳವಾರದಿಂದ ಜಾರಿಗೆ ಬರಲಿದೆ. ಕೆಪಿಟಿಸಿಎಲ್ ನೌಕರರ ಪಿಂಚಣಿ ಮತ್ತು ಗ್ರ್ಯಾಚ್ಯುಟಿ ಶುಲ್ಕದ ಹೊರೆಯಾಗಿ 36 ಪೈಸೆಯನ್ನು ಎಲ್ಲ ಸ್ವರೂಪದ ಗ್ರಾಹಕರಿಗೆ ಹೊರಿಸಲಾಗಿದೆ. ಇದರ ಜೊತೆಗೆ, ಗೃಹ ಬಳಕೆ ಗ್ರಾಹಕರಿಗೆ ಮಂಜೂರಾದ ವಿದ್ಯುತ್‌ನ (ಕೆ.ವಿ) ಆಧಾರದಲ್ಲಿ ₹25 ರಿಂದ ₹100ರವರೆಗೂ ಹೆಚ್ಚುವರಿ ಹೊರೆ ಬೀಳಲಿದೆ. ಈ ತಿಂಗಳಿನಿಂದ ವಿದ್ಯುತ್ ಶುಲ್ಕದ ವೆಚ್ಚವೂ ಹೆಚ್ಚಾಗಲಿದೆ. ಸದ್ಯ ಗೃಹಬಳಕೆ (ಎಲ್‌ಟಿ-1) ವಿದ್ಯುತ್ ಸಂಪರ್ಕದಲ್ಲಿ ಪ್ರತಿ ಕೆ.ವಿಗೆ ₹120 ನಿಗದಿತ ಶುಲ್ಕ ವಿಧಿಸಲಾಗುತ್ತಿತ್ತು. ಇದನ್ನು ₹145ಕ್ಕೆ ಹೆಚ್ಚಿಸಲಾಗಿದೆ.

ಕಸ ನಿರ್ವಹಣೆ ವೆಚ್ಚ



ಬೆಂಗಳೂರಿನ ನಿವಾಸಿಗಳು ಇದೇ ಏಪ್ರಿಲ್ 1ರಿಂದ ಕಸ ನಿರ್ವಹಣೆಗೆ ವೆಚ್ಚ ಭರಿಸಬೇಕಾಗುತ್ತದೆ. ಕಟ್ಟಡಗಳ ವಿಸ್ತೀರ್ಣವನ್ನು ಆಧರಿಸಿ ₹10 ರಿಂದ ₹400ರವರೆಗೂ ಕಸ ನಿರ್ವಹಣೆ ವೆಚ್ಚವನ್ನು ಬಿಬಿಎಂಪಿಗೆ ಪಾವತಿಸಬೇಕಾಗುತ್ತದೆ. ಬೆಂಗಳೂರಿನ ಪ್ರತಿ ಮನೆ, ಅಂಗಡಿ, ಕಚೇರಿಗಳಿಗೂ ಇದು ಅನ್ವಯವಾಗಲಿದೆ.



ಪ್ರಾರ್ಥನೆ ವಿಜಯನಗರ ಜಿಲ್ಲೆಯ ಹರಪನಹಳ್ಳಿಯ ಹೊಸಪೇಟೆ ರಸ್ತೆ ಪಕ್ಕದ ಮೈದಾನದ ಬಳಿ ಪ್ರತ್ಯೇಕ ಟೆಂಟ್‌ನಲ್ಲಿ ಮುಸ್ಲಿಂ ಮಹಿಳೆಯರು ಈದ್ ಉಲ್ ಫಿತ್ರ್ ಪ್ರಯುಕ್ತ ಸೋಮವಾರ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು
ಚಿತ್ರ: ವಿಶ್ವನಾಥ ಡಿ.

ವಿವಾದ ಅನಗತ್ಯ: ಆರ್‌ಎಸ್‌ಎಸ್

ಪ್ರಜಾವಾಣಿ ವಾರ್ತೆ/ಪಿಟಿಐ

ನಾಗ್ಪುರ: ಮೊಘಲ್ ದೊರೆ ಔರಂಗಜೇಬ್‌ನ ಸಮಾಧಿಯನ್ನು ತೆರವುಗೊಳಿಸಬೇಕೆಂದು ಕೆಲವು ಬಲಪಂಥೀಯ ಸಂಘಟನೆಗಳು ಆಗ್ರಹಿಸುತ್ತಿರುವ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ಸೋಮವಾರ ಪ್ರತಿಕ್ರಿಯಿಸಿರುವ ಆರ್‌ಎಸ್‌ಎಸ್‌ನ ಹಿರಿಯ ಮುಖಂಡ ಸುರೇಶ್ ಭಯ್ಯಾಜಿ ಜೋಷಿ, ‘ಅನಗತ್ಯವಾಗಿ ಈ ವಿಚಾರವನ್ನು ಪ್ರಸ್ತಾಪಿಸಲಾಗುತ್ತಿದೆ’ ಎಂದು ಹೇಳಿದ್ದಾರೆ.

ಔರಂಗಜೇಬ್‌ನ ಸಮಾಧಿಯನ್ನು ತೆರವು ಮಾಡಬೇಕು ಎಂಬ ಬೇಡಿಕೆಯ ವಿರುದ್ಧವಾಗಿ ಆರ್‌ಎಸ್‌ಎಸ್ ಇತ್ತೀಚೆಗೆ ಅಭಿಪ್ರಾಯ ದಾಖಲಿಸಿರುವುದು ಇದು ಎರಡನೆಯ ಬಾರಿ.

‘ಔರಂಗಜೇಬ್ ಅಲ್ಲಿ ಮೃತಪಟ್ಟ, ಹಾಗಾಗಿಯೇ ಅಲ್ಲಿ ಅವನ ಸಮಾಧಿ ನಿರ್ಮಿಸಲಾಗಿದೆ. ನಂಬಿಕೆ ಇರುವವರು ಅಲ್ಲಿಗೆ ಹೋಗುತ್ತಾರೆ’ ಎಂದು ಆರ್‌ಎಸ್‌ಎಸ್‌ನ ಪ್ರಧಾನ ಕಾರ್ಯದರ್ಶಿ ಆಗಿದ್ದ ಜೋಷಿ ಸುದ್ದಿಗಾರರಿಗೆ ತಿಳಿಸಿದರು.

‘ಛತ್ರಪತಿ ಶಿವಾಜಿ ಮಹಾರಾಜರ ಉದಾಹರಣೆಯೂ ನಮ್ಮ ಮುಂದೆ ಇದೆ... ಅವರು ಅಫ್ಜಲ್ ಖಾನ್ ಅವರ ಸಮಾಧಿ ನಿರ್ಮಿಸಿದ್ದರು. ಇದು ಭಾರತೀಯರ ವೈಶಾಲ್ಯ ಮತ್ತು ಒಳಗೊಳ್ಳುವಿಕೆಯ ದ್ಯೋತಕ’ ಎಂದರು.

ಔರಂಗಜೇಬ್ ಸಮಾಧಿ

ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಪ್ರತಿನಿಧಿ ಸಭಾ ಬೆಂಗಳೂರಿನಲ್ಲಿ ಈಚೆಗೆ ಆಯೋಜನೆ ಆಗಿದ್ದಾಗ, ‘ನನ್ನ ಪ್ರಕಾರ ಔರಂಗಜೇಬ್ ಇಂದಿಗೆ ಪ್ರಸ್ತುತ ಅಲ್ಲ’ ಎಂದು ಸಂಘದ ಪ್ರಚಾರ ವಿಭಾಗದ ರಾಷ್ಟ್ರೀಯ ಮುಖ್ಯಸ್ಥ ಸುನಿಲ್ ಅಂಬೇಕರ್ ಹೇಳಿದ್ದರು.

‘ಸಮಾಧಿ ತೆರವು ಆಗದು’: ಔರಂಗಜೇಬ್‌ನ ಸಮಾಧಿಯನ್ನು ತೆರವು ಮಾಡಲು ಸಾಧ್ಯವಿಲ್ಲ, ಔರಂಗಜೇಬ್‌ನ ವೈಭವೀಕರಣವನ್ನೂ ಒಪ್ಪಲು ಆಗುವುದಿಲ್ಲ ಎಂದು ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಸೋಮವಾರ ಹೇಳಿದರು.

9ನೇ ಪುಟ ನೋಡಿ

ಆರ್.ರಾಜೇಂದ್ರ ಹತ್ಯೆಗೆ ಸುಪಾರಿ: ಮಹಿಳೆ ವಿಚಾರಣೆ

ಕೊಲೆ ಸಂಚು: ಆಡಿಯೊ ಬಯಲು

ಪ್ರಜಾವಾಣಿ ವಾರ್ತೆ



ಆರ್.ರಾಜೇಂದ್ರ

ತುಮಕೂರು: ಸಹಕಾರ ಸಚಿವ ಕೆ.ಎನ್. ರಾಜಣ್ಣ ಪುತ್ರ, ವಿಧಾನ ಪರಿಷತ್ ಸದಸ್ಯ ಆರ್. ರಾಜೇಂದ್ರ ಕೊಲೆಗೆ ಸಂಚು ನಡೆಸಿದ್ದಾರೆ ಎನ್ನಲಾದ ಸಂಭಾಷಣೆಯ ಆಡಿಯೊ ಸಾಮಾಜಿಕ ಜಾಲ ತಾಣದಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ.

ರಾಜೇಂದ್ರ ಅವರ ಆಪ್ತ ಎನ್ನಲಾದ ರಾಕಿ ಹಾಗೂ ಪುಷ್ಪಾ ಎಂಬ ಮಹಿಳೆ ನಡುವಣ ಮೊಬೈಲ್ ಸಂಭಾಷಣೆ ಆಡಿಯೊ ಇದಾಗಿದೆ. ರಾಕಿ ಜೊತೆ ಮಾತುಕತೆ ವೇಳೆ ಕೊಲೆ ಸಂಚು ಕುರಿತು ಪುಷ್ಪಾ ಸುಳಿವು ನೀಡಿದ್ದಾರೆ. ಪುಷ್ಪಾ ಹಾಗೂ ಮತ್ತಿಬ್ಬರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ಇದೇ ಆಡಿಯೊ ಆಧಾರದ ಮೇಲೆ ನಗರದ ಕ್ಯಾತ್ಸಂದ್ರ ಪೊಲೀಸ್ ಠಾಣೆಯಲ್ಲಿ ರಾಜೇಂದ್ರ ದೂರು ದಾಖಲಿಸಿದ್ದರು. ದೂರಿನ ಜತೆಗೆ ಕೊಲೆಗೆ ಸಂಚು ನಡೆಸಿರುವ ಮಾಹಿತಿ ಇರುವ ಪೆನ್ ಡ್ರೈವ್ ಅನ್ನು ಪೂರಕ ದಾಖಲೆಯಾಗಿ ನೀಡಿದ್ದರು.

ಆಡಿಯೊದಲ್ಲಿ ಏನಿದೆ?: ರಾಜೇಂದ್ರ ಕೊಲೆಗೆ ರೌಡಿಶೀಟರ್ ಸೋಮ ₹70 ಲಕ್ಷಕ್ಕೆ ಸುಪಾರಿ ಪಡೆದ ಮತ್ತು ಮುಂಗಡವಾಗಿ ₹5 ಲಕ್ಷ ಪಾವತಿಯಾದ ಮಾಹಿತಿಯೂ ಆಡಿಯೊದಲ್ಲಿದೆ.

ಪ್ರಕರಣವೊಂದರಲ್ಲಿ ಜೈಲು ಸೇರಿದ್ದ ಸೋಮ ಪೆರೋಲ್ ಮೇಲೆ ಹೊರ ಬಂದಿರುವ ವಿಷಯವೂ ಮಾತುಕತೆ ವೇಳೆ ಪ್ರಸ್ತಾಪವಾಗಿದೆ. ಈ ಸಂಭಾಷಣೆ ಗಮನಿಸಿದರೆ ಹಿಂದಿನ ವರ್ಷವೇ ಮೊಬೈಲ್‌ನಲ್ಲಿ ಇಬ್ಬರೂ ಚರ್ಚಿಸಿದಂತೆ ಕಾಣುತ್ತಿದೆ.

ಸೋಮ, ಭರತ್, ಅಮಿತ್, ಗುಂಡಾ, ಯತೀಶ್ ಹೆಸರು ಮಾತಿನ ಮಧ್ಯೆ ಉಲ್ಲೇಖವಾಗಿವೆ.

5ನೇ ಪುಟ ನೋಡಿ

ರಾಜಣ್ಣ ಪಿ.ಎ, ಅಂಗರಕ್ಷಕರ ವಿಚಾರಣೆ



ಬೆಂಗಳೂರು: ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರನ್ನು ಮಧುಬಲೆಗೆ ಕೆಡವಲು ಯತ್ನಿಸಿದ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಪೊಲೀಸರು, ಪ್ರಕರಣದ ಸಂಬಂಧ ಹಲವರನ್ನು ವಿಚಾರಣೆಗೆ ಒಳಪಡಿಸಿ ಹೇಳಿಕೆ ದಾಖಲಿಸಿಕೊಂಡಿದ್ದಾರೆ ಎಂಬುದು ಗೊತ್ತಾಗಿದೆ.

ಪ್ರಕರಣದ ತನಿಖೆ ನಡೆಸುವಂತೆ ಕೋರಿ ರಾಜಣ್ಣ ಅವರು ನೀಡಿದ ಪತ್ರವೊಂದನ್ನು ಆಧರಿಸಿ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರು ಸಿಐಡಿ ತನಿಖೆಗೆ ಸೂಚನೆ ನೀಡಿದ್ದರು. ಸಿಐಡಿ ಪೊಲೀಸರು ಹಲವು ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಕಲೆಹಾಕುತ್ತಿದ್ದಾರೆ.

‘ರಾಜಣ್ಣ ಅವರ ಆಪ್ತ ಸಹಾಯಕ (ಪಿ.ಎ), ಇಬ್ಬರು ಅಂಗರಕ್ಷಕರನ್ನು ವಿಚಾರಣೆಗೆ ಒಳಪಡಿಸಿ ಪ್ರಕರಣದ ಕುರಿತು ಮಾಹಿತಿ ಕಲೆ ಹಾಕಲಾಗಿದೆ’ ಎಂದು ಸಿಐಡಿ ಮೂಲಗಳು ತಿಳಿಸಿವೆ.

5ನೇ ಪುಟ ನೋಡಿ



ರಾಜೇಂದ್ರ ಹತ್ಯೆ ಪ್ರಯತ್ನವನ್ನು ವಿಶೇಷ ತಂಡ ತನಿಖೆ ಮಾಡುತ್ತಿದೆ. ಈ ತಂಡ ವರದಿ ಕೊಟ್ಟ ನಂತರ ಸಿಐಡಿ ಅಥವಾ ಎಸ್‌ಐಟಿ ತನಿಖೆ ಬಗ್ಗೆ ನಿರ್ಧರಿಸಲಾಗುವುದು. ಈ ಹಂತದಲ್ಲಿ ಯಾವುದೇ ನಿರ್ಧಾರ ತೆಗೆದುಕೊಳ್ಳುವುದಿಲ್ಲ
ಜಿ.ಪರಮೇಶ್ವರ, ಗೃಹ ಸಚಿವ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಆರ್ಥಿಕ ಚಟುವಟಿಕೆ ವಿಸ್ತರಣೆಗೆ ಬಾಂಗ್ಲಾ ಕರಾವಳಿ ಬಳಸಿಕೊಳ್ಳಲು ಆಹ್ವಾನ

ಆತಂಕ ಮೂಡಿಸಿದ ಯೂನಸ್ ನಡೆ

● ಅನಿರ್ಬನ್ ಭೌಮಿಕ್

ನವದೆಹಲಿ: ಚೀನಾ ದೇಶವು ಬಾಂಗ್ಲಾದೇಶದ ಕರಾವಳಿಯನ್ನು ತನ್ನ ಆರ್ಥಿಕ ಚಟುವಟಿಕೆಗಳ ವಿಸ್ತರಣೆಗೆ ಬಳಕೆ ಮಾಡಿಕೊಳ್ಳಬೇಕು ಎಂದು ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಅವರು ಹೇಳಿರುವುದು ಭಾರತದಲ್ಲಿ ಆತಂಕಕ್ಕೆ ಕಾರಣವಾಗಿದೆ.

ಯೂನಸ್ ಅವರು ಈ ವಾರ ಬ್ಯಾಂಕಾಕ್‌ನಲ್ಲಿ ನಡೆಯುವ ಕಾರ್ಯಕ್ರಮ ಒಂದರಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಜೊತೆ ಮಾತುಕತೆ ನಡೆಸುವುದು ಇನ್ನೂ ಖಚಿತವಾಗಿಲ್ಲ. ಈ ನಡುವೆ, ಅವರು ಚೀನಾದಲ್ಲಿ ಈ ಮಾತು ಆಡಿದ್ದಾರೆ.

ಭಾರತದ ಈಶಾನ್ಯ ಭಾಗದ ಏಳು ರಾಜ್ಯಗಳಿಗೆ ಸಮುದ್ರ ಮಾರ್ಗದ ನೇರ ಸಂಪರ್ಕ ಇಲ್ಲದಿರುವುದು ಚೀನಾ ಮತ್ತು ಬಾಂಗ್ಲಾದೇಶಕ್ಕೆ ಅವಕಾಶ ಸೃಷ್ಟಿಸಿದೆ. ಚೀನಾ ದೇಶವು, ಬಾಂಗ್ಲಾದೇಶದ ವಿಶಿಷ್ಟ ಸ್ಥಾನದ ಪ್ರಯೋಜನವನ್ನು ಬಳಕೆ ಮಾಡಿಕೊಳ್ಳಬೇಕು ಎಂದು ಯೂನಸ್ ಹೇಳಿದ್ದಾರೆ.



ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ —ಎಎಫ್‌ಪಿ ಚಿತ್ರ

ಚೀನಾ ಭೇಟಿ ಸಂದರ್ಭದಲ್ಲಿ ಅವರು ಈ ಮಾತು ಆಡಿದ್ದಾರೆ. ಬಾಂಗ್ಲಾದಲ್ಲಿ ತೀಸ್ತಾ ನದಿ ಸಂರಕ್ಷಣಾ ಯೋಜನೆಯಲ್ಲಿ ಹೂಡಿಕೆ ಮಾಡುವಂತೆ ಚೀನಾದ ಸರ್ಕಾರಿ ಕಂಪನಿಗಳಿಗೆ ಆಹ್ವಾನ ನೀಡಿದ್ದಾರೆ. ಈ ಯೋಜನೆಯು ಭಾರತದ ‘ಚಿಕನ್ಸ್ ನೆಕ್’ ಕಾರಿಡಾರ್‌ಗೆ ಸನಿಹದಲ್ಲಿದೆ. ಬಾಂಗ್ಲಾದ ಕರಾವಳಿಯಲ್ಲಿ ತಯಾರಿಕಾ ಘಟಕಗಳ ಆರಂಭಕ್ಕೆ ಹೂಡಿಕೆ ಮಾಡುವಂತೆ ಅವರು ಚೀನಾವನ್ನು ಆಹ್ವಾನಿಸಿರುವುದು ಭಾರತದ ಕಳವಳ ಹೆಚ್ಚಲು ಕಾರಣವಾಗಿದೆ.

ತೀಸ್ತಾ ನದಿಗೆ ಸಂಬಂಧಿಸಿದ ಯೋಜನೆಗೆ ನೆರವು ನೀಡಲು ಭಾರತವು ಕೆಲವು ತಿಂಗಳುಗಳ ಹಿಂದೆಯಷ್ಟೇ ಒಪ್ಪಿತ್ತು. ಈ ಯೋಜನೆಯಲ್ಲಿ ಚೀನಾ ಪಾಲುದಾರಿಕೆ ಹೊಂದಿದರೆ, ಚಿಕನ್ಸ್ ನೆಕ್ ಪ್ರದೇಶದಲ್ಲಿ ಚೀನಾದ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತದೆ ಎಂದು ಭಾರತವು ತನ್ನ ಕಳವಳವನ್ನು ಬಾಂಗ್ಲಾದೇಶಕ್ಕೆ ತಿಳಿಸಿತ್ತು.

ಬಾಂಗ್ಲಾದ ಮೊಂಗ್ಲಾ ಬಂದರಿನ ಸೌಲಭ್ಯಗಳ ವಿಸ್ತರಣೆ ಹಾಗೂ ಆಧುನೀಕರಣದಲ್ಲಿ ಚೀನಾದ ಸರ್ಕಾರಿ ಸ್ವಾಮ್ಯದ ಕಂಪನಿಗಳು ಭಾಗಿಯಾಗಬಹುದು ಎಂದು ಯೂನಸ್ ಹೇಳಿದ್ದಾರೆ. ‘ಚಿತ್ತಗಾಂಗ್ ಚೀನಾ ಆರ್ಥಿಕ ಮತ್ತು ಕೈಗಾರಿಕಾ ಪಾರ್ಕ್’ನ ನಿರ್ಮಾಣದಲ್ಲಿ ಚೀನಾದ ಜೊತೆಯಾಗಿ ಕೆಲಸ ಮಾಡಲು ಸಿದ್ಧ ಎಂದು ಕೂಡ ಬಾಂಗ್ಲಾದೇಶ ಹೇಳಿದೆ. ಆದರೆ 2017ರಲ್ಲಿ ಬಾಂಗ್ಲಾದೇಶವು, ಚಿತ್ತಗಾಂಗ್ ಮತ್ತು ಮೊಂಗ್ಲಾ ಬಂದರಿನಿಂದ ಸರಕುಗಳನ್ನು ಸಾಗಿಸಲು ಭಾರತಕ್ಕೆ ಅವಕಾಶ ಕೊಡುವುದಾಗಿ ಒಪ್ಪಿತ್ತು.

ಬಾಂಗ್ಲಾ ನಿಲುವು: ಕಾಂಗ್ರೆಸ್ ಕಳವಳ

ನವದೆಹಲಿ (ಪಿಟಿಐ): ಭಾರತವನ್ನು ಸುತ್ತವರಿಯಲು ಬಾಂಗ್ಲಾದೇಶವು ಚೀನಾಕ್ಕೆ ಆಹ್ವಾನ ನೀಡಿರುವುದು ದೇಶದ ಈಶಾನ್ಯ ಭಾಗದ ಭದ್ರತೆಗೆ ಅಪಾಯಕಾರಿ ಎಂದು ಕಾಂಗ್ರೆಸ್ ಕಳವಳ ವ್ಯಕ್ತಪಡಿಸಿದೆ. ಕೇಂದ್ರ ಸರ್ಕಾರವು ಮಣಿಪುರ ಸೇರಿದಂತೆ ಈಶಾನ್ಯ ಭಾಗದ ಬಗ್ಗೆ ಕಾಳಜಿ ವಹಿಸುತ್ತಿಲ್ಲ ಎಂದು ದೂರಿದೆ.

‘ನಮ್ಮ ವಿದೇಶಾಂಗ ನೀತಿಯು ಅದೆಷ್ಟು ಕರುಣಾಜನಕ ಸ್ಥಿತಿ ತಲುಪಿದೆಯೆಂದರೆ, ಯಾವ ದೇಶದ ರಚನೆಯಲ್ಲಿ ಭಾರತವು ಮಹತ್ವದ ಪಾತ್ರ ಹೊಂದಿತ್ತೋ ಆ ದೇಶವು ಇಂದು ನಮ್ಮ ವಿರುದ್ಧವೇ ಕೆಲಸ ಮಾಡುತ್ತಿದೆ’ ಎಂದು ಕಾಂಗ್ರೆಸ್ಸಿನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ‘ಎಕ್ಸ್’ನಲ್ಲಿ ಹೇಳಿದ್ದಾರೆ.

ಗೋವಾ-ತಮ್ನಾರ್ ಮಾರ್ಗ: ಅರಣ್ಯ ಒದಗಿಸುವ ಪ್ರಸ್ತಾವ

ವರ್ಷದಲ್ಲೇ ರಾಜ್ಯದ ನಿಲುವು ಬದಲು

● ಮಂಜುನಾಥ ಹೆಬ್ಬಾರ್

ನವದೆಹಲಿ: ಗೋವಾ-ತಮ್ನಾರ್ 400 ಕೆ.ವಿ. ವಿದ್ಯುತ್ ಮಾರ್ಗಕ್ಕೆ ಕರ್ನಾಟಕದ 435 ಎಕರೆ ಅರಣ್ಯ ಒದಗಿಸುವ ಪ್ರಸ್ತಾವವನ್ನು ಕಳೆದ ವರ್ಷ ತಿರಸ್ಕರಿಸಿದ್ದ ಕರ್ನಾಟಕ ಅರಣ್ಯ ಇಲಾಖೆಯು ವರ್ಷದಲ್ಲೇ ಯೂ-ಟರ್ನ್ ಹೊಡೆದಿದೆ.

ಈ ವಿದ್ಯುತ್ ವಿತರಣಾ ಜಾಲದ ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆಯನ್ನು ಪ್ರಧಾನಿ ಕಾರ್ಯಾಲಯವೇ ನಡೆಸುತ್ತಿದೆ. ಪ್ರಧಾನಿ ಹಾಗೂ ಕೇಂದ್ರ ಇಂಧನ ಸಚಿವರು ರಾಜ್ಯಕ್ಕೆ ಪತ್ರ ಬರೆದು ಈ ಯೋಜನೆಯ ಅನುಷ್ಠಾನಕ್ಕೆ ಸಹಕಾರ ನೀಡುವಂತೆ ಕೋರಿದ್ದರು. ಕೇಂದ್ರ ಸರ್ಕಾರದ ನಿರಂತರ ಒತ್ತಡವೇ ರಾಜ್ಯವು ನಿಲುವು ಬದಲಿಸಲು ಕಾರಣ ಎಂದು ಮೂಲಗಳು ತಿಳಿಸಿವೆ.



ಧಾರವಾಡ ಜಿಲ್ಲೆಯ ನರೇಂದ್ರದಿಂದ ಗೋವಾಕ್ಕೆ ವಿದ್ಯುತ್ ಮಾರ್ಗ ನಿರ್ಮಿಸಲು ಮುಂದಾಗಿರುವ ‘ಗೋವಾ- ತಮ್ನಾರ್ ಟ್ರಾನ್ಸ್‌ಮಿಷನ್ ಪ್ರಾಜೆಕ್ಟ್ ಲಿಮಿಟೆಡ್’ ರಾಜ್ಯದ ಅರಣ್ಯವನ್ನು ಅರಣ್ಯೇತರ ಬಳಕೆಗೆ ಅವಕಾಶ ನೀಡುವಂತೆ ಕೋರಿದೆ. ಧಾರವಾಡ ಜಿಲ್ಲೆಯಲ್ಲಿ 4.70 ಹೆಕ್ಟೇರ್, ಬೆಳಗಾವಿ ಜಿಲ್ಲೆಯಲ್ಲಿ 101 ಹೆಕ್ಟೇರ್ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ 70 ಹೆಕ್ಟೇರ್ ಅರಣ್ಯವನ್ನು ಯೋಜನೆಗೆ ಬಳಸಿಕೊಳ್ಳಲು ಉದ್ದೇಶಿಸಿದೆ.

ಈ ಯೋಜನೆ ಜಾರಿಯಾದರೆ ಕರ್ನಾಟಕ ರಾಜ್ಯದ ಪಶ್ಚಿಮ ಘಟ್ಟ ಪ್ರದೇಶದ 177 ಹೆಕ್ಟೇರ್ ದಟ್ಟ ಕಾಡು ನಾಶವಾಗಲಿದೆ ಹಾಗೂ ಅಂದಾಜು 72 ಸಾವಿರ ಮರಗಳ ಹನನವಾಗಲಿದೆ.

5ನೇ ಪುಟ ನೋಡಿ

‘ಮೊದಲು ಮಹದಾಯಿಗೆ ಒಪ್ಪಿಗೆ ಕೊಡಲಿ’



ಗೋವಾ-ತಮ್ನಾರ್ ಯೋಜನೆಯು ರಾಷ್ಟ್ರೀಯ ವಿತರಣಾ ಜಾಲದ ಯೋಜನೆಯಾಗಿದ್ದು, ಇದಕ್ಕೆ ಸಹಕಾರ ನೀಡಬೇಕು ಎಂದು ಪ್ರಧಾನಿಯವರು ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದರು. ಮಹದಾಯಿ ಯೋಜನೆಗೆ ಅನುಮೋದನೆ ಕೊಟ್ಟರೆ ಗೋವಾ-ತಮ್ನಾರ್‌ಗೆ ಸಹಕಾರ ನೀಡುವುದಾಗಿ ಮುಖ್ಯಮಂತ್ರಿಯವರು ಪತ್ರ ಬರೆದು ಸ್ಪಷ್ಟಪಡಿಸಿದ್ದರು. ನಮ್ಮ ಈ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ.
ಈಶ್ವರ ಖಂಡ್ರೆ, ಅರಣ್ಯ ಸಚಿವ

ಒಂದು ಮರಕ್ಕೆ ₹1 ಲಕ್ಷ ದಂಡ

ದೊಡ್ಡ ಸಂಖ್ಯೆಯಲ್ಲಿ ಮರಗಳನ್ನು ಕಡಿಯುವುದು, ಮಾನವ ಹತ್ಯೆ ಮಾಡಿದಂತೆ ಅಥವಾ ಅದಕ್ಕಿಂತ ಘೋರ. ಅಕ್ರಮವಾಗಿ ಕತ್ತರಿಸಿದ ಪ್ರತಿ ಮರಕ್ಕೆ ₹1 ಲಕ್ಷ ದಂಡ ವಿಧಿಸಿರುವ ವಿಚಾರದಲ್ಲಿ ಕರುಣೆ ತೋರುವ ಅಗತ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯವರು ಅಭಿಪ್ರಾಯ ಪಟ್ಟಿದ್ದಾರೆ. ಹಾಗಾಗಿ ಅಕ್ರಮ ಮರಗಳ ಕಡಿತಲೆಗೆ ವಿಧಿಸುವ ದಂಡದ ಪ್ರಮಾಣ ಹೆಚ್ಚಿಸುವುದು ಅಗತ್ಯ ಎಂದು ಅರಣ್ಯ ಸಚಿವರು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅರಣ್ಯ ಪಡೆ ಮುಖ್ಯಸ್ಥರಿಗೆ ಬರೆದಿರುವ ಟಿಪ್ಪಣಿಯಲ್ಲಿ ಸೂಚಿಸಿದ್ದಾರೆ.

ಕಾನ್‌ಸ್ಟೆಬಲ್ ಟೋಪಿ ಬದಲು? ಶುಕ್ರವಾರ ಮಹತ್ವದ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹೆಡ್ ಕಾನ್‌ಸ್ಟೆಬಲ್‌ಗಳು, ಕಾನ್‌ಸ್ಟೆಬಲ್‌ಗಳು ಧರಿಸುತ್ತಿರುವ ಸ್ಲೋಚ್ ಹ್ಯಾಟ್ (ಟೋಪಿ) ಅನ್ನು ಬದಲಾವಣೆ ಮಾಡಲು ರಾಜ್ಯ ಪೊಲೀಸ್ ಇಲಾಖೆ ಮುಂದಾಗಿದೆ.


ಈ ಸಂಬಂಧ ಏಪ್ರಿಲ್ 4ರಂದು ಸಭೆ ನಡೆಸಿ, ವರದಿ ಸಲ್ಲಿಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಸೂಚಿಸಿದ್ದಾರೆ. ಇದರ ಬೆನ್ನಲ್ಲೇ ರಾಜ್ಯ ಸಶಸ್ತ್ರ ಮೀಸಲು ಪಡೆ (ಕೆಎಸ್‌ಆರ್‌ಪಿ) ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರ ಅಧ್ಯಕ್ಷತೆಯಲ್ಲಿ ಪೊಲೀಸ್ ಕಿಟ್ ನಿರ್ದಿಷ್ಟತಾ ಸಮಿತಿ ಸಭೆ ಕರೆಯಲಾಗಿದೆ. ಸಭೆಯಲ್ಲಿ ಇಲಾಖೆಯ ಅಧಿಕಾರಿಗಳೂ ಪಾಲ್ಗೊಳ್ಳಲಿದ್ದಾರೆ ಎಂದು ಗೊತ್ತಾಗಿದೆ.

ಹಳೆಯ ಮಾದರಿಯ ಟೋಪಿ ಬದಲಿಗೆ ಸ್ಮಾರ್ಟ್ ಪೀಕ್ ಕ್ಯಾಪ್ ನೀಡುವ ಕುರಿತು ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ. ಕಾನ್‌ಸ್ಟೆಬಲ್‌ಗಳು ಆರಂಭದಲ್ಲಿ ಟರ್ಬನ್ ಮಾದರಿಯ ಟೋಪಿ ಬಳಸುತ್ತಿದ್ದರು. ಪ್ರಸ್ತುತ ಬಳಸುತ್ತಿರುವ ಟೋಪಿಯನ್ನು ಆರ್.ಗುಂಡೂರಾವ್ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಆರಂಭಿಸಲಾಗಿತ್ತು. ಹಳೆ ಮಾದರಿಯ ಟೋಪಿ ಬಳಕೆಯಿಂದ ಕಾನ್‌ಸ್ಟೆಬಲ್‌ಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಪ್ರತಿಭಟನೆ, ರ್‍ಯಾಲಿ ವೇಳೆ ಈ ಟೋಪಿ ಧರಿಸಿ, ಕರ್ತವ್ಯ ನಿರ್ವಹಣೆ ಕಷ್ಟ. ಟೋಪಿ ಕೆಳಕ್ಕೆ ಬಿದ್ದರೆ ಸಮವಸ್ತ್ರಕ್ಕೆ ಅಗೌರವ ತೋರಿದಂತಾಗುತ್ತದೆ. ಆದ್ದರಿಂದ, ಹಳೆ ಮಾದರಿಯ ಟೋಪಿ ಬದಲಿಗೆ ಗಟ್ಟಿಯಾಗಿ ನಿಲ್ಲುವಂತಹ ಟೋಪಿ ನೀಡಿದರೆ ಉತ್ತಮ ಎಂದು ಕಾನ್‌ಸ್ಟೆಬಲ್‌ಗಳು ಕೋರಿದ್ದರು.

‘ತಮಿಳುನಾಡು, ಆಂಧ್ರಪ್ರದೇಶ, ಕೇರಳ ರಾಜ್ಯಗಳ ಕಾನ್‌ಸ್ಟೆಬಲ್‌ಗಳು ಪೀಕ್ ಕ್ಯಾಪ್‌ಗಳನ್ನು ಬಳಸುತ್ತಿದ್ದಾರೆ. ರಾಜ್ಯದಲ್ಲೂ ಅದೇ ಮಾದರಿ ಟೋಪಿಯನ್ನು ವಿತರಿಸುವ ಕುರಿತು ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು’ ಎಂದು ಮೂಲಗಳು ತಿಳಿಸಿವೆ.

2018ರಲ್ಲೇ ಚರ್ಚೆ

‘ಪೊಲೀಸರು ಬಳಸುತ್ತಿರುವ ಟೋಪಿ ಬದಲಾವಣೆ ಸಂಬಂಧ 2018ರಲ್ಲೂ ಚರ್ಚೆ ನಡೆದಿತ್ತು. ಆಗ ಪೊಲೀಸರಿಗೆ ವಿತರಣೆ ಮಾಡಲು ಸಾವಿರಾರು ಸ್ಲೋಚ್ ಹ್ಯಾಟ್‌ಗಳು ಸಿದ್ಧಗೊಂಡಿದ್ದವು. ಅಂತಿಮ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗಿರಲಿಲ್ಲ. ಟೋಪಿ ಬದಲಾವಣೆ ಮಾಡುವಂತೆ ಕಾನ್‌ಸ್ಟೆಬಲ್‌ಗಳು ಮತ್ತೆ ಮನವಿ ಸಲ್ಲಿಸಿದ್ದರಿಂದ ಶುಕ್ರವಾರ ನಡೆಯುವ ಸಭೆಯಲ್ಲಿ ಒಮ್ಮತದ ತೀರ್ಮಾನ ತೆಗೆದುಕೊಳ್ಳಲಾಗುವುದು’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಬೀದಿ ನಾಯಿಗಳ ದಾಳಿ: ಬಾಲಕ ಬಲಿ

ಪ್ರಜಾವಾಣಿ ವಾರ್ತೆ

ಲಿಂಗಸುಗೂರು (ರಾಯಚೂರು ಜಿಲ್ಲೆ): ಪುರಸಭೆ ವ್ಯಾಪ್ತಿಯ ಕಸಬಾ ಲಿಂಗಸುಗೂರು ಗ್ರಾಮದಲ್ಲಿ ಶನಿವಾರ ಸಂಜೆ ಬೀದಿ ನಾಯಿಗಳು ನಡೆಸಿದ ದಾಳಿಯ ಪರಿಣಾಮ ಐದು ವರ್ಷದ ಬಾಲಕ ಸಿದ್ದು ಗುಡಿಹಾಳ ಮೃತಪಟ್ಟಿದ್ದಾನೆ.

ತಾಯಿ ಶೌಚಕ್ಕೆ ತೆರಳಿದ್ದಾರೆ ಎಂದು ಭಾವಿಸಿ ಸಿದ್ದು ಅಲ್ಲಿಗೆ ನಡೆದುಕೊಂಡು ಹೋಗುತ್ತಿದ್ದ. ಶೌಚಾಲಯದ ಹತ್ತಿರ ಆಗ ತಾನೇ ಮರಿಗಳಿಗೆ ಜನ್ಮ ನೀಡಿದ್ದ ನಾಯಿಯೊಂದು ಬಾಲಕ ತನ್ನ ಮರಿಗಳಿಗೆ ಏನಾದರೂ ಮಾಡಿಯಾನು ಎಂದು ಬೊಗಳಲು ಪ್ರಾರಂಭಿಸಿದೆ. ಸುತ್ತಮುತ್ತ ಇದ್ದ ಹತ್ತಾರು ನಾಯಿಗಳು ಏಕಾಏಕಿಯಾಗಿ ಬಾಲಕ ಸಿದ್ದು ಮೇಲೆ ದಾಳಿ ನಡೆಸಿ ಕುತ್ತಿಗೆ ಸೇರಿ ಎಲ್ಲೆಂದರಲ್ಲಿ ಕಚ್ಚಿ ಎಳೆದಾಡಿ ಭೀಕರವಾಗಿ ಗಾಯಗೊಳಿಸಿವೆ.

ಬಾಲಕನ ಕಿರುಚಾಟ, ನಾಯಿಗಳ ಕೂಗಾಟ ಕೇಳಿ ಹತ್ತಿರದಲ್ಲಿದ್ದ ಜನ ಓಡಿ ಬಂದು ನಾಯಿಗಳನ್ನು ಓಡಿಸಿ ರಕ್ತದ ಮಡುವಿನಲ್ಲಿದ್ದ ಬಾಲಕನನ್ನು ಬಾಗಲಕೋಟೆಯ ಖಾಸಗಿ ಆಸ್ಪತ್ರೆಗೆ ದಾಖಲಿಸಿದರು. ಅಷ್ಟರಲ್ಲಿ ಬಾಲಕನ ಪ್ರಾಣ ಹೋಗಿತ್ತು. ಮಗನ ಸಾವಿನಿಂದ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು.



ವಿದ್ಯಾರಣ್ಯಪುರದ 'ಡಯಾಲೈಫ್' ಮಧುಮೇಹ ಕೇಂದ್ರದ ಡಾ. ಗುರುಪ್ರಸಾದ್ ಉಡುಪ (ಮಧ್ಯದಲ್ಲಿ) ಅವರಿಗೆ ಇತ್ತೀಚೆಗೆ 'ಟ್ರಯಲ್ ಬ್ಲೇಜಿಂಗ್ ಇಂಡಿಯನ್ ಡಯಾಬಿಟೀಸ್ ಕೇರ್ ಲೀಡರ್ಸ್' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜೈಪುರದ ರಾಜಸ್ಥಾನ್ ಹಾಸ್ಪಿಟಲ್‌ನ ಅರವಿಂದ ಗುಪ್ತ, ನಾಗಪುರದ ಸುನೀಲ್ ಡಯಾಬಿಟೀಸ್ ಕೇರ್ ಅಂಡ್ ರಿಸರ್ಚ್ ಸಂಸ್ಥೆಯ ಡಾ.ಸುನೀಲ್ ಎಸ್ ಗುಪ್ತ ಹಾಜರಿದ್ದರು.

'ಜಿಬಿಜಿಬಿಯಿಂದ ಇನ್ನಷ್ಟು ಭ್ರಷ್ಟಾಚಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ'ಯು (ಜಿಬಿಜಿಬಿ) ಸಂವಿಧಾನದ 74ನೇ ತಿದ್ದುಪಡಿಯನ್ನು ಜಾರಿಗೆ ತರುವುದನ್ನು ತಪ್ಪಿಸಲು ಮತ್ತು ಭ್ರಷ್ಟಾಚಾರವನ್ನು ಮತ್ತಷ್ಟು ಹೆಚ್ಚಿಸಲು ಸರ್ಕಾರ ಮಾಡುತ್ತಿರುವ ಮತ್ತೊಂದು ಪ್ರಯತ್ನವಾಗಿದೆ. ಈಗಿರುವ ವ್ಯವಸ್ಥೆಯ ವಿಫಲವಾಗಿದೆ ಎಂದು ಜನರಿಗೆ ಸುಳ್ಳು ಹೇಳಲಾಗುತ್ತಿದೆ. ಏಕೆಂದರೆ ಆ ವ್ಯವಸ್ಥೆ ಸಂಪೂರ್ಣವಾಗಿ ಎಂದಿಗೂ ಜಾರಿಯೇ ಆಗಿಲ್ಲ' ಎಂದು 'ಸಿಟಿಜನ್ಸ್ ಅಜೆಂಡಾ ಫಾರ್ ಬೆಂಗಳೂರು' ಸಂಚಾಲಕ ಸಂದೀಪ್ ಅನಿರುದ್ಧನ್ ಅಭಿಪ್ರಾಯಪಟ್ಟರು.



ಸಂದೀಪ್ ಅನಿರುದ್ಧನ್

'ನಗರದ ಆಡಳಿತದಲ್ಲಿ ಮೇಯರ್ ಹೊಂದಿರುವ ವಿಕೇಂದ್ರೀಕರಣ ಹಾಗೂ ಸ್ವಾಯತ್ತತೆ ಎಂದು ಜಾರಿಯಾಗಿದೆ? ಎಲ್ಲ ಸಂಸ್ಥೆಗಳು ನಗರದ ಆಡಳಿತಕ್ಕೆ ಒಳಪಟ್ಟು, ಉತ್ತರದಾಯಿತ್ವವನ್ನು ಎಂದು ಹೊಂದಿದ್ದವು? ನಗರದ ಮಾಸ್ಟರ್‌ಪ್ಲಾನ್ ರೂಪಿಸಲು ಮೆಟ್ರೊಪಾಲಿಟನ್ ಯೋಜನಾ ಸಮಿತಿಗೆ (ಎಂಪಿಸಿ) ಯಾವಾಗ ಅನುಮತಿ ನೀಡಲಾಯಿತು? ಸಂವಿಧಾನದ 74ನೇ ತಿದ್ದುಪಡಿಯಂತೆ ವಾರ್ಡ್ ಕಮಿಟಿಗಳಿಗೆ ಅಧಿಕಾರ ನೀಡಲಾಯಿತೆ? ಪ್ರದೇಶ ಸಭೆಗಳನ್ನು ರಚಿಸಲಾಯಿತೆ' ಎಂದು ಪ್ರಶ್ನಿಸಿದರು.



'ಈ ಎಲ್ಲ ಪ್ರಶ್ನೆಗಳಿಗೆ ಇಲ್ಲ ಎಂಬುದೇ ಉತ್ತರವಾಗಿದ್ದು, ಸಾಂವಿಧಾನಿಕ ನಿಬಂಧನೆಗಳನ್ನು ಜಾರಿಗೆ ತರಲಾಗಿಲ್ಲ. ಆದ್ದರಿಂದಲೇ ಕಳಪೆ ಯೋಜನೆ ಹಾಗೂ ಕಳಪೆ ಆಡಳಿತವನ್ನು ನಾವು ಹೊಂದಿದ್ದೇವೆ. ನಗರವನ್ನು ವಿಭಜಿಸುವುದರಿಂದ ಮತ್ತಷ್ಟು ಗೊಂದಲಗಳು ಸೃಷ್ಟಿಯಾಗುತ್ತವೆಯೇ ವಿನಾ, ಅಭಿವೃದ್ಧಿ ಸಾಧ್ಯವಿಲ್ಲ. ವಿಭಜನೆಯ ಪರದೆಯ ಹಿಂದೆ ಬೃಹತ್ ಭ್ರಷ್ಟಾಚಾರವನ್ನು ಮುಂದುವರಿಸಬಹುದಷ್ಟೇ' ಎಂದರು.

'ಸಿ.ಎಂ ನೇತೃತ್ವ ಬದಲಿಗೆ ಸಚಿವಾಲಯ ಆಗಲಿ'



ಈಗ ಅಸ್ತಿತ್ವದಲ್ಲಿರುವ ಬಿಬಿಎಂಪಿಗೆ ಪರ್ಯಾಯವಾಗಿ ಏಳಕ್ಕಿಂತಲೂ ಹೆಚ್ಚಿಲ್ಲದಂತೆ ನಗರ ಪಾಲಿಕೆಗಳನ್ನು ರಚಿಸುವ ಅವಕಾಶ ಮಸೂದೆಗೆ ಇದೆ. ಮಹಾನಗರ ಆಡಳಿತದ ವಿಕೇಂದ್ರೀಕರಣ, ಪಾರದರ್ಶಕತೆ, ಜನಸ್ನೇಹಿ ಮತ್ತು ಆಡಳಿತವನ್ನು ಇನ್ನಷ್ಟು ಉತ್ತರದಾಯಿ ಆಗಿಸಲು ಸಾಧ್ಯವಾಗಿತ್ತು. ಮುಖ್ಯಮಂತ್ರಿಯವರು ಜಿಬಿಎ ನೇತೃತ್ವ ವಹಿಸುವುದರಿಂದ ಕಾರ್ಯನೀತಿ ಅನುಷ್ಠಾನ, ಅಭಿವೃದ್ಧಿ ವಿಳಂಬವಾಗುತ್ತದೆ. ಹಾಗಾಗಿ ಮುಖ್ಯಮಂತ್ರಿ ಬದಲಿಗೆ ಪ್ರತ್ಯೇಕ ಸಚಿವಾಲಯ ಮತ್ತು ಸಚಿವರನ್ನು ಆಯ್ಕೆ ಮಾಡಿದರೆ ಆಡಳಿತದಲ್ಲಿ ವೇಗ ಪಡೆದು ಬಹುಬೇಗ ಅಭಿವೃದ್ಧಿ ಕಾಣಬಹುದು.

ಮೆಹಬೂಬ ಜಮಾದಾರ, ಬೆಂಗಳೂರು

'ಮೊದಲು ಚುನಾವಣೆ ಮಾಡಿ'



'ಈ ಹಿಂದೆ ಸಿಂಗಾಪುರ ಮಾಡುವೆ ಅಂತ ಬೊಬ್ಬೆ ಹೊಡೆದಿದ್ದು ಠುಸ್ ಆಯಿತು. 198 ವಾರ್ಡ್ ಆಗಲಿ ಎಂದು ಹಳ್ಳಿಗಳನ್ನು ಸೇರಿಸಿಕೊಂಡು ಪಾಲಿಕೆ ಗೆದ್ದವರು ಏನು ಅಭಿವೃದ್ಧಿ ಮಾಡಿದರು ಎಂದು ಬೆಂಗಳೂರು ಜನತೆ ಈಗಾಗಲೇ ನೋಡಿದ್ದಾರೆ. ಸರ್ಕಾರದ ಸಚಿವರು ಹಾಗೂ ಶಾಸಕರು ನಗರದ ಜನತೆಗೆ ಕನಿಷ್ಠ ಮೂಲ ಸೌಲಭ್ಯಗಳನ್ನೂ ಕೊಡಲು ಸಾಧ್ಯವಾಗಿಲ್ಲ. ಸದ್ಯಕ್ಕೆ ಪಾಲಿಕೆ ಸದಸ್ಯರು ಇಲ್ಲದೆ ಇರುವುದರಿಂದ ಶಾಸಕರು ದರ್ಬಾರ್ ಮಾಡಲು ಅವರಿಗೂ ಅನುದಾನವಿಲ್ಲ. ಯಾರ ಉದ್ಧಾರ ಮಾಡಲು 'ಗ್ರೇಟರ್ ಬೆಂಗಳೂರು' ಎಂಬುದು ಅರ್ಥ ಆಗುತ್ತಿಲ್ಲ. ಮೊದಲು ಪಾಲಿಕೆಗೆ ಚುನಾವಣೆ ಮಾಡಿ. ಈಗ, ಆಗ ಅಂತ ಚುನಾವಣೆ ಮಾಡದೇ ಕಾಲ ತಳ್ಳುವುದು ಬಿಟ್ಟು ಬೆಂಗಳೂರು ಜನರ ಭಾವನೆ ಅರ್ಥ ಮಾಡಿಕೊಳ್ಳಿ.

ಎಂ. ಶ್ರೀನಿವಾಸ್ ಕುಮಾರ್, ಟಿ ದಾಸರಹಳ್ಳಿ

'ನಗರದಲ್ಲಿ ಅಭಿವೃದ್ಧಿ ಮೊದಲಾಗಲಿ'



ನಗರದಲ್ಲಿ ರಸ್ತೆಗಳು ಗುಂಡಿಗಳಿಂದ ಹಾಳಾಗಿದ್ದು, ವಿದ್ಯುತ್, ನೀರು, ಹಾಲಿನ ದರ ಹೆಚ್ಚಿಸಿ ಸಾರ್ವಜನಿಕರಿಗೆ ನೆಮ್ಮದಿಯಿಂದ ಜೀವನ ನಡೆಸಲು ಈ ಸರ್ಕಾರ ಬಿಡುತ್ತಿಲ್ಲ. ದಯವಿಟ್ಟು ಮೊದಲು ಜನರಿಗೆ ಅನುಕೂಲವಾಗುವ ಒಳ್ಳೆಯ ರಸ್ತೆ ಮಾಡಿ. ಯಾವುದೇ ಕಾರಣಕ್ಕೂ 'ಗ್ರೇಟರ್ ಬೆಂಗಳೂರು' ಬೇಡ. ತೆರಿಗೆ ವಸೂಲಿ ಮಾಡುತ್ತಿರುವ ಸರ್ಕಾರ ಮೊದಲು ಅಭಿವೃದ್ಧಿ ಮಾಡಲಿ, ಆಮೇಲೆ 'ಗ್ರೇಟರ್ ಬೆಂಗಳೂರು' ಆಗಲಿ.

ಎಂ. ಲಿಂಗರಾಜು ಗೌಡ, ಮಲ್ಲತಹಳ್ಳಿ

'ಬಿಬಿಎಂಪಿ ಒಡೆಯುವುದು ಸರಿಯಲ್ಲ'



ಬೆಂಗಳೂರಲ್ಲಿ ಜೀವನ ನಡೆಸಲು ಮಧ್ಯಮ ವರ್ಗ ತುಂಬ ಕಷ್ಟಪಡುತ್ತಿದೆ. ಇಂತಹ ಸಂದರ್ಭದಲ್ಲಿ 'ಗ್ರೇಟರ್ ಬೆಂಗಳೂರು' ಹೆಸರಲ್ಲಿ ಈಗಿರುವ ಮಹಾನಗರ ಪಾಲಿಕೆಯನ್ನು ಒಡೆದು ಹಲವು ಪಾಲಿಕೆಗಳನ್ನು ರಚನೆ ಮಾಡಲು ಹೊರಟಿರುವುದು ಸರಿಯಲ್ಲ. ಈ ರೀತಿ ಮಾಡಿದಾಗ ತೆರಿಗೆಯ ಮೇಲೆ ಯಾವುದೇ ಕಡಿವಾಣ ಇರುವುದಿಲ್ಲ. ಪ್ರತಿಯೊಂದಕ್ಕೂ ತೆರಿಗೆಯು ಹೆಚ್ಚಾಗುತ್ತದೆ. ಇದರಿಂದ, ಮನೆಗಳ ಬಾಡಿಗೆ ಹೆಚ್ಚಾಗುತ್ತದೆ. ನೀರಿಗೆ ಪ್ರತ್ಯೇಕ ತೆರಿಗೆ, ಕಸ ವಿಲೇವಾರಿಗೆ ಪ್ರತ್ಯೇಕ ತೆರಿಗೆ ಹಾಕಿ ಜನಸಾಮಾನ್ಯರನ್ನು ಸುಲಿಗೆ ಮಾಡಲಾಗುತ್ತದೆ. ಇಂತಹ ವ್ಯವಸ್ಥೆಯ ಅಗತ್ಯವಿಲ್ಲ.

ಎಚ್.ಎಸ್. ಸನತ್ ಕುಮಾರ್, ಚಂದಾಪುರ

ಈದ್ ಉಲ್ ಫಿತ್ರ್: ಕೈಗೆ ಕಪ್ಪು ಪಟ್ಟಿ ಧರಿಸಿ ಸಾಮೂಹಿಕ ಪ್ರಾರ್ಥನೆ

ಪ್ರಾರ್ಥನೆಯ ಬೆಳಕು ಸಡಗರದ ಹೊನಲು



ಪ್ರಜಾವಾಣಿ ವಾರ್ತೆ

ಬೆಂಗಳೂರು: ರಂಜಾನ್ ಮಾಸಾಚರಣೆಯ ಅಂತಿಮ ದಿನವಾದ ಸೋಮವಾರ ನಗರದಲ್ಲಿ ಮುಸ್ಲಿಮರು 'ಈದ್ ಉಲ್ ಫಿತ್ರ್' ಹಬ್ಬವನ್ನು ಕಪ್ಪು ಪಟ್ಟಿ ಧರಿಸಿ ಆಚರಿಸಿದರು. ಕೇಂದ್ರ ಸರ್ಕಾರ ಜಾರಿಗೊಳಿಸಲು ಉದ್ದೇಶಿಸಿರುವ ವಕ್ಫ್ ತಿದ್ದುಪಡಿ ಮಸೂದೆಯನ್ನು ವಿರೋಧಿಸಿ ಜನರು ಪ್ರಾರ್ಥನೆಯಲ್ಲಿ ಭಾಗಿಯಾದರು.

ಒಂದು ತಿಂಗಳ ಉಪವಾಸ ಆಚರಿಸಿದ್ದ ಮುಸ್ಲಿಮರು, ಚಂದ್ರದರ್ಶನದ ಬಳಿಕ ಆಹಾರ ಸ್ವೀಕರಿಸಿ ವ್ರತ ಅಂತ್ಯಗೊಳಿಸಿದರು. ಹೊಸ ಬಟ್ಟೆ ಧರಿಸಿ ಸಮೀಪದ ಈದ್ಗಾ ಮೈದಾನಗಳು, ಮಸೀದಿಗಳಿಗೆ ತೆರಳಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ನಂತರ ಸಿಹಿ ಹಂಚಿ, ಶುಭಾಶಯ ವಿನಿಮಯ ಮಾಡಿಕೊಂಡರು.

ಲೋಕ ಕಲ್ಯಾಣಕ್ಕೆ ಅಲ್ಲಾಹುವಿನಲ್ಲಿ ಪ್ರಾರ್ಥನೆ ಸಲ್ಲಿಸಿದ ಧರ್ಮ ಗುರುಗಳು, ಹಬ್ಬದ ಸಂದೇಶ ನೀಡಿದರು. ಸಾವಿರಾರು ಮಂದಿ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗಿಯಾದರು.

ಚಾಮರಾಜಪೇಟೆಯ ಈದ್ಗಾ ಮೈದಾನ, ವಿಲ್ಸನ್ ಗಾರ್ಡನ್‌ನ ರೆಡ್ ಫೋರ್ಟ್ ಮೈದಾನ, ಶಿವಾಜಿನಗರ, ಜೆ.ಪಿ.ಪಾರ್ಕ್ ಆಟದ ಮೈದಾನ ಹಾಗೂ ವಿವಿಧ ಮಸೀದಿಗಳಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಯಿತು.

ಜಾಮಿಯಾ ಮಸೀದಿಯ ಮೌಲಾನಾ ಮಕ್ಸೂದ್ ಇಮ್ರಾನ್ ನೇತೃತ್ವದಲ್ಲಿ ನಡೆದ ಪ್ರಾರ್ಥನೆಯಲ್ಲಿ ಸಚಿವ ಜಮೀರ್ ಅಹಮದ್ ಖಾನ್, ಅವರ ಪುತ್ರ ಝೈದ್ ಖಾನ್ ಸೇರಿದಂತೆ ಸಾವಿರಾರು ಜನರು ಭಾಗಿಯಾಗಿದ್ದರು.

ಸಾಮೂಹಿಕ ಪ್ರಾರ್ಥನೆಯ ಕಾರಣ ವಿವಿಧೆಡೆ ವಾಹನಗಳ ಸಂಚಾರ ಮಾರ್ಗವನ್ನು ಬದಲಿಸಲಾಗಿತ್ತು. ನಗರದ ಮಸೀದಿ, ದರ್ಗಾ ಹಾಗೂ ಮದರಸಾಗಳಿಗೆ ವಿದ್ಯುತ್ ಅಲಂಕಾರ ಮಾಡಲಾಗಿತ್ತು. ವಿದ್ಯುತ್ ಬೆಳಕಿನಲ್ಲಿ ಮಸೀದಿಗಳು ಕಂಗೊಳಿಸಿದವು.

ನಗರದ ಮೈಸೂರು ರಸ್ತೆಯ ಈದ್ಗಾ ಮೈದಾನದಲ್ಲಿ ಸಾವಿರಾರು ಮುಸ್ಲಿಮರು ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡರು. ಬಳಿಕ ಕುರಾನ್ ಪಠಣ ನಡೆಯಿತು.

ಒಂದು ತಿಂಗಳು ಉಪವಾಸ ಮಾಡಿದ್ದ ಅವರು ತಮ್ಮ ಗಳಿಕೆಯಲ್ಲಿ ಬಡವರಿಗೆ ದಾನ ಮಾಡುವ ಸಂಪ್ರದಾಯವನ್ನು ಪಾಲಿಸಿದರು. ಬಡವರಿಗೆ ಹಣ್ಣುಹಂಪಲು, ಧಾನ್ಯಗಳನ್ನು ದಾನ ನೀಡಲಾಯಿತು.

ಮನೆಯಲ್ಲಿಯೂ ಹಬ್ಬದ ಸಂಭ್ರಮ ಮನೆ ಮಾಡಿತ್ತು. ಎಲ್ಲರೂ ಹೊಸ ಬಟ್ಟೆ ತೊಟ್ಟು ಸಂಭ್ರಮಿಸಿದರು. ಸಂಬಂಧಿಕರು ಹಾಗೂ ಸ್ನೇಹಿತರನ್ನು ಮನೆಗೆ ಆಹ್ವಾನಿಸಿ, ಹಬ್ಬದ ಶುಭಾಶಯ ಕೋರಿದರು.



ಬೆಂಗಳೂರು– ಮೈಸೂರು ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಸೋಮವಾರ ಈದ್ ಉಲ್ ಫಿತ್ರ್ ಅಂಗವಾಗಿ ಮುಸ್ಲಿಂ ಸಮುದಾಯದವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು
ಚಿತ್ರಗಳು: ರಂಜು ಪಿ.



ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಸಚಿವ ಜಮೀರ್ ಅಹಮದ್ ಖಾನ್ ಮತ್ತು ಮಗ ಝೈದ್ ಖಾನ್ ಅವರು ವಕ್ಫ್ ತಿದ್ದುಪಡಿ ಮಸೂದೆ ವಿರೋಧಿಸಿ ತಮ್ಮ ಕೈಗಳಿಗೆ ಕಪ್ಪು ಪಟ್ಟಿ ಧರಿಸಿ ಭಾಗವಹಿಸಿದ್ದರು.
ಚಿತ್ರ: ಕಿಶೋರ್ ಕುಮಾರ್ ಬೋಳಾರ್

'ವಕ್ಫ್ ಕಾಯ್ದೆ ಬ್ರಿಟಿಷ್ ಕಾಲದ್ದು'

'ವಕ್ಫ್ ಕಾಯ್ದೆ ಈಗಿನದ್ದಲ್ಲ, ಬ್ರಿಟಿಷ್ ಕಾಲದಿಂದಲೂ ಇದೆ. ಕಾಯ್ದೆಗೆ ತಿದ್ದುಪಡಿ ತರಬಾರದು ಎಂದು ದೇಶದಾದ್ಯಂತ ಮುಸ್ಲಿಂ ಸಮುದಾಯದವರು ಕೈಗೆ ಕಪ್ಪು ಪಟ್ಟಿ ಧರಿಸಿ ಶಾಂತಿಯುತವಾಗಿ ಪ್ರತಿಭಟನೆ ಮಾಡಿದ್ದೇವೆ' ಎಂದು ಸಚಿವ ಜಮೀರ್ ಅಹಮದ್ ಹೇಳಿದರು.

'ಪ್ರತಿ ವರ್ಷ ಪ್ರಾರ್ಥನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬರುತ್ತಿದ್ದರು. ಈ ಬಾರಿ ಅನಾರೋಗ್ಯದ ಕಾರಣದಿಂದ ಅವರು ಪ್ರಾರ್ಥನೆಯಲ್ಲಿ ಭಾಗಿಯಾಗಲು ಸಾಧ್ಯವಾಗಿಲ್ಲ. ಗುರುಗಳಾದ ಸಿದ್ದರಾಮಯ್ಯ ಅವರಿಗೆ ಆಯುಸ್ಸು, ಆರೋಗ್ಯ ನೀಡಲಿ ಎಂದು ಪ್ರಾರ್ಥಿಸಲಾಗಿದೆ' ಎಂದು ತಿಳಿಸಿದರು.

ಆರೋಪಿಯಿಂದ ಸ್ಫೋಟಕ್ಕೆ ಸಂಚು?

ಹೋಟೆಲ್ ಕಾರ್ಮಿಕನ ಬ್ಯಾಗ್‌ನಲ್ಲಿ ಗ್ರೆನೇಡ್ ಪತ್ತೆ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಟೆಲ್‌ನಲ್ಲಿ ಕೆಲಸಕ್ಕಿದ್ದ ಕಾರ್ಮಿಕನ ಬ್ಯಾಗ್‌ನಲ್ಲಿ ಹ್ಯಾಂಡ್ ಗ್ರೆನೇಡ್ ಸಿಕ್ಕಿದ ಪ್ರಕರಣದ ತನಿಖೆ ನಡೆಸುತ್ತಿರುವ ಕೇಂದ್ರ ತನಿಖಾ ಸಂಸ್ಥೆಗಳ ಅಧಿಕಾರಿಗಳು, ಆರೋಪಿಯನ್ನು ಕೆಲವು ಸ್ಥಳಗಳಿಗೆ ಕರೆದೊಯ್ದು ವಿಚಾರಣೆ ನಡೆಸಿದ್ದಾರೆ ಎಂದು ಗೊತ್ತಾಗಿದೆ.

ಬ್ಯಾಗ್‌ನಲ್ಲಿ ಗ್ರೆನೇಡ್ ಪತ್ತೆಯಾದ ಕಾರಣ ಮಾರ್ಚ್ 22ರಂದು ಆರೋಪಿ ಅಬ್ದುಲ್ ರೆಹಮಾನ್‌ನನ್ನು ಸಂಪಿಗೆಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದರು. ರಾಜ್ಯ ಮತ್ತು ಕೇಂದ್ರ ಗುಪ್ತಚರ, ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಅಧಿಕಾರಿಗಳು, ಸಂಪಿಗೆಹಳ್ಳಿ ಪೊಲೀಸರ ವಶದಲ್ಲಿರುವ ಆರೋಪಿ ಬಗ್ಗೆ ಮಾಹಿತಿ ಸಂಗ್ರಹಿಸಿ, ಪ್ರಕರಣದ ತನಿಖೆ ನಡೆಸಿದ್ದರು. ತನಿಖೆ ವೇಳೆ ಕೆಲವು ಅಂಶಗಳು ಬಯಲಾಗಿವೆ.

'ಆರೋಪಿಯನ್ನು ಒಂದು ವಾರ ವಿಚಾರಣೆಗೆ ಒಳಪಡಿಸಲಾಗಿತ್ತು. ಸ್ಥಳವೊಂದರಲ್ಲಿ ಸ್ಫೋಟಕ ಇಡಲು ಸಂಚು ರೂಪಿಸಿದ್ದಾಗಿ ಆರೋಪಿ ಬಾಯ್ಬಿಟ್ಟಿದ್ದಾನೆ' ಎಂದು ಮೂಲಗಳು ಹೇಳಿವೆ.

'ಹೋಟೆಲ್‌ಗೆ ಕೆಲಸಕ್ಕೆ ಸೇರುವುದಕ್ಕೂ ಮೊದಲು ಅರಮನೆ ಮೈದಾನದ ಬಳಿ ಕೆಲಸ ಮಾಡುತ್ತಿದ್ದೆ. ಆಗ ಪರಿಚಯವಾಗಿದ್ದ ವ್ಯಕ್ತಿಯೊಬ್ಬ, ಸ್ಫೋಟಕ ಕೊಟ್ಟಿದ್ದ. ಸಿಗರೇಟ್ ಮಾರಾಟ ಮಾಡುವ ಅಂಗಡಿಯೊಂದರ ಹೆಸರು ಹೇಳಿ, ಅಲ್ಲಿ ಬ್ಯಾಗ್ ಇಡುವಂತೆ ಸೂಚನೆ ನೀಡಿದ್ದ ಎಂಬುದಾಗಿ ಆರೋಪಿ ಹೇಳಿಕೆ ನೀಡಿದ್ದಾನೆ. ಕೆಲವೊಮ್ಮೆ ಗೊಂದಲಕಾರಿ ಹೇಳಿಕೆಯನ್ನೂ ನೀಡಿದ್ದಾನೆ. ಎಲ್ಲ ಆಯಾಮದಲ್ಲೂ ತನಿಖೆ ನಡೆಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಆಟೊ ಚಾಲಕನ ವಿಚಾರಣೆ: ಅರಮನೆ ಮೈದಾನದಿಂದ ಸಂಪಿಗೆಹಳ್ಳಿಯ ಹೋಟೆಲ್ ಬಳಿಗೆ ಆಟೊದಲ್ಲಿ ಆರೋಪಿ ತೆರಳಿದ್ದ. ಆಟೊ ಚಾಲಕನನ್ನು ಕರೆಸಿ, ವಿಚಾರಣೆ ನಡೆಸಲಾಗಿದೆ. ಆರೋಪಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಬಾಡಿಗೆಗೆ ಮಾತ್ರ ತೆರಳಿದ್ದಾಗಿ ಆಟೊ ಚಾಲಕ ತಿಳಿಸಿದ್ದಾನೆ. ಸದ್ಯ ರೆಹಮಾನ್ ಹೇಳಿಕೆ ದಾಖಲಿಸಿಕೊಂಡು, ತನಿಖೆ ಚುರುಕುಗೊಳಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಗ್ರೆನೇಡ್‌ಪತ್ತೆ ಹೇಗೆ?: 'ಥಣಿಸಂದ್ರದ ವೃತ್ತದಲ್ಲಿರುವ ಹೋಟೆಲ್‌ವೊಂದರಲ್ಲಿ ಆರೋಪಿ ಕೆಲಸಕ್ಕೆ ಸೇರಿಕೊಂಡಿದ್ದ. ಹೋಟೆಲ್ ಮಾಲೀಕರು, ಆರೋಪಿಯ ಆಧಾರ್ ಕಾರ್ಡ್ ಕೇಳಿದ್ದರು. ಎರಡು ದಿನವಾದರೂ ಆಧಾರ್ ಕಾರ್ಡ್ ಕೊಟ್ಟಿರಲಿಲ್ಲ. ಇದರಿಂದ ಅನುಮಾನಗೊಂಡ ಮಾಲೀಕರು, ಆರೋಪಿಯ ಬ್ಯಾಗ್ ಪರಿಶೀಲನೆ ನಡೆಸಿದ್ದರು. ಬ್ಯಾಗ್‌ನಲ್ಲಿ ಚೆಂಡಿನ ಆಕಾರದ ವಸ್ತು ಪತ್ತೆಯಾಗಿತ್ತು. ಅದಕ್ಕೆ ಎರಡು ಬತ್ತಿಗಳಿದ್ದವು. ತಕ್ಷಣವೇ ಮಾಲೀಕರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಪೊಲೀಸರು ಬಂದು ಪರಿಶೀಲನೆ ನಡೆಸಿದಾಗ, ಅದು ಸ್ಫೋಟಕ ವಸ್ತು ಎಂಬುದು ಪತ್ತೆಯಾಗಿತ್ತು. ಬಳಿಕ ಬಾಂಬ್ ನಿಷ್ಕ್ರಿಯದಳದ ಸಿಬ್ಬಂದಿ ಸುರಕ್ಷಿತ ಸ್ಥಳದಲ್ಲಿ ಸ್ಫೋಟಕ ವಸ್ತುವನ್ನು ನಾಶಪಡಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಕೋಗಿಲು ಮುಖ್ಯರಸ್ತೆಯ ಬೆಳ್ಳಹಳ್ಳಿ ನಿವಾಸಿ ಅಬ್ದುಲ್ ರೆಹಮಾನ್, ಈ ಮೊದಲು ಬೆಳ್ಳಹಳ್ಳಿಯಲ್ಲಿ ಪರಿಚಿತರೊಬ್ಬರ ಬಳಿ ಕಾರ್ಪೆಂಟರ್ ಕೆಲಸ ಮಾಡುತ್ತಿದ್ದ. ಬಳಿಕ ಕೆಲಸ ಬಿಟ್ಟು, ಚಿಂದಿ ಆಯುತ್ತಿದ್ದ. ತಾಯಿ ಮತ್ತು ಮಲ ತಂದೆ ಜತೆಗೆ ವಾಸವಾಗಿದ್ದ. ನಾಲ್ಕೈದು ತಿಂಗಳ ಹಿಂದೆ ಪೋಷಕರ ಜತೆ ಜಗಳ ಮಾಡಿಕೊಂಡು ಮನೆ ಬಿಟ್ಟು ಹೊರಬಂದಿದ್ದ. ಹೋಟೆಲ್‌ನಲ್ಲಿ ಕೆಲಸಕ್ಕೆ ಸೇರಿದ್ದ' ಎಂದು ಮೂಲಗಳು ಹೇಳಿವೆ.

ಮುಖ್ಯಾಂಶಗಳು

- ಗೊಂದಲಕಾರಿ ಹೇಳಿಕೆ ನೀಡಿದ ಆರೋಪಿ
- ಹೋಟೆಲ್ ಕೆಲಸಕ್ಕೆ ಸೇರುವ ಮುನ್ನವೇ ಸ್ಫೋಟಕ ವಸ್ತು ಸಾಗಣೆ
- ಆಧಾರ್ ಕಾರ್ಡ್ ಕೊಡದ ಕಾರಣ ಮೂಡಿದ ಅನುಮಾನ

ಅಪರಾಧ ಸುದ್ದಿ

ಉದ್ಯಮಿಯ ಸುಲಿಗೆ: ಶಿಕ್ಷಕಿ ಸೇರಿ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಉದ್ಯಮಿಯೊಬ್ಬರನ್ನು ಸುಲಿಗೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಖಾಸಗಿ ಶಾಲೆ ಶಿಕ್ಷಕಿ ಸೇರಿ ಮೂವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಉದ್ಯಮಿ ರಾಕೇಶ್ ವೈಷ್ಣವ್ ಅವರ ದೂರಿನ ಮೇರೆಗೆ ಶಿಕ್ಷಕಿ ಶ್ರೀದೇವಿ ರೂಡಗಿ, ಪ್ರಿಯಕರ ಸಾಗರ್ ಮೋರೆ ಮತ್ತು ರೌಡಿ ಶೀಟರ್ ಗಣೇಶ್ ಕಾಳೆಯನ್ನು ಬಂಧಿಸಿದ್ದಾರೆ. ಗಣೇಶ್ ವಿರುದ್ಧ ವಿವಿಧ ಠಾಣೆಗಳಲ್ಲಿ 9 ಪ್ರಕರಣಗಳು ದಾಖಲಾಗಿವೆ.

ಮಹಾಲಕ್ಷ್ಮಿ ಲೇಔಟ್‌ನ ಇಸ್ಕಾನ್ ಸಮೀಪದ ಶಾಲೆಯೊಂದರಲ್ಲಿ ಶ್ರೀದೇವಿ ಶಿಕ್ಷಕಿಯಾಗಿದ್ದು, ರಾಕೇಶ್ ಅವರ ಮೂವರು ಮಕ್ಕಳು ಇದೇ ಶಾಲೆಯಲ್ಲಿ ಓದುತ್ತಿದ್ದರು. ಮಕ್ಕಳನ್ನು ಬಿಡಲು ಹಾಗೂ ಕರೆದುಕೊಂಡು ಹೋಗಲು ಬರುತ್ತಿದ್ದ ರಾಕೇಶ್ ಹಾಗೂ ಶಿಕ್ಷಕಿ ನಡುವೆ ಸ್ನೇಹವಾಗಿತ್ತು. ಇಬ್ಬರೂ ಸಲುಗೆಯಿಂದ ಇದ್ದರು. ಶ್ರೀದೇವಿ ಕೇಳಿದಾಗ ರಾಕೇಶ್ ಹಣ ನೀಡುತ್ತಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಹೆಚ್ಚಿನ ಹಣ ಸುಲಿಗೆ ಮಾಡುವ ಉದ್ದೇಶದಿಂದ ಶ್ರೀದೇವಿ, ತನ್ನ ಪ್ರಿಯಕರ ಸಾಗರ್ ಮೋರೆ, ಗಣೇಶ್ ಕಾಳೆ ಜತೆ ಸೇರಿ ರಾಕೇಶ್ ಅವರನ್ನು ಅಪಹರಿಸಿ ಒಂದು ಕೋಟಿ ರೂಪಾಯಿ ನೀಡುವಂತೆ ಬೇಡಿಕೆ ಇಟ್ಟಿದ್ದಾರೆ. ಹಣ ನೀಡದಿದ್ದರೆ ಶಿಕ್ಷಕಿ ಜತೆಗಿನ ಖಾಸಗಿ ಕ್ಷಣದ ವಿಡಿಯೊವನ್ನು ಪತ್ನಿಗೆ ಕಳುಹಿಸುವುದಾಗಿ ಬೆದರಿಸಿದ್ದಾರೆ. ಮಾರ್ಚ್ 18ರಂದು ₹1.90 ಲಕ್ಷ ಪಡೆದು, ಉಳಿದ ಹಣವನ್ನು ಆರು ದಿನಗಳಲ್ಲಿ ನೀಡುವಂತೆ ಬೆದರಿಸಿ ಬಿಟ್ಟು ಕಳುಹಿಸಿದ್ದರು' ಎಂದು ಪೊಲೀಸರು ಹೇಳಿದರು.

ರಾಕೇಶ್ ಅವರು ಸಿಸಿಬಿ ಪೊಲೀಸರಿಗೆ ದೂರು ನೀಡಿದರು. ಪೊಲೀಸರು ಆರೋಪಿಗಳನ್ನು ಬಂಧಿಸಿದ್ದು, ವಿಚಾರಣೆ ನಡೆಸುತ್ತಿದ್ದಾರೆ.

'ಹೆಜ್ಜೆ ಗೆಜ್ಜೆ ಉತ್ಸವ' ನಾಳೆ

ಬೆಂಗಳೂರು: ನಗರದ ಸರ್ಕಾರಿ ಕಲಾ ಕಾಲೇಜಿನಲ್ಲಿ ಬುಧವಾರ ಬೆಳಿಗ್ಗೆ 10.30ಕ್ಕೆ 'ಹೆಜ್ಜೆ ಗೆಜ್ಜೆ' ಮಹಿಳಾ ಜನಪದ ಉತ್ಸವವನ್ನು ಆಯೋಜಿಸಲಾಗಿದೆ.

ಕಾಲೇಜಿನ ಕನ್ನಡ ಸಂಘ ಮತ್ತು ಸಾಂಸ್ಕೃತಿಕ ಸಮಿತಿ ಹಾಗೂ ರಂಗಚಾರಕ ಫೌಂಡೇಷನ್ ಟ್ರಸ್ಟ್ ಸಹಯೋಗದೊಂದಿಗೆ ನಡೆಯಲಿರುವ ಉತ್ಸವವನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಉದ್ಘಾಟಿಸಲಿದ್ದಾರೆ. ಶಾಸಕರಾದ ರಿಜ್ವಾನ್ ಅರ್ಷದ್, ಪುಟ್ಟಣ್ಣ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಜನಪದ ಉತ್ಸವದಲ್ಲಿ ಲಂಬಾಣಿ ಕುಣಿತ, ಕೊಡವರ ಉಮ್ಮತ್ತಾಟ್ ಮತ್ತು ಓಲಗ, ಹಾಲಕ್ಕಿ ಸುಗ್ಗಿ ಕುಣಿತ, ರಂಗ ಕುಣಿತ, ಕೋಲಾಟ, ಡೊಳ್ಳು, ಕಂಸಾಳೆ, ಹೆಜ್ಜೆ ಕುಣಿತ, ತಮಟೆ, ತಂಬೂರಿ ಪದ ಸೇರಿದಂತೆ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.

ಮನೆಗೆ ನುಗ್ಗಿ ಹಲ್ಲೆ ಇಬ್ಬರು ಆಸ್ಪತ್ರೆಗೆ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಡರಹಳ್ಳಿಯ ವಿಘ್ನೇಶ್ವರ ನಗರದ ನಂಜಪ್ಪ ಲೇಔಟ ಮೂರನೇ ಕ್ರಾಸ್‌ನಲ್ಲಿ ಎರಡು ಗುಂಪುಗಳ ಮಧ್ಯೆ ನಡೆದ ಗಲಾಟೆ ಪ್ರಕರಣದ ಸಂಬಂಧ ಐವರು ಆರೋಪಿಗಳನ್ನು ಬಂಧಿಸಿದ್ದಾರೆ.

ಬ್ಯಾಡರಹಳ್ಳಿಯ ಕರಿ ಕಿರಣ್, ದಂಥೆ ಶಿವು, ರೇವಂತ್, ಆ್ಯಪಲ್ ಸಂತು, ಕಾಂಪ್ಲೆಕ್ಸ್ ಅಭಿ ಸೇರಿದಂತೆ ಏಳು ಮಂದಿಯ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಆರೋಪಿಗಳ ಪೈಕಿ ಐವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

27ರಂದು ವೈನ್ ಸ್ಟೋರ್‌ವೊಂದರ ಎದುರು ನಿಂತಿದ್ದ ಅಭಿ ಅಲಿಯಾಸ್ ಚಂದ್ರಶೇಖರ್ ಹಾಗೂ ನವೀನ್ ಕುಮಾರ್ ಎಂಬುವರ ಮೇಲೆ ಆ್ಯಪಲ್ ಸಂತು ಸಹಚರರು ಹಲ್ಲೆ ನಡೆಸಿದ್ದರು. 'ನಮ್ಮನ್ನು ಕಂಡರೆ ಭಯ ಇಲ್ವಾ? ನಮಗೆ ಮರ್ಯಾದೆ ಕೊಡಬೇಕೆಂದು ಎಚ್ಚರಿಸಿದ್ದರು' ಎಂದು ಮೂಲಗಳು ತಿಳಿಸಿವೆ.

'ಮನೆಗೆ ತೆರಳಿದ ಬಳಿಕ ಹಲ್ಲೆಗೊಳಗಾದ ನವೀನ್ ಎಂಬಾತ ಆ್ಯಪಲ್ ಸಂತುಗೆ ಕರೆ ಮಾಡಿ ಅವಾಚ್ಯ ಪದಗಳಿಂದ ನಿಂದನೆ ಮಾಡಿದ್ದ. ಇದರಿಂದ ಆಕ್ರೋಶಗೊಂಡಿದ್ದ ಸಂತು ಹಾಗೂ ದಂಥೆ ಶಿವು ಸಹಚರರು ಶುಕ್ರವಾರ ರಾತ್ರಿ ನವೀನ್ ಮನೆಗೆ ನುಗ್ಗಿ ಹಲ್ಲೆ ನಡೆಸಿದ್ದರು. ಗಲಾಟೆ ಬಿಡಿಸಲು ಬಂದ ನವೀನ್ ತಂದೆ ಹಾಗೂ ಅವರ ಚಿಕ್ಕಮ್ಮ ಲಕ್ಷ್ಮಿ ಅವರ ಮೇಲೂ ಹಲ್ಲೆ ನಡೆಸಿ ಪರಾರಿ ಆಗಿದ್ದರು' ಎಂದು ಪೊಲೀಸರು ಹೇಳಿದರು.

'ಮಾರಕಾಸ್ತ್ರಗಳನ್ನು ತಂದು ಹಲ್ಲೆ ನಡೆಸಲಾಗಿದೆ. ಘಟನೆಯಲ್ಲಿ ನವೀನ್, ಚಂದ್ರಶೇಖರ್ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪೊಲೀಸರು ಹೇಳಿದರು.

ಘಟನೆ ಸಂಬಂಧ ಬ್ಯಾಡರಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪತ್ನಿ ಕೊಲೆ: ಪುಣೆಯಿಂದ ನಗರಕ್ಕೆ ರಾಕೇಶ್ ಕರೆತಂದ ಪೊಲೀಸರು

ಆರೋಪಿಗೆ 14 ದಿನ ನ್ಯಾಯಾಂಗ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿ ಕೊಲೆ ಮಾಡಿ, ಮೃತದೇಹವನ್ನು ಟ್ರಾಲಿ ಬ್ಯಾಗ್‌ನಲ್ಲಿ ತುಂಬಿಟ್ಟಿದ್ದ ಆರೋಪಿ ರಾಕೇಶ್‌ನನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಪುಣೆಯಿಂದ ಆರೋಪಿ ರಾಕೇಶ್‌ನನ್ನು ಭಾನುವಾರ ಕರೆತಂದು, ಕೋರಮಂಗಲದಲ್ಲಿರುವ ನ್ಯಾಯಾಧೀಶರ ನಿವಾಸದಲ್ಲಿ ಹಾಜರುಪಡಿಸಲಾಯಿತು. ವಿಚಾರಣೆ ನಡೆಸಿದ ನ್ಯಾಯಾಧೀಶರು, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೊಪ್ಪಿಸಿ ಆದೇಶಿಸಿದರು. ಸದ್ಯ ಆರೋಪಿಯನ್ನು ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ.



ರಾಕೇಶ್

ಮಾರ್ಚ್ 26ರಂದು ಹುಳಿಮಾವು ವ್ಯಾಪ್ತಿಯ ದೊಡ್ಡಕಮ್ಮನಹಳ್ಳಿಯ ಮನೆಯಲ್ಲಿ ಪತ್ನಿ ಗೌರಿ ಸಾಂಬೇಕರ್ (32) ಕುತ್ತಿಗೆಗೆ ಚಾಕುವಿನಿಂದ ಇರಿದು, ಬಳಿಕ ಮೃತದೇಹವನ್ನು ಟ್ರಾಲಿ ಬ್ಯಾಗ್‌ನಲ್ಲಿ ತುಂಬಿದ್ದ. ಟ್ರಾಲಿ ಸಾಗಿಸುವ ವೇಳೆ ಅದರ ಹ್ಯಾಂಡಲ್ ಕಟ್ ಆಗಿತ್ತು. ಬಳಿಕ ಅದನ್ನು ಮನೆಯಲ್ಲಿ ಬಿಟ್ಟು, ರಾಕೇಶ್ ಕಾರಿನಲ್ಲಿ ಪುಣೆಗೆ ತೆರಳಿದ್ದ.

ಮಾರ್ಚ್ 27ರಂದು ಗೌರಿಯ ಸಹೋದರನಿಗೆ ಕರೆ ಮಾಡಿದ್ದ ರಾಕೇಶ್, ಗೌರಿಯ ಕೊಲೆ ವಿಚಾರ ತಿಳಿಸಿದ್ದ. ಬಳಿಕ ಮಾರ್ಗ ಮಧ್ಯೆ ಫಿನಾಯಿಲ್ ಕುಡಿದು ಅಸ್ವಸ್ಥಗೊಂಡಿದ್ದ. ಬಳಿಕ ಆಸ್ಪತ್ರೆಗೆ ದಾಖಲು ಮಾಡಿದ್ದರು.

ನಂತರ ಪುಣೆ ಪೊಲೀಸರ ಮಾಹಿತಿ ಮೇರೆಗೆ ತೆರಳಿದ್ದ ಹುಳಿಮಾವು ಠಾಣೆ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದುಕೊಂಡರು.

'ಖಾಸಗಿ ಕಂಪನಿಯಲ್ಲಿ ಪ್ರಾಜೆಕ್ಟ್ ಮ್ಯಾನೇಜರ್ ಆಗಿದ್ದ ರಾಕೇಶ್, ಮನೆಯಿಂದಲೇ ಕಚೇರಿ ಕೆಲಸ ಮಾಡುತ್ತಿದ್ದ. ಗೌರಿ ಸಹ ಕೆಲಸದ ಹುಡುಕಾಟದಲ್ಲಿದ್ದರು. ಈ ವಿಚಾರದಲ್ಲಿ ಮಾರ್ಚ್ 26ರಂದು ಇಬ್ಬರ ನಡುವೆ ಗಲಾಟೆಯಾಗಿತ್ತು. ಈ ವೇಳೆ ಗೌರಿ ಕೋಪದಲ್ಲಿ ಅಡುಗೆ ಮನೆಯಲ್ಲಿದ್ದ ಚಾಕುವನ್ನು ಪತಿ ಮೇಲೆ ಎಸೆದಿದ್ದರು. ಚಾಕು ಕೈಗೆ ತಗುಲಿ ಗಾಯವಾಗಿತ್ತು. ಇದರಿಂದ ಸಿಟ್ಟಿಗೆದ್ದ ರಾಕೇಶ್ , ಅದೇ ಚಾಕುವಿನಿಂದ ಕೊಲೆ ಮಾಡಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಜಗಳವಾಡುತ್ತಿದ್ದ ಕಾರಣಕ್ಕೆ ಕೊಂದೆ ಎಂದಿದ್ದ'

'ತನ್ನ ಜತೆ ನಿತ್ಯ ಜಗಳ ಮಾಡುತ್ತಿದ್ದಳು. ಅದಕ್ಕೇ ಪತ್ನಿಯನ್ನು ಕೊಲೆ ಮಾಡಿರುವುದಾಗಿ ಹೇಳಿದ್ದ. ಘಟನೆಯ ಮರುದಿನ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ತಿಳಿಸಿದ್ದ. ಆತ್ಮಹತ್ಯೆ ಮಾಡಿಕೊಳ್ಳಬೇಡ, ಪೊಲೀಸ್ ಠಾಣೆಗೆ ತೆರಳಿ ಘಟನೆ ಬಗ್ಗೆ ಹೇಳೋಣ ಎಂದಿದ್ದೆ. ಅದಕ್ಕೆ ಒಪ್ಪಿದ್ದ' ಎಂದು ಆರೋಪಿ ರಾಕೇಶ್ ತಂದೆ ರಾಜೇಂದ್ರ ಕೆಡೇಕರ್ ಹೇಳಿದ್ದಾರೆ.

ದೇವನಗೊಂದಿ: ಕಂಟೇನರ್ ರೈಲು ಟರ್ಮಿನಲ್ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲು ಸಾರಿಗೆಯನ್ನು ಹೆಚ್ಚಿಸಲು ಮತ್ತು ದೇಶೀಯ ಕಂಟೇನರ್ ಸಂಚಾರವನ್ನು ಅಭಿವೃದ್ಧಿಪಡಿಸಲು ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗವು ದೇವನಗೊಂದಿ ಟರ್ಮಿನಲ್ ಅನ್ನು ವಿಶೇಷ ಕಂಟೇನರ್ ರೈಲು ಟರ್ಮಿನಲ್ ಆಗಿ ಅಧಿಕೃತವಾಗಿ ಪ್ರಾರಂಭಿಸಿದೆ.

ಕಂಟೇನರ್ ಲಾಜಿಸ್ಟಿಕ್ಸ್ ಅನ್ನು ಸರಳಗೊಳಿಸುವ ಮತ್ತು ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ಹೆಚ್ಚಿನ ಸಾರಿಗೆ ಆಯ್ಕೆಗಳನ್ನು ಒದಗಿಸುವ ಗುರಿ ಹೊಂದಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ದೇವನಗೊಂದಿ ವಿಶೇಷ ಕಂಟೇನರ್ ರೈಲು ಟರ್ಮಿನಲ್, ಆಮದು ಮತ್ತು ರಫ್ತು ಕಾರ್ಯಾಚರಣೆಗಳನ್ನು ಉತ್ತೇಜಿಸಲಿದೆ. ತ್ವರಿತ ಮತ್ತು ಮಿತವ್ಯಯಕಾರಿ ಸರಕು ಸಾಗಣೆಗೆ ಅನುವು ಮಾಡಿಕೊಡಲಿದೆ. ಟರ್ಮಿನಲ್‌ನಲ್ಲಿ ಕಂಟೇನರ್ ಶೇಖರಣಾ ಶುಲ್ಕವನ್ನು ಸ್ಪರ್ಧಾತ್ಮಕವಾಗಿ ಪ್ರತಿದಿನಕ್ಕೆ ಪ್ರತಿ ಟಿಯುಇಗೆ (ಇಪ್ಪತ್ತು ಅಡಿ ಸಮಾನ ಕಂಟೇನರ್ ಯೂನಿಟ್) ₹35 ನಿಗದಿಪಡಿಸಲಾಗಿದೆ.

ವಾರ್ಫೇಜ್ (ರೈಲ್ವೆ ಆವರಣದಲ್ಲಿ ಸರಕುಗಳನ್ನು ತುಂಬಲು ಮತ್ತು ಇಳಿಸಲು ನಿಗದಿಪಡಿಸಿದ ಉಚಿತ ಸಮಯವನ್ನು ಮೀರಿದ ಸಂದರ್ಭದಲ್ಲಿ ವಿಧಿಸಲಾಗುವ ಶುಲ್ಕ) ಅಥವಾ ನೆಲ ಬಾಡಿಗೆಯಂತಹ ಯಾವುದೇ ಹೆಚ್ಚುವರಿ ಶುಲ್ಕಗಳಿಲ್ಲ. ಟರ್ಮಿನಲ್‌ನ ಪ್ರವೇಶ ಶುಲ್ಕ ಪ್ರತಿ ರೈಲಿಗೆ ₹80,000 ಆಗಿರುತ್ತದೆ.

ವಿವಿಧ ಬಂದರುಗಳಿಂದ ಬೆಂಗಳೂರಿಗೆ ಮತ್ತು ದೇಶದ ದೂರದ ಸ್ಥಳಗಳಿಗೆ ಸರಕುಗಳ ಸಾಗಣೆಯನ್ನು ಹೆಚ್ಚು ಕೈಗೆಟುಕುವ ಹಾಗೆ ಮಾಡುವ ಗುರಿಯನ್ನು ಈ ಟರ್ಮಿನಲ್ ಹೊಂದಿದೆ. ಆಮದುದಾರರು ಈಗ ವಿವಿಧ ಅಂತರರಾಷ್ಟ್ರೀಯ ಬಂದರುಗಳಿಂದ ಬೆಂಗಳೂರಿಗೆ ಸರಕುಗಳನ್ನು ಸಾಗಿಸಬಹುದು.

ದೇವನಗೊಂದಿ ಟರ್ಮಿನಲ್ ಹೊಸಕೋಟೆ, ಮಾಲೂರು ಮತ್ತು ವೈಟ್‌ಫೀಲ್ಡ್‌ನಂತಹ ಕೈಗಾರಿಕಾ ಪ್ರದೇಶಗಳಿಗೆ ಹತ್ತಿರ ಇರುವುದರಿಂದ ಈ ಪ್ರದೇಶಗಳಲ್ಲಿನ ಉತ್ಪನ್ನಗಳನ್ನು ರೈಲು ಮೂಲಕ ಸಾಗಣೆ ಮಾಡಲು ಸಾಧ್ಯವಾಗಲಿದೆ ಎಂದು ರೈಲ್ವೆ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

'ನಾಮ ಹಾಕಿಕೊಂಡರೆ ಹಿಂದುತ್ವ ಆಗಲ್ಲ'

ಮಂಡ್ಯ: 'ನಾಮ ಹಾಕಿಕೊಂಡರೆ ಹಿಂದುತ್ವ ಆಗುವುದಿಲ್ಲ. ಹಿಂದುತ್ವದಲ್ಲಿ ಒಂದು ಶಿಸ್ತಿದೆ. ಅದನ್ನು ಬಿಟ್ಟು ಬೇರೆ ಮಾತನಾಡುವುದು ಹಾಗೂ ಅವರ ಪಕ್ಷಕ್ಕೆ ಮುಜುಗರ ಉಂಟುಮಾಡುವ ಹೇಳಿಕೆಯನ್ನು ಯಾರೂ ನೀಡಬಾರದು' ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯಕಾರಿಣಿ ಆಹ್ವಾನಿತ ಸದಸ್ಯ ಕಲ್ಲಡ್ಕ ಪ್ರಭಾಕರ ಭಟ್ ಹೇಳಿದರು.

ಇಲ್ಲಿನ ಸಿಲ್ವರ್ ಜ್ಯೂಬಿಲಿ ಉದ್ಯಾನದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಮಂಡ್ಯ ನಗರ)ದ ಸಹಯೋಗದಲ್ಲಿ ಭಾನುವಾರ ನಡೆದ 'ಯುಗಾದಿ ಉತ್ಸವ'ದಲ್ಲಿ ಅವರು ಮಾತನಾಡಿದರು.

ನಗರದಲ್ಲಿ ಇಂದು

ಬ್ರಹ್ಮರಥೋತ್ಸವ ಪ್ರಯುಕ್ತ ನಾಮಕೀರ್ತನೆ, ಗಜೇಂದ್ರ ಮೋಕ್ಷ ಉತ್ಸವ-ಪುಣ್ಯಕಥಾ ಸಮಯ, ಮಹಾ ಕಲ್ಯಾಣೋತ್ಸವ, ಆಯೋಜನೆ ಹಾಗೂ ಸ್ಥಳ: ಕಾಕೋಳು ವೇಣುಗೋಪಾಲಸ್ವಾಮಿ ದೇವಸ್ಥಾನ ಟ್ರಸ್ಟ್, ಕಾಕೋಳು ಕ್ಷೇತ್ರ, ಯಲಹಂಕ, ಬೆಳಿಗ್ಗೆ 9

ಶಿವಕುಮಾರ ಸ್ವಾಮೀಜಿಯವರ 118ನೇ ಜಯಂತಿ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಪ್ರತಿಮೆಗೆ ಮಾಲಾರ್ಪಣೆ: ಎಂ.ಬಿ. ಪಾಟೀಲ, ಗೌರವಾರ್ಪಣೆ: ಮಲ್ಲೇಪುರಂ ಜಿ. ವೆಂಕಟೇಶ್, ನುಡಿನಮನ: ಎಚ್.ಎಂ. ರೇವಣ್ಣ, ಎಸ್. ಸುರೇಶ್ ಕುಮಾರ್, ಶೈಲಜ ವಿ. ಸೋಮಣ್ಣ, ಮಹಾಂತೇಶ ಬಿರಾದಾರ, ಆಯೋಜನೆ: ಶಿವಕುಮಾರಸ್ವಾಮಿ ಚಾರಿಟಬಲ್ ಟ್ರಸ್ಟ್, ಸ್ಥಳ: ರಾಜಾಜಿನಗರ ಮೇಲ್ಸೇತುವೆ ಬಳಿ, ರಾಜಕುಮಾರ್ ರಸ್ತೆ, ಬೆಳಿಗ್ಗೆ 10.30.

32ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಪ್ರಿನ್ಸ್ ರಾಮವರ್ಮ, ಪಿಟೀಲು: ಅವನೀಶ್ವರಂ ಎಸ್.ಆರ್., ಮೃದಂಗ: ನಂಜಿಲ್ ಅರುಲ್, ಮೋರ್ಸಿಂಗ್: ಭಾಗ್ಯಲಕ್ಷ್ಮೀ ಎಸ್. ಕೃಷ್ಣ, ಆಯೋಜನೆ ಹಾಗೂ ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15

ಶ್ರೀರಾಮನವಮಿ-ರಾಮಾಯಣ ಪ್ರವಚನ: ನಾಗೇಂದ್ರಾಚಾರ್, ಆಯೋಜನೆ: ಗುರು ರಾಘವೇಂದ್ರ ಸೇವಾ ಸಮಿತಿ ಟ್ರಸ್ಟ್, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಆರ್.ಟಿ. ನಗರ, ಸಂಜೆ 6

119ನೇ ರಾಮೋತ್ಸವ: 'ದಾಸವಾಣಿ' ಕೀರ್ತನೆ: ಮೈಸೂರು ರಾಮಚಂದ್ರಾಚಾರ್ ಮತ್ತು ತಂಡ, ಆಯೋಜನೆ: ಶ್ರೀರಾಮ ಭಕ್ತ ಸಭಾ, ಸ್ಥಳ: ಶ್ರೀಕಂಠೇಶ್ವರ ಭವನ, 5ನೇ ಅಡ್ಡರಸ್ತೆ, ಮಲ್ಲೇಶ್ವರ, ಸಂಜೆ 6

'ಯುಗಾದಿ' ಭಕ್ತಿ ಗೀತೆಗಳು: ಅನನ್ಯ ಭಟ್, ಆಯೋಜನೆ ಹಾಗೂ ಸ್ಥಳ: ಶ್ರೀ ಸಾಯಿ ಆಧ್ಯಾತ್ಮಿಕ ಕೇಂದ್ರ, ತ್ಯಾಗರಾಜನಗರ, ಸಂಜೆ 6.30 ವಸಂತ ನವರಾತ್ರಿ ಶ್ರೀರಾಮೋತ್ಸವ: ಯುಗಳ ಗಾಯನ: ಸಿ. ಅಶ್ವಿನಿ, ಎಂ.ಎಸ್.ಜಿ. ಸರ್ವಮಂಗಳ ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

25ನೇ ವರ್ಷದ ಪ್ರವಚನ ವಾಹಿನಿ: ವಿಷಯ: ರಾಮಚಂದ್ರ ರಾಮಾನುಜ, ಪ್ರವಚನ: ಗೋಪಾಲ ಅಯ್ಯಂಗಾರ್, ಸ್ಥಳ ಮತ್ತು ಆಯೋಜನೆ: ರಾಗಿಗುಡ್ಡ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ, 9ನೇ ಬಡಾವಣೆ, ಜಯನಗರ, ಸಂಜೆ 6.30

ಶ್ರೀರಾಮನವಮಿ ಆನಂದ ನರ್ತನ ಉತ್ಸವ: ನೃತ್ಯ: ಮನು ಜೆ., ವೀಣಾ ಮೂರ್ತಿ ವಿಜಯ್, ಆಯೋಜನೆ ಹಾಗೂ ಸ್ಥಳ: ಕಲಾನಿಧಿ ಆರ್ಟ್ಸ್ ಅಕಾಡೆಮಿ, ಸೂರ್ಯವಂಶಿ ಲೇಔಟ್, ಯಲಹಂಕ, ಸಂಜೆ 6

ಶಕ್ತಿ ಕರುಮಾರಿಯಮ್ಮನವರ 59ನೇ ಜಾತ್ರಾ ಮಹೋತ್ಸವ, ಆಯೋಜನೆ ಮತ್ತು ಸ್ಥಳ: ಶಕ್ತಿ ಕರುಮಾರಿಯಮ್ಮ ದೇವಸ್ಥಾನ ಸಮಿತಿ, ವಿದ್ಯಾನಗರ ಕ್ರಾಸ್, ಯಲಹಂಕ, ರಾತ್ರಿ 7.15

****

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್ ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಮನೆ ಮುಂದೆ ರಂಗೋಲಿ ಬಿಡಿಸಿ, ಬೇವು ಬೆಲ್ಲ ಹಂಚಿ ಸಂಭ್ರಮಿಸಿದ ಜನರು

ನಗರದೆಲ್ಲೆಡೆ ಸಂಭ್ರಮದ ಯುಗಾದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಯುಗಾದಿ ಹಬ್ಬವನ್ನು ಭಾನುವಾರ ಸಡಗರದಿಂದ ಆಚರಿಸಲಾಯಿತು. ಪರಸ್ಪರ ಬೇವು-ಬೆಲ್ಲ ಹಂಚಿ ಸಂಭ್ರಮಿಸಿದರು.

ಹೊಸ ವರ್ಷವನ್ನು ಬರಮಾಡಿಕೊಳ್ಳಲು ಕೆಲವು ದಿನಗಳಿಂದ ತಯಾರಿ ನಡೆದಿತ್ತು. ಮಾರುಕಟ್ಟೆಗೆ ತೆರಳಿ ಹೂವು ಹಣ್ಣುಗಳನ್ನು ತರಲಾಗಿತ್ತು. ಹೊಸ ಬಟ್ಟೆಗಳನ್ನು ಖರೀದಿಸಲಾಗಿತ್ತು. ಸೂರ್ಯ ಮೂಡುವ ಮುನ್ನವೇ ಯುಗಾದಿಯ ಸಂಭ್ರಮದ ವಾತಾವರಣ ಕಂಡುಬಂತು.

ಹೆಣ್ಣುಮಕ್ಕಳು ಮನೆಯನ್ನೆಲ್ಲ ಸ್ವಚ್ಛಗೊಳಿಸಿ, ಆಕರ್ಷಕ ರಂಗೋಲಿ ಬಿಡಿಸಿ ಹಬ್ಬಕ್ಕೆ ರಂಗು ತುಂಬಿದರು. ಮನೆ ಬಾಗಿಲಿಗೆ ಮಾವಿನ ತೋರಣ ಕಟ್ಟಿ, ಬೇವಿನ ಚಿಗುರನ್ನು ಸಿಕ್ಕಿಸಿ ಮನೆ ಅಲಂಕಾರ ಮಾಡಿದರು.

ಎಣ್ಣೆ ಹಚ್ಚಿ ಸ್ನಾನ ಮಾಡಿದ ಬಳಿಕ ಹೊಸ ಬಟ್ಟೆಗಳನ್ನು ತೊಟ್ಟು ಸಂಭ್ರಮಿಸಿದರು. ಬೇವಿನ ಹೂವು, ಬೆಲ್ಲದೊಂದಿಗೆ ಬೆರೆಸಿ, ಮನೆಯವರಿಗೆ ಬಂಧುಮಿತ್ರರಿಗೆ ಹಂಚಿ, ಶುಭಾಶಯ ಕೋರಿದರು. ಮನೆದೇವರ ಪೂಜೆ ನೆರವೇರಿಸಿದರು. ಹೋಳಿಗೆ, ಪಾಯಸ ಸಹಿತ ಹಬ್ಬದೂಟ ಸವಿದರು.

ಸಂಜೆ ಇಸ್ಕಾನ್ ಸೇರಿದಂತೆ ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜೆಗಳು ನೆರವೇರಿದವು. ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಕೆಲವು ದೇಗುಲಗಳಲ್ಲಿ 'ಪಂಚಾಂಗ ಶ್ರವಣ'ವೂ ನಡೆಯಿತು.

ಸಂಜೆಯಾಗುತ್ತಿದ್ದಂತೆ ಸ್ನೇಹಿತರ, ಬಂಧು ಬಳಗದವರ ಮನೆಗೆ ತೆರಳಿ ಬೇವು-ಬೆಲ್ಲ ಕೊಟ್ಟು ಹೊಸ ವರ್ಷದ ಶುಭಾಶಯ ವಿನಿಮಯ ಮಾಡಿಕೊಂಡರು.



ಬೆಂಗಳೂರು ವಿಜಯನಗರದ ಮಾರುತಿ ಮಂದಿರದಲ್ಲಿ ಯುಗಾದಿ ಹಬ್ಬದ ಅಂಗವಾಗಿ ವಿಶೇಷ ಪೂಜೆ ನಡೆಯಿತು

ಸಂಕ್ಷಿಪ್ತ ಸುದ್ದಿ

ಯುವತಿ ಸಾವು, ಸವಾರನಿಗೆ ಗಾಯ

ಬೆಂಗಳೂರು: ವೇಗವಾಗಿ ಬಂದ ಕ್ಯಾಬ್, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಯುವತಿ ಮೃತಪಟ್ಟು, ಸವಾರ ಗಾಯಗೊಂಡಿರುವ ಘಟನೆ ವೀರಣ್ಣ ಪಾಳ್ಯ ರಸ್ತೆಯಲ್ಲಿ ಸೋಮವಾರ ನಡೆದಿದೆ.

ಗೋವಿಂದರಾಜ ನಗರದ ವರ್ಷ (24) ಮೃತಪಟ್ಟವರು. ಗಾಯಗೊಂಡಿರುವ ಸವಾರ ರಾಜೇಶ್ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ತನ್ನ ಮಾವ ರಾಜೇಶ್ ಅವರ ಸ್ಕೂಟರ್‌ನಲ್ಲಿ ಹಿಂದೆ ಕುಳಿತುಕೊಂಡು ಮಾನ್ಯತಾ ಟೆಕ್ ಪಾರ್ಕ್‌ಗೆ ಕೆಲಸಕ್ಕೆ ಹೋಗುತ್ತಿದ್ದಾಗ ಅಪಘಾತ ಸಂಭವಿಸಿದೆ. ವೀರಣ್ಣ ಪಾಳ್ಯ ರಸ್ತೆಯಲ್ಲಿ ಮೆಟ್ರೊ ಕಾಮಗಾರಿ ನಡೆಯುತ್ತಿದ್ದು, ಎದುರಿನಿಂದ ಬಂದ ಕ್ಯಾಬ್ ಡಿಕ್ಕಿ ಹೊಡೆದಿದೆ. ಗಂಭೀರವಾಗಿ ಗಾಯಗೊಂಡ ವರ್ಷ ಸ್ಥಳದಲ್ಲೇ ಮೃತಪಟ್ಟರು.

ಸ್ಥಳಕ್ಕೆ ಹೆಬ್ಬಾಳ ಸಂಚಾರ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಬೈಕ್ ಪಲ್ಟಿ: ಯುವಕ ಸಾವು

ಬೆಂಗಳೂರು: ಬೈಕ್‌ನಲ್ಲಿ ಹೋಗುವ ವೇಳೆ ಆಯತಪ್ಪಿ ಕೆಳಗೆ ಬಿದ್ದ ಪರಿಣಾಮ ಹಿಂಬದಿ ಸವಾರ ಮೃತಪಟ್ಟಿರುವ ದುರ್ಘಟನೆ ಸದಾಶಿವ ನಗರದಲ್ಲಿ ನಡೆದಿದೆ.

ಅಸ್ಸಾಂ ಮೂಲದ ವಿಜಯ್ ಮಡಿಕಿ (21) ಮೃತಪಟ್ಟವರು. ಗಾಯಗೊಂಡಿರುವ ಸವಾರ ಸುಹೇಲ್ ಅವರನ್ನು ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದಾಖಲಿಸಿದ್ದು, ಅವರ ಸ್ಥಿತಿ ಗಂಭೀರವಾಗಿದೆ.

ಸಹಕಾರ ಬ್ಯಾಂಕ್ ವಂಚನೆ ಪ್ರಕರಣ ದೋಷಾರೋಪ ಪಟ್ಟಿ ಸಲ್ಲಿಕೆ

ಬೆಂಗಳೂರು: ಹನುಮಂತನಗರ ಸಹಕಾರ ಬ್ಯಾಂಕ್‌ನಲ್ಲಿ ನಡೆದಿದ್ದ ವಂಚನೆ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಸಿಸಿಬಿ ಪೊಲೀಸರು, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಬ್ಯಾಂಕ್‌ನ ಅಧಿಕಾರಿಗಳು ಸೇರಿದಂತೆ 10ಕ್ಕೂ ಹೆಚ್ಚು ಆರೋಪಿಗಳ ಹೆಸರು ಉಲ್ಲೇಖಿಸಿ ಆರೋಪಪಟ್ಟಿ ಸಲ್ಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಕಲಿ ದಾಖಲೆಗಳನ್ನು ಒದಗಿಸಿದ ವ್ಯಕ್ತಿಗಳಿಗೆ ಸಾಲ ನೀಡುವ ಮೂಲಕ ₹3.7 ಕೋಟಿಯನ್ನು ಆರೋಪಿಗಳು ವಂಚಿಸಿದ್ದರು. ಸಾಲ ಮಂಜೂರು ಮಾಡಿದ ವ್ಯಕ್ತಿಗಳಿಂದ ಅಪಾರ ಪ್ರಮಾಣದ ಕಮಿಷನ್ ಸಹ ಪಡೆದಿದ್ದರು ಎಂದು ಆರೋಪಪಟ್ಟಿಯಲ್ಲಿ ವಿವರಿಸಲಾಗಿದೆ.

ಸಾಲ ಪಡೆಯಲು ಗ್ರಾಹಕರು, ತಮ್ಮ ಜಮೀನು ಮತ್ತು ಮನೆಗಳ ನಕಲಿ ದಾಖಲೆಗಳನ್ನು ಬ್ಯಾಂಕಿಗೆ ಸಲ್ಲಿಸಿದ್ದರು. ಅದು ನಕಲಿ ದಾಖಲೆಗಳು ಎಂದು ತಿಳಿದಿದ್ದರೂ ಸಹ ಬ್ಯಾಂಕ್‌ನ ಅಧಿಕಾರಿಗಳು ಸಾಲವನ್ನು ಮಂಜೂರು ಮಾಡಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಪೊಲೀಸರು ಪ್ರಕರಣದ ತನಿಖೆ ನಡೆಸಿದ್ದರು.

ಕಠುವಾ: ಮೂವರು ಉಗ್ರರಿಗಾಗಿ ಶೋಧ

ಜಮ್ಮು (ಪಿಟಿಐ): ಕಠುವಾ ಜಿಲ್ಲೆಯಲ್ಲಿ ಸೋಮವಾರ ರಾತ್ರಿ ಶೋಧ ಕಾರ್ಯಾಚರಣೆಯಲ್ಲಿ ತೊಡಗಿದ್ದ ಭದ್ರತಾ ಸಿಬ್ಬಂದಿ ಮೇಲೆ ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.


ರಾಮ್‌ಕೋಟೆ ವಲಯದ ಪಂಜ್‌ತೀರ್ಥಿ ಪ್ರದೇಶದಲ್ಲಿ ಉಗ್ರರಿಗಾಗಿ ಶೋಧ ಕಾರ್ಯ ಮುಂದುವರಿದಿದೆ ಎಂದು ಹೇಳಿವೆ.

ಮೂವರೂ ಉಗ್ರರನ್ನು ನಿಷ್ಕ್ರಿಯಗೊಳಿಸುವವರೆಗೂ ಕಾರ್ಯಾಚರಣೆ ನಡೆಯಲಿದೆ. ಶಂಕಿತರ ಸುಳಿವು ಕಂಡರೆ ಜನರೂ ಮಾಹಿತಿ ನೀಡಬೇಕು ಎಂದು ಡಿಐಜಿ ಶಿವಕುಮಾರ ಶರ್ಮಾ ತಿಳಿಸಿದ್ದಾರೆ.

ಕಳೆದ ಗುರುವಾರ ಕಠುವಾದಲ್ಲಿ ನಡೆದಿದ್ದ ಗುಂಡಿನ ಚಕಮಕಿಯಲ್ಲಿ ಇಬ್ಬರು ಉಗ್ರರು ಮತ್ತು ನಾಲ್ವರು ಪೊಲೀಸರು ಮೃತಪಟ್ಟಿದ್ದರು. ಡಿವೈಎಸ್‌ಪಿ ಸೇರಿ ಮೂವರು ಗಾಯಗೊಂಡಿದ್ದರು.

ಚಕಮಕಿ ಬಳಿಕ ಪರಾರಿ ಆಗಿದ್ದವರು ಎಂಬ ಶಂಕೆಯ ಮೇಲೆ ಪೊಲೀಸರು ಆರು ಜನರನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕ್ಷೇಮ ಕುಶಲ



ಮಕ್ಕಳ ಸುರಕ್ಷತೆಗೆ ಕೆಲವು ಕ್ರಮಗಳು

- ಅತಿಯಾದ ಬಿಸಿಲಿಗೆ ಮೈ ಒಡ್ಡದಂತೆ ನೋಡಿಕೊಳ್ಳಿ.
- ಬೇಸಿಗೆಗೆ ಸೂಕ್ತವಾದ ಕೊಂಚ ಸಡಿಲವಾದ ಹತ್ತಿಯ ಬಟ್ಟೆಗಳನ್ನು ತೊಡಿಸಿ.
- ಬಿಸಿಲಿನಲ್ಲಿ ಹೊರಗೆ ಹೊರಟಾಗ ಸೂಕ್ತವಾದ ಚರ್ಮರಕ್ಷಣಾ ಸಾಧನಗಳನ್ನು ಬಳಸಿ.
- ಬೇಸಿಗೆಯಲ್ಲಿ ನೀರಿನಿಂದ ಹರಡುವ ಕೆಲವು ಸಾಂಕ್ರಾಮಿಕ ರೋಗಗಳಿರುತ್ತವೆ. ಆದುದರಿಂದ ಎಲ್ಲೆಂದರಲ್ಲಿ ನೀರು ಕುಡಿಯುವುದನ್ನು ತಪ್ಪಿಸಿ, ಸದಾ ಶುದ್ಧ ನೀರನ್ನು ಒದಗಿಸಿ.
- ಶುಚಿತ್ವದ ಬಗ್ಗೆ ಗಮನವಿರಲಿ. ಆಟವಾಡುವಾಗ ಕೈಕಾಲುಗಳು ಮಣ್ಣಿನ ಸಂಪರ್ಕಕ್ಕೆ, ಆಟಿಕೆಗಳ ಸಂಪರ್ಕಕ್ಕೆ ಬಂದಿರುತ್ತವೆ. ಹೀಗಾಗಿ ಮಕ್ಕಳು ಆಹಾರವನ್ನು ಸೇವಿಸುವ ಮುನ್ನ ಕೈಕಾಲುಗಳನ್ನು ಸ್ವಚ್ಛವಾಗಿ ತೊಳೆದು ಬಳಿಕ ಆಹಾರವನ್ನು ಸೇವಿಸುವಂತೆ ನೋಡಿಕೊಳ್ಳಿ.
- ಮಕ್ಕಳು ನೀರಾಟವಾಡುತ್ತಿದ್ದರೆ ಅಥವಾ ಅವರನ್ನು ಈಜಲು ಕರೆದುಕೊಂಡು ಹೋದ ಸಂದರ್ಭಗಳಲ್ಲಿ ಸಂಪೂರ್ಣ ನಿಗಾ ವಹಿಸಿ.
- ಸಾಮಾಜಿಕ ಚಟುವಟಿಕೆಗಳಲ್ಲಿ ಮಕ್ಕಳನ್ನು ಹೆಚ್ಚು ತೊಡಗಿಸಿ.



ರಜೆಯ ಮಜಾ ಆಗದಿರಲಿ ಅನಾರೋಗ್ಯದ ಸಜಾ!

ರಘು ವಿ.

ರಜೆಯಲ್ಲಿ ಮಕ್ಕಳು ಆರೋಗ್ಯವನ್ನು ಕಾಪಾಡಿಕೊಂಡು ಸಂತೋಷದಿಂದ ಇರುವುದು ಹೇಗೆ ಎಂಬುದೇ ಪೋಷಕರಿಗೆ ಎದುರಾಗುವ ಸವಾಲು. ರಜೆಯೆಂದರೆ ಸಾಹಸದ ಉಲ್ಲಾಸದ ಸಮಯ. ವರ್ಷವಿಡೀ ಪಠ್ಯ ವಿಚಾರಗಳಲ್ಲಿ ತೊಡಗಿದ್ದ ಮಕ್ಕಳು ಈಗ ತಮ್ಮ ಮೈ ಮನಸ್ಸುಗಳನ್ನು ಹರಿಬಿಟ್ಟು ಕೊಂಚ ಸಂತೋಷವನ್ನು ಪಡೆಯಬೇಕೆಂದು ಬಯಸುತ್ತಾರೆ. ಆದರೆ ಬಿಸಿಲಿನ ಝಳ ಮತ್ತು ದಿಢೀರನೆ ಆಗುವ ದಿನಚರಿಯ ಬದಲಾವಣೆಗಳಿಂದಾಗಿ ಅವರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮಗಳು ಬೀರುವ ಸಾಧ್ಯತೆಗಳಿವೆ. ಹೀಗಾಗದಂತೆ ಪಾಲಕ ಪೋಷಕರು ಗಮನಹರಿಸಬೇಕು.

ಬೇಸಿಗೆಯಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ನೀಡಬೇಕು. ಬೇಸಗೆಯಲ್ಲಿ ಹಣ್ಣುಗಳನ್ನು ಧಾರಾಳವಾಗಿ ನೀಡಬಹುದು. ಇವುಗಳಲ್ಲಿ ವಿಟಮಿನ್, ನಾರಿನ ಅಂಶ ಮತ್ತು ನೀರಿನ ಅಂಶ ಹೆಚ್ಚಾಗಿರುತ್ತದೆ. ಸಾಧ್ಯವಾದಷ್ಟು ಹಸಿರು ತರಕಾರಿಗಳನ್ನು ಊಟದಲ್ಲಿ ಬಳಸಬೇಕು. ಕರಿದ ಹುರಿದ ಮತ್ತು ಬೇಕರಿ ಪದಾರ್ಥಗಳನ್ನು ಕಡಿಮೆ ಮಾಡಬೇಕು. ಜಂಕ್ ಫುಡ್ ಎಂದು ಕರೆಯಲಾಗುವ ಆಧುನಿಕ ತಿನಿಸುಗಳು ಖಂಡಿತವಾಗಿಯೂ ಯಾವ ರೀತಿಯಿಂದಲೂ ಒಳಿತಲ್ಲ. ಪ್ರೊಟೀನ್‌ಯುಕ್ತ ಆಹಾರಗಳು ಅಂದರೆ, ಪನೀರ್, ಮೊಟ್ಟೆ, ಮೀನು ಮತ್ತು ಮೊಳಕೆ ಕಟ್ಟಿದ ಕಾಳುಗಳನ್ನು ಕೊಡಬಹುದು. ಮಕ್ಕಳು ಆಟವಾಡುತ್ತಲೋ ಅಥವಾ ತಮ್ಮ ಬೆಳವಣಿಗೆಯ ಸಹಜ ಕಾರಣದಿಂದಲೋ ಪದೇ ಪದೇ ಹಸಿವು ಎಂದು ಬರುವ ಕಾರಣ ಅವರಿಗೆ ನೈಸರ್ಗಿಕ ಪೂರಕ ಆಹಾರ ಮತ್ತು ಪಾನೀಯಗಳನ್ನು ಒದಗಿಸುವುದು ಒಳ್ಳೆಯದು.

ಬೇಸಿಗೆಯಲ್ಲಿ ಮಕ್ಕಳು ಎದುರಿಸುವ ಮತ್ತೊಂದು ಮುಖ್ಯ ಅಪಾಯವೆಂದರೆ 'ನಿರ್ಜಲೀಕರಣ', ಎಂದರೆ 'ಡಿ ಹೈಡ್ರೇಶನ್'. ಎಷ್ಟು ಬೇಡವೆಂದರೂ ಕುಣಿದು ಕುಪ್ಪಳಿಸುವ ಆಟವಾಡುವ ವಯಸ್ಸದು. ಬಿಸಿಲಿನಲ್ಲೂ ಬಯಲಿನಲ್ಲೂ ಆಡಿ ದಣಿಯುವಾಗ ನೀರು ಕುಡಿಯುವುದನ್ನು ಕಡೆಗಣಿಸಿ ಆಟವಾಡುವ ಸಾಧ್ಯತೆಗಳು ಇವೆ. ಹೀಗಾದಾಗ ಅತಿಯಾದ ಬೆವರಿನ ಜೊತೆಗೆ ದೇಹದ ನೀರಿನ ಅಂಶವೂ ಬತ್ತಿಹೋಗುವುದರಿಂದ ದೇಹದಲ್ಲಿ ನಿರ್ಜಲೀಕರಣ ಉಂಟಾಗುತ್ತದೆ. ಹೀಗಾಗದಂತೆ ಎಚ್ಚರಿಕೆ ವಹಿಸಬೇಕು. ಮಕ್ಕಳ ಕೈಗೆಟಕುವಂತೆ ಕುಡಿಯುವ ನೀರಿನ ವ್ಯವಸ್ಥೆ ಮನೆಯಲ್ಲಿರಬೇಕು. ಅಥವಾ ಆಟದ ಮೈದಾನಕ್ಕೆ ಅವರು ನೀರಿನ ಬಾಟಲಿಗಳನ್ನು ಒಯ್ಯುವಂತೆ ಮಾಡಬೇಕು. ನೀರು ಮುಖ್ಯವಾದ ಪಾನೀಯವಾದರೂ ಬಾಯಿರುಚಿಗೆ ಒಗ್ಗುವಂತೆ ದೇಶಿಯ ಪಾನಕಗಳನ್ನು ತಯಾರಿಸಿಟ್ಟು ಮಕ್ಕಳು ಅವುಗಳನ್ನು ಕುಡಿಯಲು ಪ್ರೋತ್ಸಾಹಿಸಬೇಕು. ಅತಿ ಸಕ್ಕರೆ ಬೆರೆಸಿದ ಕಾರ್ಬೋನೇಟೆಡ್ ಪಾನೀಯಗಳನ್ನು ಕುಡಿದರೆ ಹೊಟ್ಟೆಯುಬ್ಬರದ ಜೊತೆಗೆ ನಿರ್ಜಲೀಕರಣವು ಉಂಟಾಗುತ್ತದೆ. ನಾವು ಗಮನಿಸಿದಂತೆ ಕಾರ್ಬೋನೇಟ್‌ಯುಕ್ತ ಪಾನೀಯಗಳನ್ನು ಜಾಹಿರಾತಿನಲ್ಲಿ ಪ್ರಚಾರ ಮಾಡುವ ಆಟಗಾರರು ಕೂಡ ಮೈದಾನದಲ್ಲಿ ಶುದ್ಧವಾದ ನೀರನ್ನು ಸೇವಿಸುತ್ತಾರೆಯೇ ಹೊರತು ತಾವು ಜಾಹೀರಾತು ಮಾಡಿದ ಪಾನೀಯವನ್ನು ಕುಡಿಯುವುದಿಲ್ಲ! ಅತಿಯಾದ ಬಿಸಿಲಿನಲ್ಲಿ ಆಡುವುದನ್ನು ತಪ್ಪಿಸಬೇಕು. ಮುಂಜಾನೆ ಮತ್ತು ಸಂಜೆ ಮಾತ್ರ ಆಟವಾಡಲು ಪ್ರೋತ್ಸಾಹಿಸಿ ಮಧ್ಯಾಹ್ನದ ವೇಳೆಯಲ್ಲಿ ಒಳಾಂಗಣ ಆಟಗಳಲ್ಲಿ ಮತ್ತು ಇತರ ಹವ್ಯಾಸಗಳಲ್ಲಿ ತೊಡಗಿಸಬೇಕು.

ನಿದ್ರೆಯೆಂಬ ಆರೋಗ್ಯ ವರ: ಶಾಲೆಗೆ ರಜೆ ಇರುವ ಕಾರಣ ಮಕ್ಕಳು ಏಳುವ ಮತ್ತು ಮಲಗುವ ಸಮಯ ವ್ಯತ್ಯಾಸಗೊಳ್ಳುತ್ತದೆ. ಕೆಲವರು ಬೆಳಗ್ಗೆ ತಡವಾಗಿ ಏಳುವುದನ್ನು ಅಭ್ಯಾಸ ಮಾಡಿಕೊಂಡರೆ, ಮತ್ತೆ ಕೆಲವರು ರಾತ್ರಿ ತಡವಾಗಿ ಮಲಗುವುದನ್ನು ಅಭ್ಯಾಸ ಮಾಡಿಕೊಂಡುಬಿಡುತ್ತಾರೆ. ಹೀಗಾಗದಂತೆ ಶಾಲಾ ಅವಧಿಯಲ್ಲಿ ಏಳುತ್ತಿದ್ದ ಸಮಯಕ್ಕೆ ಏಳುವುದನ್ನು ಮತ್ತು ಯಾವ ಸಮಯದಲ್ಲಿ ಮಲಗುತ್ತಿದ್ದರೋ ಅದೇ ಸಮಯದಲ್ಲಿ ಮಲಗುವುದನ್ನು ಬಿಡದಂತೆ ನೋಡಿಕೊಳ್ಳಬೇಕು. ಮಧ್ಯಾಹ್ನದ ಬಿರುಬಿಸುಲಿನಲ್ಲಿ ಭೋಜನವಾದ ಒಂದೆರಡು ತಾಸಿನ ಬಳಿಕ ತಣ್ಣನೆಯ ವಾತಾವರಣದಲ್ಲಿ ಅವರು ಅಲ್ಪ ನಿದ್ರೆಗೆ ಜಾರುವಂತೆ ಮಾಡಬೇಕು. ಅತಿಯಾಗಿ ಮೊಬೈಲ್ ಫೋನ್, ಟ್ಯಾಬ್ಲೆಟ್ ಅಥವಾ ಟಿವಿಯನ್ನು ಬಳಸುವುದನ್ನು ಖಂಡಿತವಾಗಿಯೂ ತಡೆಯಬೇಕು.

ಮಕ್ಕಳು ಕಂಪ್ಯೂಟರ್ ಪರದೆಯ ಮುಂದೆ ಅಥವಾ ಟಿವಿಯ ಮುಂದೆ ಹೆಚ್ಚು ಹೊತ್ತು ಕಳೆಯದಂತೆ ಅವರನ್ನು ಯಾವುದಾದರೂ ಒಂದು ಚಟುವಟಿಕೆಯಲ್ಲಿ ತೊಡಗಿಸಿಡಬೇಕು. ತಾವಾಗಿಯೇ ಮೈದಾನಕ್ಕೆ ಇಳಿದು ಆಡುವುದಾದರೆ ಸಂತೋಷ. ಇಲ್ಲವಾದರೆ ಅವರನ್ನು ಹೊರಾಂಗಣದ ಚಟುವಟಿಕೆಗಳಲ್ಲಿ ತೊಡಗಿಸಬೇಕು. ಕರಕುಶಲ ಕೆಲಸ, ಚಿತ್ರಕಲೆ, ಮಾಡಿ-ಕಲಿ ಮತ್ತು ಪಾಟರಿ – ಇಂಥವುಗಳಲ್ಲಿ ಅವರನ್ನು ತೊಡಗಿಸಬೇಕು. ಓದುವ ಹವ್ಯಾಸವನ್ನು ಮಕ್ಕಳಲ್ಲಿ ಬೆಳೆಸಲು ಬೇಸಿಗೆ ಸರಿಯಾದ ಸಮಯ. ಆರಂಭದಲ್ಲಿ ಸಣ್ಣಪುಟ್ಟ ಕಥೆಗಳನ್ನು ಓದಿ ಹೇಳಿ ಬಳಿಕ ಚಿಕ್ಕ ಪುಸ್ತಕಗಳನ್ನು ಅವರಿಗೆ ಓದಲು ಕೊಡಬೇಕು. ಬೇಸಿಗೆಯ ರಜೆಯಲ್ಲಿ ಮಕ್ಕಳಿಗೆ ಹೊಸ ವಿಚಾರಗಳನ್ನು ಹೊಸ ಕೌಶಲಗಳನ್ನು ಕಲಿಸುವ ಪ್ರಯತ್ನ ಮಾಡಬಹುದು. ಅಡುಗೆಯೂ ಒಂದು ಕಲೆ. ಹಾಗೆ ತೋಟಗಾರಿಕೆ ಅಥವಾ ಅವರ ಆಸಕ್ತಿಕರ ಕ್ಷೇತ್ರದಲ್ಲಿ ಏನಾದರೂ ಮಾಡುವಂತೆ ಅವರನ್ನು ಪ್ರೋತ್ಸಾಹಿಸಬೇಕು. ಮಕ್ಕಳ ಮಾನಸಿಕ ಆರೋಗ್ಯಕ್ಕೆ ಪೂರಕವಾದ ಯೋಗ, ಉಸಿರಾಟದ ವ್ಯಾಯಾಮ, ಲಘು ಧ್ಯಾನದ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸಬಹುದು.



ಹೃದಯಕ್ಕೆ ಬೇಕಾಗಬಹುದು 'ಸ್ಟೆಂಟ್'

ಡಾ. ಶ್ರೀಕಾಂತ್ ಕೆ. ವಿ.

ಭಾಗ 3

ಕರೋನರಿ ಅಥಿರೋಸ್ಕ್ಲಿರೋಸಿಸ್ ಚಿಕಿತ್ಸೆಯ ಪ್ರಮುಖ ಉದ್ದೇಶಗಳು: ಹೃದಯದ ಮಾಂಸಖಂಡಗಳಿಗೆ ರಕ್ತದ ಹರಿವಿನ ಕೊರತೆಯನ್ನು ನೀಗಿಸುವುದು ಮತ್ತು ಹೃದಯಾಘಾತದಿಂದ ಆಗಬಹುದಾದ ಸಾವು-ನೋವುಗಳನ್ನು ತಡೆಗಟ್ಟುವುದು. ಇದಕ್ಕೆ ಔಷಧಗಳು, ಆ್ಯಂಜಿಯೋಪ್ಲಾಸ್ಟಿ ಮೂಲಕ ಸ್ಟೆಂಟ್ ಸೇರ್ಪಡಿಕೆ, ಹಾಗೂ ಶಸ್ತ್ರಚಿಕಿತ್ಸೆ ಎಂಬ ಮೂರು ಮಾರ್ಗಗಳಿವೆ. ರೋಗಿಗೆ ಯಾವ ಚಿಕಿತ್ಸಾಮಾರ್ಗ ಸೂಕ್ತ ಎನ್ನುವುದನ್ನು ಹೃದ್ರೋಗತಜ್ಞರು ನಿರ್ಧರಿಸುತ್ತಾರೆ.

ಔಷಧಗಳು ಕರೋನರಿ ಅಥಿರೋಸ್ಕ್ಲಿರೋಸಿಸ್ ಕಾಯಿಲೆಯನ್ನು ನೇರವಾಗಿ ನಿವಾರಿಸುವುದಿಲ್ಲ; ಆದರೆ ಪರೋಕ್ಷವಾಗಿ ಸಹಕರಿಸುತ್ತವೆ. ರಕ್ತನಾಳಗಳಲ್ಲಿನ ಜಿಡ್ಡಿನ ಅಂಶ ಆಂತರಿಕ ವ್ಯಾಸವನ್ನು ಕಿರಿದಾಗಿಸುತ್ತವೆಯಷ್ಟೇ. ರಕ್ತದಲ್ಲಿನ ಕೊಲೆಸ್ಟ್ರಾಲನ್ನು ಹತೋಟಿಯಲ್ಲಿಡುವ ಔಷಧಗಳನ್ನು ನೀಡುವುದರಿಂದ ಮತ್ತಷ್ಟು ಜಿಡ್ಡಿನ ಅಂಶ ಸೇರದಂತೆ ತಡೆಯಬಹುದು. ಕಿರಿದಾದ ರಕ್ತನಾಳಗಳಲ್ಲೂ ಸರಾಗವಾಗಿ ಸಂಚರಿಸುವಂತೆ ರಕ್ತವನ್ನು ತೆಳುವಾಗಿ ಮಾಡಬಲ್ಲ ಔಷಧಗಳನ್ನು ಬಳಸಬಹುದು. ನೈಟ್ರೇಟ್ ಅಂಶ ಇರುವ ಮಾತ್ರೆಗಳು ಹೃದಯದ ರಕ್ತನಾಳಗಳನ್ನು ತಾತ್ಕಾಲಿಕವಾಗಿ ಹಿಗ್ಗಿಸಿ, ರಕ್ತದ ಹರಿವನ್ನು ಹೆಚ್ಚಿಸಿ, ಸ್ವಲ್ಪ ಸಮಯದವರೆಗೆ ಪ್ರಯೋಜನಕಾರಿಯಾಗುತ್ತವೆ. ಕೆಲವು ಔಷಧಗಳು ಹೃದಯದ ಆಕ್ಸಿಜನ್ನಿನ ಅವಶ್ಯಕತೆಯನ್ನು ಕಡಿಮೆಯಾಗಿಸಿ ಪರಿಹಾರ ನೀಡುತ್ತವೆ. ಆರಂಭಿಕ ಮಟ್ಟದ ಕರೋನರಿ ಅಥಿರೋಸ್ಕ್ಲಿರೋಸಿಸ್ ಇರುವವರು ನಿಯಮಿತ ಔಷಧ ಬಳಕೆ, ಪೋಷಕಾಂಶಯುಕ್ತ ಆಹಾರಸೇವನೆ, ದೈಹಿಕ ವ್ಯಾಯಾಮ, ತಂಬಾಕು ತ್ಯಜಿಸುವಿಕೆ, ಅಧಿಕ-ರಕ್ತದೊತ್ತಡ ಹಾಗೂ ಮಧುಮೇಹಗಳ ಹತೋಟಿಯಲ್ಲಿಡುವಿಕೆ, ಮತ್ತು ಸಕಾಲಿಕ ವೈದ್ಯಕೀಯ ತಪಾಸಣೆಗಳನ್ನು ಜೀವನಪರ್ಯಂತ ತಪ್ಪದೇ ಪಾಲಿಸಿದಲ್ಲಿ, ಹೃದಯ-ಸಂಬಂಧಿ ಸಾವು-ನೋವುಗಳನ್ನು ತಡೆಗಟ್ಟಬಹುದು. ಒಂದು ವೇಳೆ ಔಷಧ ಮತ್ತು ಜೀವನಶೈಲಿಯ ಬದಲಾವಣೆಗಳಿಂದ ಪರಿಹಾರ ಕಂಡುಬಾರದಿದ್ದಲ್ಲಿ, ಮುಂದಿನ ಹಂತಗಳ ಚಿಕಿತ್ಸೆ ಬೇಕಾಗುತ್ತದೆ.

ಆ್ಯಂಜಿಯೋಗ್ರಾಮ್ ಮೊದಲಾದ ಪರೀಕ್ಷೆಗಳು ಕರೋನರಿ ರಕ್ತನಾಳಗಳ ಯಾವ ಭಾಗದಲ್ಲಿ ರಕ್ತದ ಹರಿವಿನ ಕೊರತೆಯಿದೆ ಮತ್ತು ಅದು ಎಷ್ಟು ತೀವ್ರವಾಗಿದೆ ಎಂಬ ಮಾಹಿತಿ ನೀಡುತ್ತವೆ. ಒಂದು ವೇಳೆ ರಕ್ತನಾಳಗಳು ಇಡಿಯಾಗಿ ಮುಚ್ಚಿಹೋಗಿದ್ದರೆ ರಕ್ತದ ಹರಿವು ಸಂಪೂರ್ಣವಾಗಿ ನಿಂತುಹೋಗಿ ಹೃದಯದ ಸ್ನಾಯುಗಳಿಗೆ ಶಾಶ್ವತ ಹಾನಿಯಾಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ಯಾವ ಚಿಕಿತ್ಸೆಯೂ ಫಲಕಾರಿಯಾಗುವುದಿಲ್ಲ. ಆದರೆ ರಕ್ತನಾಳಗಳಲ್ಲಿ ರಕ್ತದ ಹರಿವು ಅಲ್ಪ-ಸ್ವಲ್ಪ ಆಗುತ್ತಿದೆ; ಹೃದಯದ ಸ್ನಾಯುಗಳಿಗೆ ಶಾಶ್ವತ ಹಾನಿ ಆಗಿಲ್ಲ ಎಂದಾದರೆ ಕೊರೋನರಿ ಆ್ಯಂಜಿಯೋಪ್ಲಾಸ್ಟಿ ಚಿಕಿತ್ಸೆಯನ್ನು ಮಾಡಬಹುದು. ಈ ಪ್ರಕ್ರಿಯೆಗೆ ಮುನ್ನ ರಕ್ತವನ್ನು ತೆಳುವಾಗಿಸುವ ಮಾತ್ರೆಗಳನ್ನು ನೀಡಬೇಕು. ಆ್ಯಂಜಿಯೋಗ್ರಾಮ್ ಪರೀಕ್ಷೆಯಲ್ಲಿ ರಕ್ತದ ಹರಿವಿನ ಅಡ್ಡಿ ರಕ್ತನಾಳದ ಯಾವ ಭಾಗದಲ್ಲಿ, ಶೇಕಡಾವಾರು ಎಷ್ಟು ಪ್ರಮಾಣದಲ್ಲಿ, ಎಷ್ಟು ಉದ್ದವಿದೆ; ಅದರೊಳಗಿನ ಕ್ಯಾಲ್ಸಿಯಂ ಪ್ರಮಾಣವೇನು ಎನ್ನುವ ವಿವರಗಳನ್ನು ಪಡೆಯಲಾಗುತ್ತದೆ. ರಕ್ತನಾಳದ ಮೂಲಕ ಹಾಯಿಸಿರುವ ತೂರ್ನಳಿಕೆಯ ಒಳಗೆ ಸಪೂರವಾದ, ನವಿರಾದ ತಂತಿಯನ್ನು 'ಅಥಿರೋಸ್ಕ್ಲಿರೋಸಿಸ್' ಆಗಿರುವ ಭಾಗದ ಮೂಲಕ ತೂರಿಸಲಾಗುತ್ತದೆ. ರಕ್ತದ ಹರಿವಿಗೆ ಅಡ್ಡಿಯಾಗಿರುವ ಭಾಗದ ಉದ್ದ ಮತ್ತು ಅಗಲಗಳಿಗೆ ಅನುಗುಣವಾಗಿ ಸರಿಯಾದ ಗಾತ್ರದ ಬಲೂನ್ ಒಂದನ್ನು ತಂತಿಯ ಮೇಲೆ ಹಾಯಿಸಿ, ಅಥಿರೋಸ್ಕ್ಲಿರೋಸಿಸ್ ಆಗಿರುವ ಭಾಗದಲ್ಲಿ ಇರಿಸಿ, ಬಲೂನನ್ನು ಹಿಗ್ಗಿಸಲಾಗುತ್ತದೆ. ಇದರಿಂದ ರಕ್ತನಾಳದಲ್ಲಿ ಕಟ್ಟಿಕೊಂಡಿದ್ದ ಕೊಬ್ಬಿನ ಅಂಶ ಚದುರಿಹೋಗಿ, ಒಳವ್ಯಾಸ ಹೆಚ್ಚಾಗಿ, ರಕ್ತದ ಹರಿವು ಉತ್ತಮಗೊಳ್ಳುತ್ತದೆ. ಆದರೆ ಬಲೂನನ್ನು ತೆಗೆದ ನಂತರ ರಕ್ತನಾಳ ಮತ್ತೊಮ್ಮೆ ಸಂಕುಚಿಸಬಹುದು. ಇದನ್ನು ತಡೆಯಲು ಆ ಭಾಗದಲ್ಲಿ ನವಿರಾದ ಲೋಹದ ಜಾಲರಿಯನ್ನು ಬಲೂನಿನ ಸಹಾಯದಿಂದ ಕೂರಿಸಬಹುದು. ಇದನ್ನು 'ಸ್ಟೆಂಟ್' ಎನ್ನುತ್ತಾರೆ.

ಅಥಿರೋಸ್ಕ್ಲಿರೋಸಿಸ್ ಭಾಗದಲ್ಲಿರುವ ಅಧಿಕ ಕ್ಯಾಲ್ಸಿಯಂ ಮತ್ತು ಹೆಪ್ಪುಗಟ್ಟಿದ ರಕ್ತವನ್ನು ಈಗ ಲಭ್ಯವಿರುವ ಅತ್ಯಾಧುನಿಕ ಸಲಕರಣೆಗಳ ನೆರವಿನಿಂದ ನಿವಾರಿಸಿ, ಸ್ಟೆಂಟ್ ಅನ್ನು ಕೂರಿಸಬಹುದು. ಆ್ಯಂಜಿಯೋಪ್ಲಾಸ್ಟಿ ಚಿಕಿತ್ಸೆಗೆ ಪ್ರಜ್ಞೆ ತಪ್ಪಿಸುವಂತಹ ಅರಿವಳಿಕೆ ಬೇಕಿಲ್ಲ; ಚಿಕಿತ್ಸೆಯ ಮರುದಿನ ರೋಗಿಯನ್ನು ಮನೆಗೆ ಕಳುಹಿಸಲಾಗುತ್ತದೆ; ವಾರದೊಳಗೆ ರೋಗಿಯು ತನ್ನ ದೈನಂದಿನ ಕಾರ್ಯಗಳಲ್ಲಿ ತೊಡಗಬಹುದು.

ಕರೋನರಿ ರಕ್ತನಾಳಗಳ ಕೆಲವು ನಾಜೂಕಾದ ಭಾಗಗಳಲ್ಲಿ ಇರಬಹುದಾದ ಅಥಿರೋಸ್ಕ್ಲಿರೋಸಿಸ್‌ಗೆ ಆಂಜಿಯೋಪ್ಲಾಸ್ಟಿ ಚಿಕಿತ್ಸೆ ಸಾಧ್ಯವಾಗುವುದಿಲ್ಲ. ಆಗ ಪ್ರಜ್ಞೆ ತಪ್ಪಿಸುವಂತಹ ಅರಿವಳಿಕೆ ಬಳಸಿ ಮಾಡುವ ಬೈಪಾಸ್ ಶಸ್ತ್ರಚಿಕಿತ್ಸೆ ಬೇಕಾಗುತ್ತದೆ. ರಕ್ತನಾಳದಲ್ಲಿ ಅಡ್ಡಿ ಇರುವ ಭಾಗದ ಹಿಂದೆ ಮತ್ತು ಮುಂದೆ ಇರುವ ಆರೋಗ್ಯಕರ ಭಾಗಗಳನ್ನು ಬೇರೊಂದು ರಕ್ತನಾಳ ಬಳಸಿ ಪರಸ್ಪರ ಜೋಡಿಸಬಹುದು. ಹೀಗೆ ಜೋಡಿಸಲು ರಕ್ತನಾಳದ ಗಾತ್ರದ ಆವಶ್ಯಕತೆಗೆ ಅನುಗುಣವಾಗಿ ಎದೆಯಲ್ಲಿ, ಕೈಯಲ್ಲಿ, ಅಥವಾ ಕಾಲಿನಲ್ಲಿರುವ ಕೆಲವು ಆರೋಗ್ಯವಂತ ಧಮನಿಗಳನ್ನು ಬಳಸಬಹುದು. ಈ ಶಸ್ತ್ರಚಿಕಿತ್ಸೆಯ ವೇಳೆ ಹೃದಯದಲ್ಲಿ ಬೇರಾವುದೇ ಸಮಸ್ಯೆ ಇದ್ದರೂ ಸರಿಪಡಿಸಬಹುದು; ಐದರಿಂದ ಏಳು ದಿನಗಳ ನಂತರ ರೋಗಿಯ ಬಿಡುಗಡೆ; ನಾಲ್ಕಾರು ವಾರಗಳಲ್ಲಿ ತಮ್ಮ ಕೆಲಸಗಳಲ್ಲಿ ತೊಡಗಬಹುದು. ಇತ್ತೀಚೆಗೆ ವಿಶೇಷ ದುರ್ಬೀನುಗಳನ್ನು ಬಳಸಿ ರೊಬೊಟಿಕ್ ಯಂತ್ರಗಳ ನೆರವಿನಿಂದ ಮಾಡುವ ಬೈಪಾಸ್ ಶಸ್ತ್ರಚಿಕಿತ್ಸೆಯಿಂದ ರೋಗಿಗಳು ಮತ್ತೂ ಶೀಘ್ರವಾಗಿ ಗುಣಮುಖರಾಗುತ್ತಿದ್ದಾರೆ.

ಆ್ಯಂಜಿಯೋಪ್ಲಾಸ್ಟಿ ಮತ್ತು ಬೈಪಾಸ್ ಶಸ್ತ್ರಚಿಕಿತ್ಸೆಗಳು ಎಷ್ಟೇ ಸುರಕ್ಷಿತ ಹಾಗೂ ಸುಲಭ ಲಭ್ಯವಿದ್ದರೂ, ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಂಡು ಹೃದಯಾಘಾತವಾಗದಂತೆ ತಡೆಗಟ್ಟುವುದೇ ಜಾಣತನ.

ಸಿಇಟಿ- ನೀಟ್ ಪರೀಕ್ಷೆ ದಿಕ್ಸೂಚಿ

CET CHEMISTRY

MULTIPLE CHOICE QUESTIONS

41) The sharp melting point of crystalline solids is due to ....

a) a regular arrangement of constituent particles observed over a short distance in the crystal lattice.
b) a regular arrangement of constituent particles observed over a long distance in the crystal lattice.
c) Same arrangement of constituent particles in different directions.
d) different arrangement of constituent particles in different directions.

Ans:- b

42) Which of the following is not the characteristic of ionic solids?

a) Very low value of electrical conductivity in the molten state.
b) Brittle nature. c) Anisotropic nature.
d) very strong forces of interactions.

Ans:- a

43) The correct arrangement for the ions in the increasing order of their radii is

a) Na^+, Cl^-, Ca^{2+} b) Ca^{2+}, K^+, S^{2-}
c) Na^+, Al^{3+}, Be^{2+} d) Cl^-, F^-, S^{2-}

Ans:- b

Species	At No.	No. of e^-
Ca^{2+}	20	18
K^+	19	18
S^{2-}	16	18

The species Ca^{2+}, K^+ and S^{2-} are isoelectronic. For isoelectronic ions, the radius decreases as the nuclear charge increases. Hence, the increasing order of their radii is $Ca^{2+} < K^+ < S^{2-}$

44) The factors that influence the rate of a reaction are ....

a) Nature of the reactants
b) Concentration of the reactants
c) Temperature of the reaction d) all of these

Ans:- d

45) Silicon doped with electron-rich impurity forms .... semiconductor.

a) p-type b) n-type
c) intrinsic d) insulator

Ans:- b

46) The statement that is not correct is

a) Aldose or ketose sugars in alkaline medium to not isomerise
b) Carbohydrates are optically active.
c) Pentaacetate of glucose does not react with hydroxylamine.
d) Lactose has glycosidic linkage between C_4 of glucose and C_1 of galactose unit.

Ans:- a

47) Incorrectly matched pair is:..............

a) XeF_6 – distorted octahedral
b) $XeOF_4$ – square pyramidal
c) XeO_3 – pyramidal
d). XeF_4 – tetrahedral

Ans: (d)

Expln:- In XeF_6 there are 6 bond pairs and one lone pair. Thus the shape of XeF_6 is distorted octahedral.

In $XeOF_4$, Xe is sp^3d hybridized and the shape is square pyramidal.

In XeO_3, Xe is sp^3 hybridized and the shape is trigonal pyramidal.

In XeF_4, Xe is sp^3d^2 hybridized. It has 4 bond pairs and two lone pairs. Thus, the shape is square planar.

48) Which of the following is a network solid?

a) SO_2 (solid) b) I_2
c) Diamond d) H_2O (Ice)

Ans:-C

49) Which of the following solids is not an electrical conductor?

i) Mg (s) ii) TiO (s)
iii) I_2 (s) iv) H_2O (s)

a) (i) only b) (ii) only
c) (iii) and (iv) only d) (ii), (iii) and (iv)

Ans:-c


50) Bond angle in PH_4^+ is more than that of PH_3. This is because:

a) PH_3 has a planar trigonal structure
b) Hybridisation of P changes when PH_3 is converted to PH_4^+
c) Lone pair-bond pair repulsion exists in PH_3
d) PH_4^+ has a square planar structure


Ans: (c)

Expln:- The hydrides of group 15, 16 below the 3rd period, follows Drago's rule. The rule states that due to a large energy difference between the atomic orbitals, these compounds do not exhibit hybridization. Thus, PH_3 will not exhibit hybridization and here the bond formation takes place due to the overlap of pure p-orbitals and s-orbitals. PH_3 has a lone pair on the central P atom, which is absent in PH_4^+. Thus in PH_3, there will be bond pair – lone pair repulsion and this is the reason why the bond angle in PH_3 is less than that of PH_4^+.

51)




Soln: (a)



NEET PHYSICS

6. When a potential difference of 10^3V is applied between A and B, a charge of 0.75 mC is value of C is (in μ F)




(a) $\frac{1}{2}$ (b) 2
(c) 2.5 (d) 3

Ans:- (b)

Expln- In given circuit, 2 μ F & 2 μ F capacitors are in series

$$\therefore C_S = \frac{2 \times 2}{2+2} = 1\,\mu F$$

So, equivalent circuit will be



Now C μ F and 1 μ F are in parallel which is in series with 1 μ F

$\therefore C_{eff} = \frac{(C+1)\times 1}{(C+1)+1} = \frac{C+1}{C+2}$


Given, $q = 0.75\times10^{-3}\,C = 750\times10^{-6}\,C, V = 10^3\,V$

So, $C_{eff} = \frac{q}{v}$

$\Rightarrow \frac{C+1}{C+2} = \frac{750\times10^{-6}}{10^3} = 750\times10^{-3}\,F = 0.75\,\mu F$

$\Rightarrow 0.75 = \frac{C+1}{C+2} \Rightarrow \frac{3}{4} = \frac{C+1}{C+2} \Rightarrow 3C+6 = 4C+4 \Rightarrow C = 2\mu F$


7) A wheel of a bullock cart is rolling on a level road as shown in the figure below. If its linear speed is v in the direction shown, which one of the following options is correct (P and Q are any highest and lowest points on the wheel, respectively)?



(a) Point P moves slower than point Q
(b) Point P moves faster than point Q
(c) Both the points P and Q move with equal speed
(d) Point P has zero speed


Ans (b)

Expln:- In the case of pure rolling,



The topmost point will have velocity 2v while point Q i.e. lowest point will have zero velocity. Hence point P moves faster than point Q.

8) In the circuit diagram, heat produces in R, 2R and 1.5 R are in the ratio of



(a) 4 : 2 : 3 (b) 8 : 4 : 27
(c) 2 : 4 : 3 (d) 27 : 8 : 4

Ans:- (b)

Expln– We have $I_1 = \frac{I\times 2R}{3R} = \frac{2I}{3}$

$\therefore H_1 = I_1^2 R = \frac{4I^2}{9}\times R$ ....(i)

Also, $I_2 = \frac{I\times R}{3R} = \frac{I}{3}$

$\therefore H_2 = I_2^2(2R) = \frac{I^2}{9}\times 2R$ ....(ii)

and $H_3 = I^2(1.5\,R)$ .... (iii)

From Eqns. (i), (ii) and (iii),

$H_1 : H_2 : H_3 = \frac{4I^2}{9}\times R : \frac{I^2}{9}\times 2R : I^2 \times 1.5\,R$

$= \frac{4}{9} : \frac{2}{9} : 1.5 = 4:2:13.5 = 8:4:27$

9) White light reflected from a soap film (RI=1.5) has a maxima at 600 nm and a minima at 450 nm with no minimum in between. Then the thickness of the film is

(a) 1 (b) 2
(c) 3 (d) 4

Ans:- (c)

Expln- We know for maxima

$$2\mu t \cos r = \frac{(2n+1)\lambda_1}{2} \quad ....(i)$$

For minima $2\mu t \cos r = (n+1)\lambda_2$ ...(ii)

Given here, $\lambda_1 = 600$ nm and $\lambda_2 = 450$ nm

Dividing Eq. (i) by (ii) and substituting values of λ_1 and λ_2, we get

$$\frac{(2n+1)\lambda_1}{2(n+1)\lambda_2} = 1$$

$$\Rightarrow 90n + 90 = 60n + 60$$

$$30n = 30 \Rightarrow n = 1$$

Using one of the equation, we get *(Contd.......)*

ವಿಧಾನ ಪರಿಷತ್‌ನ 4 ಸ್ಥಾನಕ್ಕೆ 150 ಆಕಾಂಕ್ಷಿಗಳು ● ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ದೆಹಲಿ ಪ್ರವಾಸ ನಾಳೆ

ಸಣ್ಣ ಸಮುದಾಯಗಳಿಗೆ ಸಿಗುವುದೇ ಅವಕಾಶ?

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಧಾನ ಪರಿಷತ್‌ನ ನಾಲ್ಕು ಸ್ಥಾನಗಳಿಗೆ ನಾಮನಿರ್ದೇಶನ ಮಾಡುವ ಸಂದರ್ಭದಲ್ಲಿ ಸಣ್ಣ ಸಣ್ಣ ಹಾಗೂ ಅವಕಾಶ ವಂಚಿತ ಸಮುದಾಯಗಳನ್ನು ಪರಿಗಣಿಸಬೇಕು ಎಂಬ ಹಕ್ಕೊತ್ತಾಯ 'ಕೈ' ಪಾಳಯದಲ್ಲಿ ವ್ಯಕ್ತವಾಗಿದೆ.

'ಅಹಿಂದ ನಾಯಕರಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿಂದುಳಿದ ವರ್ಗಗಳ ಚಾಂಪಿಯನ್ ಎಂದು ಬಿಂಬಿಸಿಕೊಂಡಿದ್ದಾರೆ. ಮುಖ್ಯಮಂತ್ರಿಯಾಗಿ ದೇವರಾಜ ಅರಸು ಅವರ ದಾಖಲೆ ಮುರಿಯುವ ಉಮೇದಿನಲ್ಲಿದ್ದಾರೆ. ಅವರು ಎರಡು ಅವಧಿಗೆ ಮುಖ್ಯಮಂತ್ರಿಯಾಗಲು ಸಣ್ಣ ಸಮುದಾಯಗಳ ಕೊಡುಗೆ ದೊಡ್ಡದು. ಆದರೆ, ತಮ್ಮ ಏಳು ವರ್ಷಗಳ ಅಧಿಕಾರದ ಅವಧಿಯಲ್ಲಿ ಸಣ್ಣ ಸಮುದಾಯಗಳನ್ನು ಗುರುತಿಸಿದ್ದು ಕಡಿಮೆ. ಪ್ರಬಲ ಜಾತಿಗಳ ಒತ್ತಡಕ್ಕೆ ಮಣಿದು ಈ ಹಿಂದೆ ಪ್ರಭಾವಿಗಳಿಗೆ ಮಣೆ ಹಾಕಿದ್ದರು. ಈ ಸಲ ಅಂತಹ ಒತ್ತಡಕ್ಕೆ ಮಣಿಯಬಾರದು. ಸಣ್ಣ ಸಮುದಾಯಗಳಿಗೆ ಅವಕಾಶ ಕಲ್ಪಿಸಬೇಕು' ಎಂದು ಹಿರಿಯ ನಾಯಕರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ರಾಜ್ಯಸಭೆ ಹಾಗೂ ವಿಧಾನ ಪರಿಷತ್‌ಗೆ ನಾಮನಿರ್ದೇಶನ ಮಾಡುವ ಸಂದರ್ಭದಲ್ಲಿ ಸಣ್ಣ ಸಮುದಾಯವನ್ನು ಗುರುತಿಸುವ ಪರಿಪಾಟವನ್ನು ಬಿಜೆಪಿ ಇತ್ತೀಚಿನ ವರ್ಷಗಳಲ್ಲಿ ಬೆಳೆಸಿಕೊಂಡಿದೆ. ಕಾಂಗ್ರೆಸ್‌ನಲ್ಲಿ ಅಂತಹ ಸಂಸ್ಕೃತಿಯೇ ಇಲ್ಲ. ಹೈಕಮಾಂಡ್, ಕೆಪಿಸಿಸಿ ಅಧ್ಯಕ್ಷರು ಹಾಗೂ ಮುಖ್ಯಮಂತ್ರಿಯ ಬಾಲಂಗೋಚಿಗಳಿಗೆ ಮಣೆ ಹಾಕಲಾಗುತ್ತಿದೆ. ಇದರಿಂದಾಗಿ, ಕೆಲವು ಮುಖಂಡರು ಪದೇ ಪದೇ ಪರಿಷತ್‌ಗೆ ಆಯ್ಕೆಯಾಗುತ್ತಿದ್ದಾರೆ. ಪಕ್ಷ ಸಂಘಟನೆಗೆ ಅವರ ಕೊಡುಗೆ ಶೂನ್ಯ. ಈ ಸಲ ಹೊಸ ಪರಂಪರೆಗೆ ನಾಂದಿ ಹಾಡಬೇಕು' ಎಂದು ಮತ್ತೊಬ್ಬ ನಾಯಕರು ಒತ್ತಾಯಿಸಿದರು.

ಪರಿಷತ್‌ಗೆ ನಾಮನಿರ್ದೇಶನ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೈಕಮಾಂಡ್‌ನ ನಾಯಕರ ಜೊತೆ ಗುರುವಾರ ಸಮಾಲೋಚನೆ ನಡೆಸಲಿದ್ದಾರೆ. ಪರಿಷತ್ ಸದಸ್ಯರಾಗಲು 150ಕ್ಕೂ ಅಧಿಕ ಮುಖಂಡರು ರಾಜ್ಯ ಹಾಗೂ ರಾಷ್ಟ್ರೀಯ ನಾಯಕರಲ್ಲಿ ವರ್ಷದಿಂದ ಲಾಬಿ ನಡೆಸಿದ್ದಾರೆ.

ಇದೇ 2ರಂದು ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ದೆಹಲಿಗೆ ಬರಲಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರನ್ನು ಇದೇ 3ರಂದು ಭೇಟಿ ಮಾಡಿ ಚರ್ಚೆ ನಡೆಸಲು ಕಾಲಾವಕಾಶ ಕೇಳಿದ್ದಾರೆ. ಸಚಿವ ಸಂಪುಟ ವಿಸ್ತರಣೆ ಬಗ್ಗೆಯೂ ಇದೇ ವೇಳೆ ಪ್ರಸ್ತಾಪವಾಗುವ ಸಂಭವ ಇದೆ.

ನಾಳೆ ಕರ್ನಾಟಕ ಭವನ ಉದ್ಘಾಟನೆ

ದೆಹಲಿಯ ಚಾಣಕ್ಯಪುರಿಯಲ್ಲಿರುವ ನೂತನ ಕರ್ನಾಟಕ ಭವನ 'ಕಾವೇರಿ' ಕಟ್ಟಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಇದೇ 2ರಂದು ಸಂಜೆ 6.30ಕ್ಕೆ ಉದ್ಘಾಟಿಸಲಿದ್ದಾರೆ.

ಕಟ್ಟಡ ನಿರ್ಮಾಣಕ್ಕೆ 2019ರಲ್ಲಿ ಭೂಮಿ ಪೂಜೆ ನಿರ್ಮಿಸಲಾಗಿತ್ತು. ಆರಂಭದಲ್ಲಿ ಈ ಕಟ್ಟಡದ ಅಂದಾಜು ವೆಚ್ಚ ₹80 ಕೋಟಿ ಆಗಿತ್ತು. ಈಗ ₹140 ಕೋಟಿಗೆ ಏರಿದೆ. ಕಟ್ಟಡ ನಿರ್ಮಾಣ ಅವೈಜ್ಞಾನಿಕವಾಗಿದೆ ಎಂದು ಸಿದ್ದರಾಮಯ್ಯ ಹಾಗೂ ಸದನ ಸಮಿತಿಯ ಸದಸ್ಯರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದರು.

ಕಾಂಗ್ರೆಸ್ ಪರಿಷತ್ ಸದಸ್ಯರು ಸಮುದಾಯ ಪ್ರಾತಿನಿಧ್ಯ	
*ಒಬಿಸಿ	9
ಒಕ್ಕಲಿಗ	8
ಲಿಂಗಾಯತ	7
ಮುಸ್ಲಿಂ	4
ಪರಿಶಿಷ್ಟ ಜಾತಿ	3
ಪರಿಶಿಷ್ಟ ಪಂಗಡ	1
ಕ್ರೈಸ್ತ	1

*ಒಬಿಸಿ: (ಗೊಲ್ಲ–2, ಈಡಿಗ–2, ರಾಜು ಕ್ಷತ್ರಿಯ 1, ಬಲಜಿಗ–1, ಕುರುಬ–1, ಬೆಸ್ತ–1, ದೇವಾಂಗ–1)

ಪರಿಷತ್ ಸದಸ್ಯರಾಗಿದ್ದ ಕಾಂಗ್ರೆಸ್‌ನ ಯು.ಬಿ.ವೆಂಕಟೇಶ್, ಪ್ರಕಾಶ್ ರಾಠೋಡ್ ಅವರ ಅವಧಿ 2024ರ ಅಕ್ಟೋಬರ್‌ಗೆ ಹಾಗೂ ಜೆಡಿಎಸ್‌ನ ಕೆ.ಎಂ. ತಿಪ್ಪೇಸ್ವಾಮಿ ಅವಧಿ ಜನವರಿಗೆ ಅಂತ್ಯವಾಗಿದೆ. ಚನ್ನಪಟ್ಟಣ ವಿಧಾನಸಭಾ ಉಪಚುನಾವಣೆಯಲ್ಲಿ ಗೆಲುವು ಸಾಧಿಸಿದ್ದ ಸಿ.ಪಿ.ಯೋಗೇಶ್ವರ ಅವರು ಪರಿಷತ್ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಕಾಂಗ್ರೆಸ್‌ನಿಂದ ನಾಲ್ವರು ಸದಸ್ಯರನ್ನು ನಾಮನಿರ್ದೇಶನ ಮಾಡಲು ಅವಕಾಶ ಇದೆ.

ಯು.ಬಿ.ವೆಂಕಟೇಶ್ ಅವರು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಸವನಗುಡಿ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು. ಆ ಬಳಿಕ ಅವರನ್ನು ಎಐಸಿಸಿ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿತ್ತು. ಅವರು ಖರ್ಗೆ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದಾರೆ. ಮತ್ತೊಂದು ಅವಧಿಗೆ ಪರಿಷತ್ ಸದಸ್ಯರಾಗಲು ಲಾಬಿ ನಡೆಸುತ್ತಿದ್ದಾರೆ. ಸಿದ್ದರಾಮಯ್ಯ ಆಪ್ತರಾಗಿರುವ ಪ್ರಕಾಶ್ ರಾಠೋಡ್ ಅವರು ಲಂಬಾಣಿ ಕೋಟಾದಲ್ಲಿ ತಮಗೆ ಅವಕಾಶ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಸೋಲುಂಡಿದ್ದ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಲಾಬಿ ನಡೆಸಿದ್ದಾರೆ. 'ರಾಜ್ಯದಲ್ಲಿ 100 ಕಾಂಗ್ರೆಸ್ ಕಚೇರಿಗಳನ್ನು ನಿರ್ಮಾಣ ಮಾಡಬೇಕು ಎಂದು ಎಐಸಿಸಿ ಸೂಚನೆ ನೀಡಿದೆ. ಪರಿಷತ್‌ಗೆ ನಾಮನಿರ್ದೇಶನ ಮಾಡಿದರೆ 12 ಜಿಲ್ಲೆಗಳಲ್ಲಿ ನಾನೇ ಕಟ್ಟಡ ಕಟ್ಟಿಸಿಕೊಡುತ್ತೇನೆ' ಎಂದು ಅವರು ಖರ್ಗೆ, ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

'ಕಳೆದ 30 ವರ್ಷಗಳಿಂದ ಕಾಂಗ್ರೆಸ್‌ನಿಂದ ಜೈನ ಸಮುದಾಯದವರನ್ನು ಪರಿಷತ್‌ಗೆ ನಾಮನಿರ್ದೇಶನ ಮಾಡಿಲ್ಲ. ಈ ಸಲ ಅವಕಾಶ ಕಲ್ಪಿಸಬೇಕು' ಎಂದು ಜೈನ ಸಮುದಾಯದ ನಾಯಕರು ಅಹವಾಲು ಮಂಡಿಸಿದ್ದಾರೆ. ಬಿಎಂಟಿಸಿ ಮಾಜಿ ಅಧ್ಯಕ್ಷ ನಾಭಿರಾಜ್ ಜೈನ್ ಪರಿಷತ್ ಸ್ಥಾನಕ್ಕೆ ಪ್ರಬಲ ಆಕಾಂಕ್ಷಿ. ಜೈನ ಸಮುದಾಯದ ನಿಯೋಗವು ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದೆ. 'ರಾಜ್ಯದಲ್ಲಿ ಜೈನ ಸಮುದಾಯದವರು 50 ಲಕ್ಷದಷ್ಟು ಇದ್ದಾರೆ. ಎಂ. ವೀರಪ್ಪ ಮೊಯಿಲಿ ಅವರು ಮುಖ್ಯಮಂತ್ರಿಯಾಗಿದ್ದಾಗ ಅಭಯ ಚಂದ್ರ ಜೈನ್ ಅವರನ್ನು ಪರಿಷತ್‌ಗೆ ನಾಮನಿರ್ದೇಶನ ಮಾಡಲಾಗಿತ್ತು. ಆ ಬಳಿಕ ಸಮುದಾಯವರನ್ನು ಪರಿಗಣಿಸಿಯೇ ಇಲ್ಲ' ಎಂದು ವೇಣುಗೋಪಾಲ್ ಗಮನಕ್ಕೆ ತಂದಿದ್ದಾರೆ.

ಪಕ್ಷದ ನಾಯಕರಾದ ಬಿ.ಎಲ್. ಶಂಕರ್, ವಿ.ಆರ್.ಸುದರ್ಶನ್, ಸಾಧು ಕೋಕಿಲಾ, ಸಂಗೀತ ಕಟ್ಟಿ, ಬಾಲರಾಜ್ ನಾಯಕ್, ವಿನಯ್ ಕಾರ್ತಿಕ್, ಎಐಸಿಸಿ ಕಾರ್ಯದರ್ಶಿ ಬಿ.ಎಂ. ಸಂದೀಪ್, ಸಿ.ಎಸ್.ದ್ವಾರಕಾನಾಥ್, ರಮೇಶಬಾಬು, ಕೆಪಿಸಿಸಿ ಕಚೇರಿ ಕಾರ್ಯದರ್ಶಿ ಎಲ್.ನಾರಾಯಣ್, ಸೂರಜ್ ಹೆಗ್ಡೆ, ಐಶ್ವರ್ಯಾ ಮಹದೇವ್, ಕಮಲಾಕ್ಷಿ ರಾಜಣ್ಣ, ವಿಜಯ ಮುಳಗುಂದ್, ಆರತಿ ಕೃಷ್ಣ, ಪುಷ್ಪಾ ಅಮರನಾಥ್, ಡಾ.ಆನಂದ ಕುಮಾರ್ ಮತ್ತಿತರರು ಪ್ರಯತ್ನ ನಡೆಸಿದ್ದಾರೆ.



ಹುಬ್ಬಳ್ಳಿ ಸಮೀಪದ ವರೂರಿನಲ್ಲಿರುವ ನವಗ್ರಹ ತೀರ್ಥಕ್ಷೇತ್ರಕ್ಕೆ ಸೋಮವಾರ ಭೇಟಿ ನೀಡಿದ ಗೋವಾ ಮುಖ್ಯಮಂತ್ರಿ ಪ್ರಮೋದ ಸಾವಂತ ಸುಮೇರು ಪರ್ವತದಲ್ಲಿರುವ ತೀರ್ಥಂಕರ ಪ್ರತಿಮೆ ವೀಕ್ಷಿಸಿದರು. ತೀರ್ಥಕ್ಷೇತ್ರದ ಗುಣಧರನಂದಿ ಮಹಾರಾಜ, ಶಾಸಕರಾದ ಮಹೇಶ ಟೆಂಗಿನಕಾಯಿ, ಎಂ.ಆರ್. ಪಾಟೀಲ ಉಪಸ್ಥಿತರಿದ್ದರು

'ಜೈನ ಅಭಿವೃದ್ಧಿ ನಿಗಮ ಪಡೆಯುವುದು ನನ್ನ ಹಕ್ಕು'

ಹುಬ್ಬಳ್ಳಿ: 'ಜೈನ ಅಭಿವೃದ್ಧಿ ನಿಗಮ ಪಡೆಯುವುದು ನನ್ನ ಹಕ್ಕು. ಇದನ್ನು ಅತ್ತಾದರೂ ಸರಿ, ಸತ್ತಾದರೂ ಸರಿ ಪಡೆದೇ ತೀರುವೆ' ಎಂದು ವರೂರಿನ ನವಗ್ರಹ ತೀರ್ಥಕ್ಷೇತ್ರದ ಗುಣಧರನಂದಿ ಮಹಾರಾಜ ಪುನರುಚ್ಚರಿಸಿದರು.

ಇಲ್ಲಿಗೆ ಸಮೀಪದ ವರೂರಿನಲ್ಲಿ ಇರುವ ನವಗ್ರಹ ತೀರ್ಥಕ್ಷೇತ್ರದಲ್ಲಿ ಸೋಮವಾರ ನಡೆದ ತೀರ್ಥಂಕರ ಮಹಾಮಸ್ತಕಾಭಿಷೇಕದ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.


'ಮುಂಬರುವ 6 ತಿಂಗಳೊಳಗೆ ನಿಗಮ ಸ್ಥಾಪಿಸುವುದಾಗಿ ಸರ್ಕಾರ ಭರವಸೆ ನೀಡಿದೆ. ಇದು ಈಡೇರದಿದ್ದರೆ, 50,000 ಭಕ್ತರ ಜೊತೆ ಬೆಂಗಳೂರಿನಲ್ಲಿ ಆಮರಣ ಉಪವಾಸ ಮಾಡುವೆ' ಎಂದರು.

ಬಿಜೆಪಿ ಶಾಸಕ ಮಹೇಶ ಟೆಂಗಿನಕಾಯಿ ಮಾತನಾಡಿ, 'ಗುಣಧರನಂದಿ ಮಹಾರಾಜರ ಬೇಡಿಕೆಗೆ ಸ್ಪಂದಿಸಿ ಸರ್ಕಾರವು ಜೈನ ಅಭಿವೃದ್ಧಿ ನಿಗಮ ರಚಿಸಬೇಕು. ಇಲ್ಲದಿದ್ದರೆ, ಮುಂದಿನ 3 ವರ್ಷಗಳ ನಂತರ ನಮ್ಮ ಪಕ್ಷ ಅಧಿಕಾರ ಬಂದಾಗ, ನಾವು ನಿಗಮ ಸ್ಥಾಪಿಸಿ ತೋರಿಸುತ್ತೇವೆ' ಎಂದರು. ಇದಕ್ಕೆ ಶಾಸಕ ಎಂ.ಆರ್. ಪಾಟೀಲ ಕೂಡ ಧ್ವನಿಗೂಡಿಸಿದರು.

ಶಿವಕುಮಾರ ಸ್ವಾಮೀಜಿ ಜಯಂತಿ ಇಂದು

ಗುರುವಂದನೆ ಕಾರ್ಯಕ್ರಮದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾಗಿ

ಪ್ರಜಾವಾಣಿ ವಾರ್ತೆ



ಶಿವಕುಮಾರ ಸ್ವಾಮೀಜಿ

ತುಮಕೂರು: ಸಿದ್ಧಗಂಗಾ ಮಠದ ಲಿಂಗೈಕ್ಯ ಶಿವಕುಮಾರ ಸ್ವಾಮೀಜಿ 118ನೇ ಜಯಂತಿ ಹಾಗೂ ಗುರುವಂದನಾ ಮಹೋತ್ಸವ ಮಂಗಳವಾರ (ಏ.1ರಂದು) ನೆರವೇರಲಿದೆ. ಗುರುವಿಗೆ ನುಡಿನಮನ ಸಲ್ಲಿಸಲು ಸಿದ್ಧಗಂಗಾ ಮಠ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಗುರುವಂದನೆ ಮತ್ತು ಜಯಂತಿ ಪ್ರಯುಕ್ತ ಮಂಗಳವಾರ ಮುಂಜಾನೆಯಿಂದಲೇ ಮಠದಲ್ಲಿ ಧಾರ್ಮಿಕ ಚಟುವಟಿಕೆ ಆರಂಭವಾಗಲಿವೆ. ಇಡೀ ದಿನ ಗುರುವಿನ ನಾಮಸ್ಮರಣೆ ಮೊಳಗಲಿದೆ. ಗುರುವಿಗೆ ನುಡಿ ನಮನ ಸಲ್ಲಿಸಲು ನಾಡಿನ ವಿವಿಧೆಡೆಗಳಿಂದ ಅಪಾರ ಸಂಖ್ಯೆಯ ಭಕ್ತರು ಮಠಕ್ಕೆ ಭೇಟಿ ನೀಡಲಿದ್ದಾರೆ.



ತುಮಕೂರು ಸಿದ್ಧಗಂಗಾ ಮಠದಲ್ಲಿ ಬೂಂದಿ ತಯಾರಿ

ಶಿವಕುಮಾರ ಸ್ವಾಮೀಜಿ ಗದ್ದುಗೆಗೆ ಮುಂಜಾನೆಯಿಂದಲೇ ಮಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ನೇತೃತ್ವದಲ್ಲಿ ಪೂಜಾ ಕೈಂಕರ್ಯ ನೆರವೇರಲಿದ್ದು, ನಾಡಿನ ವಿವಿಧ ಮಠಾಧೀಶರು ಪಾಲ್ಗೊಳ್ಳಲಿದ್ದಾರೆ.

ಮಠದ ಆವರಣದಲ್ಲಿ ಸ್ವಾಮೀಜಿ ಪುತ್ಥಳಿ ಮೆರವಣಿಗೆ ನಡೆದ ನಂತರ ವೇದಿಕೆ ಕಾರ್ಯಕ್ರಮ ನಡೆಯಲಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾಗವಹಿಸುತ್ತಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಆಹ್ವಾನ ನೀಡಲಾಗಿತ್ತು. ಅವರು ಬೇರೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿರುವುದರಿಂದ ಭಾಗವಹಿಸುತ್ತಿಲ್ಲ. ಅವರ ಬದಲಾಗಿ ರಾಜನಾಥ್ ಸಿಂಗ್ ಭಾಗವಹಿಸುತ್ತಿದ್ದಾರೆ.

ಬೆಂಗಳೂರಿನಿಂದ ಹೆಲಿಕಾಪ್ಟರ್ ಮೂಲಕ ತುಮಕೂರಿಗೆ ಬಂದಿಳಿಯುವ ರಾಜನಾಥ ಸಿಂಗ್ ಮೊದಲಿಗೆ ಸ್ವಾಮೀಜಿ ಗದ್ದುಗೆಗೆ ಭೇಟಿ ನೀಡಿ ನಮಿಸಲಿದ್ದಾರೆ. ನಂತರ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮಠದ ಕಿರಿಯ ಸ್ವಾಮೀಜಿ ಸಿದ್ದೇಶ್ವರ ಶ್ರೀ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಜಲಶಕ್ತಿ ಮತ್ತು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, ಸಚಿವರಾದ ಜಿ.ಪರಮೇಶ್ವರ, ಕೆ.ಎನ್.ರಾಜಣ್ಣ ಭಾಗವಹಿಸಲಿದ್ದಾರೆ.

ಗುರುವಂದನಾ ಮಹೋತ್ಸವಕ್ಕೆ ಬರುವ ಭಕ್ತರಿಗೆ ಮಠದ ಐದು ಕಡೆಗಳಲ್ಲಿ ದಾಸೋಹ ವ್ಯವಸ್ಥೆ ಮಾಡಲಾಗಿದೆ. ಬೆಳಿಗ್ಗೆಯಿಂದ ರಾತ್ರಿವರೆಗೂ ಪ್ರಸಾದ ವ್ಯವಸ್ಥೆ ಇರುತ್ತದೆ. ದಾಸೋಹದಲ್ಲಿ ಯಾವುದೇ ಲೋಪವಾಗದಂತೆ ನೋಡಿಕೊಳ್ಳಲು ಮಠದ ಭಕ್ತರು ಟೊಂಕಕಟ್ಟಿ ನಿಂತಿದ್ದಾರೆ.

ಉಗ್ರರ ಚಟುವಟಿಕೆ: ಕಾರ್ಯಾಚರಣೆ ಚುರುಕು

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕಠುವಾ ಜಿಲ್ಲೆಯಲ್ಲಿ ಮೂವರು ಶಂಕಿತ ಉಗ್ರರ ಚಲನ ವಲನ ಕಂಡುಬಂದಿದ್ದು, ಸೇನೆಯು ಪತ್ತೆ ಕಾರ್ಯಾಚರಣೆಯನ್ನು ಚುರುಕುಗೊಳಿಸಿದೆ. ಶಂಕಿತರು, ಕಠುವಾ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಮಾರ್ಚ್ 27ರಂದು ನಡೆದ ಗುಂಡಿನ ಚಕಮಕಿಯಲ್ಲಿ ತಪ್ಪಿಸಿಕೊಂಡಿದ್ದರು ಎನ್ನಲಾಗಿದೆ.

'ಕಠುವಾ ಜಿಲ್ಲೆಯ ರೂಯಿ ಗ್ರಾಮದ ಮನೆಯೊಂದಕ್ಕೆ ಭಾನುವಾರ ರಾತ್ರಿ ನುಗ್ಗಿರುವ ಶಂಕಿತರು, ಆಹಾರ ತಿನಿಸುಗಳನ್ನು ಹೊತ್ತೊಯ್ದಿದ್ದಾರೆ. ಅವರ ಪತ್ತೆಗೆ ಸೇನೆ, ಪೊಲೀಸ್, ಎನ್‌ಎಸ್‌ಜಿ, ಸಿಪಿಆರ್‌ಎಫ್ ಹಾಗೂ ಬಿಎಸ್‌ಎಫ್ ಯೋಧರು ಕಾರ್ಯಾಚರಣೆ ಆರಂಭಿಸಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಯುಗಾದಿ ಸಂಭ್ರಮ...

ಚಾಮರಾಜನಗರ ಜಿಲ್ಲೆಯ ಮಹದೇಶ್ವರ ಬೆಟ್ಟದಲ್ಲಿ ಭಾನುವಾರ ಯುಗಾದಿ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಮಹಾರಥೋತ್ಸವದಲ್ಲಿ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡಿದ್ದರು ಚಿತ್ರ: ಜಿ. ಪ್ರದೀಪ್‌ಕುಮಾರ್

ಕೊಲೆ ಸಂಚು ಆಡಿಯೊ ಬಯಲು

ಒಂದನೇ ಪುಟದಿಂದ...

'ಹೊಸ ವರ್ಷದಲ್ಲಿ (2025ರಲ್ಲಿ) ಸಚಿವರ ಮಗನನ್ನೇ ಕೊಲೆ ಮಾಡಬಹುದು. ಸಚಿವರ ಮಕ್ಕಳನ್ನು ಕೊಲೆ ಮಾಡುತ್ತಾರೆ ಎಂಬುದು ಅವರಿಗೆ (ಸಚಿವರಿಗೆ) ಗೊತ್ತಾದರೆ ಅವನನ್ನು ಸುಮ್ಮನೆ ಬಿಡುತ್ತಾರೆಯೆ? ರಾಜಣ್ಣ ಮಗನ ತಂಟೆಗೆ ಹೋದರೆ ಸರಿಯಾಗಿ ಮಾಡುತ್ತಾರೆ. ಈ ವಿಚಾರವನ್ನು ಅವರ ಗಮನಕ್ಕೆ ತರಬೇಕು' ಎಂದು ಮಹಿಳೆ ಸಲಹೆ ನೀಡಿದ್ದಾರೆ.

ರಾಜೇಂದ್ರ ನೀಡಿದ ದೂರಿನ ಮೇಲೆ ಸೋಮ ಸೇರಿದಂತೆ ಐವರ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ತನಿಖೆಗೆ ತಂಡ ರಚಿಸಲಾಗಿದೆ. ಮಧುಗಿರಿ ಡಿವೈಎಸ್‌ಪಿ ಮಂಜುನಾಥ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚಿಸಿದ್ದು, ಪ್ರಕರಣದ ತನಿಖೆ ಚುರುಕುಗೊಂಡಿದೆ.

ರಾಜಣ್ಣ ಪಿ.ಎ, ಅಂಗರಕ್ಷಕರ ವಿಚಾರಣೆ

ಒಂದನೇ ಪುಟದಿಂದ...

'ಸಚಿವರನ್ನು ಮಧುಬಲೆಗೆ ಕೆಡವಲು ಬಂದವರು ಯಾರು? ಯಾವ ದಿನ ಬಂದಿದ್ದರು? ಫೋಟೊ ತೋರಿಸಿದರೆ ಆ ವ್ಯಕ್ತಿಗಳನ್ನು ಗುರುತಿಸಲು ಸಾಧ್ಯವೇ ಎಂಬ ಪ್ರಶ್ನೆಗಳನ್ನು ಕೇಳಿ, ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ. ಜಯಮಹಲ್ ರಸ್ತೆಯಲ್ಲಿರುವ ಗೆಸ್ಟ್‌ಹೌಸ್‌ನಲ್ಲಿರುವ ಡೈರಿಯನ್ನು ವಶಕ್ಕೆ ಪಡೆಯಲಾಗಿದೆ. ಆ ಡೈರಿಯಲ್ಲಿ ನಮೂದಿಸಿರುವ ಮೊಬೈಲ್ ಫೋನ್ ಸಂಖ್ಯೆಗಳನ್ನು ಪರಿಶೀಲನೆ ನಡೆಸಲಾಗಿದೆ. ಅಗತ್ಯವಿದ್ದರೆ, ಕೆಲವರನ್ನು ವಿಚಾರಣೆಗೆ ಕರೆಸಲಾಗುತ್ತಿದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

ಪತ್ರದ ಕೆಲವು ಅಂಶಗಳು ಬಹಿರಂಗ: ರಾಜಣ್ಣ ಅವರು ಗೃಹ ಸಚಿವ ಜಿ.ಪರಮೇಶ್ವರ ಅವರಿಗೆ ಮೂರು ಪುಟಗಳ ಪತ್ರ ನೀಡಿ ತನಿಖೆಗೆ ಕೋರಿದ್ದರು. ಪತ್ರದ ಕೆಲವು ಅಂಶಗಳು ಬಹಿರಂಗವಾಗಿವೆ.

'ಸರ್ಕಾರಿ ಬಂಗಲೆ ಹಾಗೂ ಮಧುಗಿರಿಯ ಮನೆಯಲ್ಲಿ ಹನಿಟ್ರ್ಯಾಪ್‌ಗೆ ಯತ್ನ ನಡೆದಿತ್ತು' ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

'30ರಿಂದ 35 ವರ್ಷದೊಳಗಿನ ವ್ಯಕ್ತಿಯ ಜತೆಗೆ ಅಂದಾಜು 25 ವರ್ಷದ ಯುವತಿ 2025ರ ಮಾರ್ಚ್ ಆರಂಭದಲ್ಲಿ ಬೆಳಿಗ್ಗೆ 9.30ರ ಸುಮಾರಿಗೆ ಬೆಂಗಳೂರಿನ ಸರ್ಕಾರಿ ವಸತಿ ಗೃಹಕ್ಕೆ ಬಂದಿದ್ದರು. ಬಂದವರು, ವೈಯಕ್ತಿಕವಾಗಿ ಭೇಟಿ ಮಾಡಬೇಕು ಎಂದು ಹೇಳಿದ್ದರು. ಆಗ ನಾನು ವೈಯಕ್ತಿಕ ಭೇಟಿಯ ಅಗತ್ಯವಿಲ್ಲ. ನಿಮ್ಮ ಅಹವಾಲು ತಿಳಿಸಿ ಎಂದು ಹೇಳಿದ್ದೆ. ಅದಕ್ಕೆ ಅವರು ಇನ್ನೊಮ್ಮೆ ಬರುವುದಾಗಿ ಹೇಳಿ ಹೊರಟು ಹೋದರು' ಎಂದು ರಾಜಣ್ಣ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ ಎಂದು ಗೊತ್ತಾಗಿದೆ.

'ಪತ್ರದಲ್ಲಿ ಉಲ್ಲೇಖಿಸಿರುವಂತೆ ವ್ಯಕ್ತಿ ಹಾಗೂ ಯುವತಿ ಜೊತೆಯಾಗಿ ಬಂದ ದಿನದಂದು ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯವನ್ನು ಪಡೆಯಲು ಪ್ರಯತ್ನಿಸಲಾಗುತ್ತಿದೆ. ಘಟನೆ ನಡೆದ ಸ್ಥಳದ ದೃಶ್ಯಾವಳಿ ಇನ್ನೂ ಸಿಕ್ಕಿಲ್ಲ. ಅಂದು ಸಚಿವರ ಮನೆಗೆ ಬಂದಿದ್ದವರು ಯಾರು ಎಂಬುದು ಪತ್ತೆಯಾದರೆ ತನಿಖೆಗೆ ವೇಗ ಸಿಗಲಿದೆ' ಎಂದು ಸಿಐಡಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿದ್ಯಾರ್ಥಿ ಕಥಾ ಸ್ಪರ್ಧೆ: ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಅಕ್ಷರ ಸಾಹಿತ್ಯ ವೇದಿಕೆಯು ಕಥೆಗಾರ ಡಾ. ಪ್ರಹ್ಲಾದ ಅಗಸನಕಟ್ಟೆ ಅವರ ಸ್ಮರಣಾರ್ಥ 'ಪ್ರಹ್ಲಾದ ಅಗಸನಕಟ್ಟೆ ವಿದ್ಯಾರ್ಥಿ ಕಥಾ ಸ್ಪರ್ಧೆ-2025' ಏರ್ಪಡಿಸಿದೆ. ವಿಜೇತರಿಗೆ ₹5 ಸಾವಿರ ನಗದು ಬಹುಮಾನ ಮತ್ತು ಪ್ರಶಸ್ತಿ ಫಲಕ ಕೊಡಲಾಗುವುದು.

ವಿದ್ಯಾರ್ಥಿಗಳು ಕಾಗದದ ಒಂದು ಮಗ್ಗುಲಲ್ಲಿ ಅಪ್ರಕಟಿತ ಸ್ವರಚಿತ ಕಥೆ ಕಳುಹಿಸಬೇಕು. ಇ-ಮೇಲ್ ಮೂಲಕವೂ ಕಳುಹಿಸಬಹುದು. ಅದರ ಜೊತೆಗೆ ಪ್ರತ್ಯೇಕವಾಗಿ ಕಾಲೇಜು ಮುಖ್ಯಸ್ಥರ ದೃಢೀಕೃತ ಪ್ರಮಾಣಪತ್ರ ಇರಬೇಕು. ಕಥೆಗಳನ್ನು ಕಳುಹಿಸಲು ಏಪ್ರಿಲ್ 30 ಕೊನೆಯ ದಿನ.

ಸಂಪರ್ಕ ವಿಳಾಸ: 'ಡಾ. ಪ್ರಹ್ಲಾದ ಅಗಸನಕಟ್ಟೆ ಸ್ಮರಣಾರ್ಥ ವಿದ್ಯಾರ್ಥಿ/ನಿ ಕಥಾಸ್ಪರ್ಧೆ, ಅಕ್ಷರ ಸಾಹಿತ್ಯ ವೇದಿಕೆ, ಹುಬ್ಬಳ್ಳಿ, ಸುನಂದಾ ಪ್ರಕಾಶ ಕಡಮೆ, # 90, 'ನಾಗಸುಧೆ' 6/ಬಿ ಕ್ರಾಸ್, ಕಾಳಿದಾಸನಗರ, ವಿದ್ಯಾನಗರ ವಿಸ್ತೀರ್ಣ, ಹುಬ್ಬಳ್ಳಿ- 580031. ದೂ.ಸಂಖ್ಯೆ: 98457 79387. ಇ-ಮೇಲ್: sunandakadame@gmail.com

ವರ್ಷದಲ್ಲೇ ರಾಜ್ಯದ ನಿಲುವು ಬದಲು

ಒಂದನೇ ಪುಟದಿಂದ...

ಅರಣ್ಯ ಪಡೆಯ ಮುಖ್ಯಸ್ಥರ ಸಹಮತಿ ಮೇರೆಗೆ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಅವರಿಗೆ ಇದೇ 25ರಂದು ಪ್ರಸ್ತಾವ ಸಲ್ಲಿಸಿರುವ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂರಕ್ಷಣೆ) ಬ್ರಿಜೇಶ್ ಕುಮಾರ್, 'ಪರ್ಯಾಯ ಮಾರ್ಗದಲ್ಲಿ ಈ ಯೋಜನೆ ಅನುಷ್ಠಾನ ಮಾಡಬಹುದು ಅಥವಾ ಮರಗಳ ಹನನ ಕಡಿಮೆ ಮಾಡಲು ಆಧುನಿಕ ತಂತ್ರಜ್ಞಾನ ಬಳಸಲು ಯೋಜನಾ ಸಂಸ್ಥೆಗೆ ನಿರ್ದೇಶಿಸಬಹುದು' ಎಂದು ತಿಳಿಸಿದ್ದಾರೆ.

ಅರಣ್ಯ ಸಚಿವ ಈಶ್ವರ ಖಂಡ್ರೆ ನಿರ್ದೇಶನದ ಮೇರೆಗೆ 2024ರ ಮಾರ್ಚ್ 16ರಂದು ಅರಣ್ಯ ಪಡೆಯ ಮುಖ್ಯಸ್ಥರಿಗೆ ಪತ್ರ ಬರೆದಿದ್ದ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎನ್.ಮಂಜುನಾಥ ಪ್ರಸಾದ್, 'ಈ ಅರಣ್ಯ ತೀರುವಳಿ ಪ್ರಸ್ತಾವ ತಿರಸ್ಕರಿಸಬೇಕು. ಅರಣ್ಯೇತರ ಪ್ರದೇಶದಲ್ಲಿ ಪ್ರಸ್ತಾವಿತ ವಿದ್ಯುತ್ ವಿತರಣಾ ಜಾಲ ಕೈಗೆತ್ತಿಕೊಳ್ಳಬೇಕು ಎಂದು ನಿರ್ದೇಶನ ನೀಡಬೇಕು. ಭವಿಷ್ಯದಲ್ಲಿ ಇಂತಹ ಪ್ರಸ್ತಾವನೆಗಳ ಬಗ್ಗೆ ಪ್ರಾಥಮಿಕ ಹಂತದಲ್ಲೇ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕು. ಅಗಾಧ ಪ್ರಮಾಣದ ಅರಣ್ಯ ನಾಶವಾಗುತ್ತಿದ್ದರೂ ಈ ಪ್ರಸ್ತಾವನೆಯ ಶಿಫಾರಸು ಮಾಡಿದ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ನೀಡಬೇಕು' ಎಂದು ತಾಕೀತು ಮಾಡಿದ್ದರು.

ಸೆಪ್ಟೆಂಬರ್‌ನಲ್ಲಿ ನಡೆದ ರಾಷ್ಟ್ರೀಯ ವನ್ಯಜೀವಿ ಮಂಡಳಿಯ 79ನೇ ಸಭೆಯಲ್ಲಿ ಮಹದಾಯಿ ಯೋಜನೆಯ ಪ್ರಸ್ತಾವ ಮುಂದೂಡಲಾಗಿತ್ತು. ಗೋವಾ–ತಮ್ನಾರ್ ಯೋಜನೆಗೆ ಷರತ್ತುಬದ್ಧ ಅನುಮೋದನೆ ನೀಡಲಾಗಿತ್ತು. ವನ್ಯಜೀವಿ ಮಂಡಳಿಯ ಈ ತೀರ್ಮಾನಕ್ಕೆ ರಾಜ್ಯ ಸರ್ಕಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು.

'ಹುಲಿ ಸಂರಕ್ಷಣೆಗೆ ಪೆಟ್ಟು'

ತಿರಸ್ಕೃತಗೊಂಡಿರುವ ಪ್ರಸ್ತಾವನೆಯು ಪರಿಶೀಲನೆ ಹೆಸರಿನಲ್ಲಿ ಮತ್ತೆ ಮತ್ತೆ ಮುನ್ನೆಲೆಗೆ ಬರುತ್ತಿರುವುದು ಕಳವಳಕಾರಿ. ಈಗಿರುವ ಪ್ರಸ್ತಾವನೆ ಪ್ರಕಾರ ಉದ್ದೇಶಿತ ಮಾರ್ಗವು ಹುಲಿ ಕಾರಿಡಾರ್, ಕಾಳಿ ಹುಲಿ ಮೀಸಲಿನ ಪರಿಸರ ಸೂಕ್ಷ್ಮ ಪ್ರದೇಶ, ದಾಂಡೇಲಿ ಅಭಯಾರಣ್ಯ ಹಾಗೂ ದಾಂಡೇಲಿ ಆನೆಧಾಮದ ಮೂಲಕ ಹಾದುಹೋಗಲಿದ್ದು 72000ಕ್ಕೂ ಹೆಚ್ಚಿನ ಮರಗಳನ್ನು ಕಡಿಯಬೇಕಾಗುತ್ತದೆ. ಯೋಜನೆಯಿಂದ ಪಶ್ಚಿಮ ಘಟ್ಟದ ಜೀವಸಂಕುಲಕ್ಕೆ ಭಾರಿ ಹಾನಿಯಾಗಲಿದೆ. ಅರಣ್ಯ ಇಲಾಖೆ ಗುರುವಾರ ಬಿಡುಗಡೆ ಮಾಡಿರುವ ವರದಿ ಪ್ರಕಾರ, ರಾಜ್ಯದಲ್ಲಿ ಕಾಳಿ ಸೇರಿದಂತೆ ವಿವಿಧ ಹುಲಿ ಮೀಸಲು ಅರಣ್ಯಗಳಲ್ಲಿ ಹುಲಿಗಳ ಸಂಖ್ಯೆ ಕುಸಿತವಾಗಿದೆ. ಇಂತಹ ಸನ್ನಿವೇಶದಲ್ಲಿ ಯೋಜನೆಗೆ ಅನುಮತಿ ನೀಡಿದಲ್ಲಿ ಹುಲಿಗಳಿಗೆ ಅತ್ಯುತ್ತಮ ಆವಾಸಸ್ಥಾನಗಳಾಗಲು ಎಲ್ಲ ಅವಕಾಶ ಇರುವ ಬೆಳಗಾವಿ ಹಾಗೂ ಹಳಿಯಾಳ ವಿಭಾಗದ ಅರಣ್ಯ ಪ್ರದೇಶಗಳ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಯೋಜನೆಯನ್ನು ಈ ಕೂಡಲೇ ತಿರಸ್ಕರಿಸಬೇಕು.

ಗಿರಿಧರ ಕುಲಕರ್ಣಿ, ವನ್ಯಜೀವಿ ಸಂರಕ್ಷಣಾವಾದಿ

ಮುಖ್ಯಮಂತ್ರಿಗಳು ಈ ಕೂಡಲೇ ಮಧ್ಯಪ್ರವೇಶ ಮಾಡಿ ಅರಣ್ಯಕ್ಕೆ ಹಾನಿ ಉಂಟು ಮಾಡುವ ಯೋಜನೆಗಳನ್ನು ತಿರಸ್ಕರಿಸಲು ಕ್ರಮ ವಹಿಸಬೇಕು

ರಾಘವೇಂದ್ರ, ಆರ್‌ಟಿಐ ಕಾರ್ಯಕರ್ತ

ವಿಚಾರಣೆಗೆ ಗೈರಾದ ಹಾಸ್ಯ ಕಲಾವಿದ ಕುನಾಲ್ ಕಾಮ್ರಾ

ಪ್ರಜಾವಾಣಿ ವಾರ್ತೆ



ಕುನಾಲ್ ಕಾಮ್ರಾ

ಮುಂಬೈ: ಹಾಸ್ಯ ಕಲಾವಿದ ಕುನಾಲ್ ಕಾಮ್ರಾ ಅವರು ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಏಕನಾಥ ಶಿಂದೆ ಅವರನ್ನು ಉದ್ದೇಶಿಸಿ ವಿಡಂಬನೆಯ ವಿಡಿಯೊ ಒಂದರಲ್ಲಿ 'ವಂಚಕ' ಎಂದು ಕರೆದಿದ್ದು ವಿವಾದ ಸೃಷ್ಟಿಸಿ ವಾರ ಕಳೆದಿದ್ದರೂ, ಕಾಮ್ರಾ ಅವರು ಮುಂಬೈ ಪೊಲೀಸರ ಎದುರು ವಿಚಾರಣೆಗೆ ಹಾಜರಾಗಿಲ್ಲ.

ಕಾಮ್ರಾ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ತಿಳಿಸಿ ಮತ್ತೆ ಸಮನ್ಸ್ ನೀಡಲಾಗಿದೆ. ಕಾಮ್ರಾ ಅವರು ಈಗ ತಮಿಳುನಾಡಿನ ವಿಲ್ಲುಪುರಂ ಪಟ್ಟಣದಲ್ಲಿ ಇದ್ದಾರೆ. ಅವರು ಕೆಲವು ವರ್ಷಗಳ ಹಿಂದೆ ಇಲ್ಲಿಗೆ ಸ್ಥಳಾಂತರಗೊಂಡಿದ್ದಾರೆ. ಕಾಮ್ರಾ ಅವರಿಗೆ ಮದ್ರಾಸ್ ಹೈಕೋರ್ಟ್ ಏಪ್ರಿಲ್ 7ರವರೆಗೆ ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಕಾಮ್ರಾ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗಳಿಗೆ ಸಂಬಂಧಿಸಿದ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲು ಮುಂಬೈ ಪೊಲೀಸರ ತಂಡವೊಂದು ಕಾಮ್ರಾ ಅವರು ದಾದರ್‌ನಲ್ಲಿ ಹೊಂದಿರುವ ಮನೆಗೆ ಭೇಟಿ ನೀಡಿತ್ತು.

ಈ ನಡುವೆ 'ಎಕ್ಸ್' ಮೂಲಕ ಪೋಸ್ಟ್ ಒಂದನ್ನು ಬರೆದಿರುವ ಕಾಮ್ರಾ, 'ನಾನು 10 ವರ್ಷಗಳಿಂದ ವಾಸವಿರದ ವಿಳಾಸಕ್ಕೆ ಹೋಗುವುದರಿಂದ ನಿಮ್ಮ ಸಮಯ ಮತ್ತು ಸಾರ್ವಜನಿಕ ಸಂಪನ್ಮೂಲ ಪೋಲಾಗುತ್ತದೆ' ಎಂದು ಹೇಳಿದ್ದಾರೆ.

ಯುವಸೇನಾ ನಾಯಕ ರಾಹುಲ್ ಕನಲ್ ಅವರು ಕಾಮ್ರಾ ಅವರನ್ನು ಉದ್ದೇಶಿಸಿ ಮತ್ತೆ ಪರೋಕ್ಷವಾಗಿ ಬೆದರಿಕೆಯ ಮಾತು ಆಡಿದ್ದಾರೆ. 'ಅವರಿಗೆ ಸಮಾಧಾನ ತಂದಿರುವ ಕೋರ್ಟ್ ಆದೇಶವನ್ನು ನಾವು ಸ್ವಾಗತಿಸುತ್ತೇವೆ. ಆದರೆ ಅದು ಏಪ್ರಿಲ್ 7ರವರೆಗೆ ಮಾತ್ರ ಅನ್ವಯವಾಗುತ್ತದೆ. ಅವರು ಕಾನೂನು ಪ್ರಕ್ರಿಯೆ ಎದುರಿಸಬೇಕು... ಅಲ್ಲಿ (ತಮಿಳುನಾಡು) ಅವರಿಗೆ ಯಾವುದೇ ಬಗೆಯಲ್ಲಿ ರಕ್ಷಣೆ ಇರಲಿ, ಅವರು ಮುಂಬೈಗೆ ಬಂದಾಗ ಅವರನ್ನು ಶಿವಸೇನಾ ಶೈಲಿಯಲ್ಲಿ ಸ್ವಾಗತಿಸಲಾಗುತ್ತದೆ' ಎಂದು ಕನಲ್ ಹೇಳಿದ್ದಾರೆ.

ಆಕ್ಷೇಪಾರ್ಹ ಸ್ಟೇಟಸ್: ವ್ಯಕ್ತಿ ವಶ

ಧಾರವಾಡ: ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಚಿತ್ರವನ್ನು ಹಾಕಿ, ಅವಹೇಳನಕಾರಿಯಾಗಿ ಬರೆದ ಆರೋಪದ ಮೇಲೆ ಇಲ್ಲಿನ ಆಂಜನೇಯನಗರ ನಿವಾಸಿ ಸಲೀಂ ಮಮದಾಪುರ್ (35) ಎಂಬುವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ವ್ಯಕ್ತಿಯೊಬ್ಬ ನಾಲಿಗೆಯಿಂದ ಬೂಟು ನೆಕ್ಕುತ್ತಿರುವ ಚಿತ್ರವನ್ನು ಹಾಕಿ, ಆರೋಪಿ ಅವಹೇಳನಕಾರಿಯಾಗಿ ಬರೆದಿರುವ ಬಗ್ಗೆ ಬಜರಂಗದಳ ಸಂಘಟನೆಯವರು ಆಕ್ಷೇಪ ವ್ಯಕ್ತಪಡಿಸಿದ್ದರು. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಕ್ಷಿಪ್ತ ಸುದ್ದಿ

ಕಾಡಾನೆ ದಾಳಿ ರೈತ ಸಾವು



ವೆಂಕಟೇಶ


ತರೀಕೆರೆ (ಚಿಕ್ಕಮಗಳೂರು): ತಾಲ್ಲೂಕಿನ ತಣಿಗೆಬೈಲು ಅರಣ್ಯ ವಲಯ ವ್ಯಾಪ್ತಿಯ ಗುರುಪುರದಲ್ಲಿ ಕಾಡಾನೆ ದಾಳಿಗೆ ಸಿಲುಕಿ ರೈತ ವೆಂಕಟೇಶ (58) ಮೃತಪಟ್ಟಿದ್ದಾರೆ.

ಭಾನುವಾರ ರಾತ್ರಿ ಮನೆಯ ಮುಂದಿನ ತೋಟದಲ್ಲಿ ಹಸು ಕಟ್ಟಲು ಹೋದಾಗ ಆನೆ ನಿಂತಿರುವುದು ಕಾಣಿಸದೆ ಹತ್ತಿರಕ್ಕೆ ಹೋಗಿದ್ದಾರೆ. ಆಗ ಆನೆ ಸೊಂಡಿಲಿನಿಂದ ಎತ್ತಿ ಮರಕ್ಕೆ ಹೊಡೆದಿದೆ. ವೆಂಕಟೇಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಜಿ.ಎಚ್. ಶ್ರೀನಿವಾಸ್ ಆಕ್ರೋಶಗೊಂಡಿದ್ದ ಜನರನ್ನು ಸಮಾಧಾನಪಡಿಸಿದರು.

ಕುಂದಾಪುರ ಎ.ಸಿ ಅಮಾನತು

ಉಡುಪಿ: ಕುಂದಾಪುರ ಉಪ ವಿಭಾಗಾಧಿಕಾರಿ ಕೆ.ಮಹೇಶ್‌ಚಂದ್ರ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.



ಕೆ. ಮಹೇಶ್ ಚಂದ್ರ

ಮಹೇಶ್ ಚಂದ್ರ ಅವರು ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿದ್ದಾಗ ಬಡಾನಿಡಿಯೂರು ಗ್ರಾಮದಲ್ಲಿ ವಾಣಿಜ್ಯ ಉದ್ದೇಶದ ರೆಸಾರ್ಟ್ ನಿರ್ಮಾಣಕ್ಕೆ ಭೂ ಉಪಯೋಗ ಬದಲಾವಣೆ ವೇಳೆ ಅಕ್ರಮ ಎಸಗಿದ್ದರು ಎಂದು ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ದೂರಿದ್ದರು.

ಅವರು ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದೆ ಎಂದು ಜಿಲ್ಲಾಧಿಕಾರಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದರು.

ಚಿಕ್ಕಮಗಳೂರು ಉಪ ವಿಭಾಗಾಧಿಕಾರಿ ರಶ್ಮಿ ಎಸ್.ಆರ್. ಅವರನ್ನು ಕುಂದಾಪುರ ಉಪ ವಿಭಾಗಾಧಿಕಾರಿಯನ್ನಾಗಿ ಸರ್ಕಾರ ವರ್ಗಾವಣೆ ಮಾಡಿದೆ.

ಮೂವರು ವಿದ್ಯಾರ್ಥಿಗಳು ನೀರುಪಾಲು

ರಾಂಪುರ (ಬಾಗಲಕೋಟೆ ಜಿಲ್ಲೆ): ಆಲಮಟ್ಟಿ ಜಲಾಶಯದ ಕೆಳ ಭಾಗದ ಕೃಷ್ಣಾ ನದಿಯಲ್ಲಿ ಭಾನುವಾರ ಮಧ್ಯಾಹ್ನ ಸ್ನಾನಕ್ಕೆ ಹೋಗಿದ್ದ ಮೂವರು ವಿದ್ಯಾರ್ಥಿಗಳು ನೀರು-ಪಾಲಾಗಿದ್ದಾರೆ.

ಬಾಗಲಕೋಟೆ ತಾಲ್ಲೂಕಿನ ಇಲಾಳ ಗ್ರಾಮದ ಡಿಪ್ಲೊಮಾ ಎರಡನೇ ಸೆಮಿಸ್ಟರ್‌ನ ವಿದ್ಯಾರ್ಥಿ ಪರನಗೌಡ ಮಲ್ಲಪ್ಪ ಬೀಳಗಿ (17), ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಮಲ್ಲಪ್ಪ ಬಸಪ್ಪ ಬಗಲಿ (15) ಮತ್ತು 9ನೇ ತರಗತಿ ವಿದ್ಯಾರ್ಥಿ ಸೋಮಶೇಖರ ಬೊಮ್ಮಣ್ಣ ದೇವರಮನಿ (14) ನೀರುಪಾಲಾದವರು.

'ಐವರು ಬಾಲಕರು ನದಿಗೆ ಇಳಿದಿದ್ದರು. ಅವರಲ್ಲಿ ಇಬ್ಬರನ್ನು ಜನರು ರಕ್ಷಿಸಿದರು. ಇನ್ನು ಮೂವರು ಮುಳುಗಿದರು. ಸೋಮಶೇಖರ ದೇವರಮನಿ ಮೃತದೇಹ ಭಾನುವಾರ ಸಂಜೆ ಪತ್ತೆಯಾಗಿದ್ದು, ಇನ್ನಿಬ್ಬರಿಗಾಗಿ ಶೋಧ ಕಾರ್ಯ ಮುಂದುವರೆದಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಪತ್ರಕರ್ತನಿಗೆ ಬೆದರಿಕೆ ಹಾಕಿದ ಪಿಡಿಒ ಅಮಾನತು

ಕಲಬುರಗಿ: ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿ ಮಾಹಿತಿ ಕೋರಿದ್ದ ಪತ್ರಕರ್ತರೊಬ್ಬರಿಗೆ ಬೆದರಿಕೆ ಹಾಕಿ ಕರ್ತವ್ಯ ಲೋಪ ಎಸಗಿದ್ದ ಆರೋಪದಡಿ ಚಿತ್ತಾಪುರ ತಾಲ್ಲೂಕಿನ ಅಳ್ಳೊಳ್ಳಿ ಗ್ರಾಮ ಪಂಚಾಯಿತಿ ಪಿಡಿಒ ದೇವೇಂದ್ರಪ್ಪ ಭಾಲ್ಕಿ ಅವರನ್ನು ಅಮಾನತು ಮಾಡಲಾಗಿದೆ.

ಪತ್ರಿಕೆಯೊಂದರ ವರದಿಗಾರ ನಾಗಯ್ಯ ಸ್ವಾಮಿ ಅಲ್ಲೂರು ಅವರು 15ನೇ ಹಣಕಾಸು ಯೋಜನೆಯಡಿ ಖರ್ಚಾದ ಮಾಹಿತಿ ಕೊಡುವಂತೆ ಅಳ್ಳೊಳ್ಳಿ ಗ್ರಾ.ಪಂ.ಗೆ ಆರ್‌ಟಿಐ ಅರ್ಜಿ ಹಾಕಿದ್ದರು. ಖರ್ಚಿನ ಮಾಹಿತಿಯನ್ನು ನೀಡದೆ ಅರ್ಜಿದಾರನಿಗೆ ಫೋನ್ ಕರೆ ಮಾಡಿದ್ದ ದೇವೇಂದ್ರಪ್ಪ, 'ಬ್ಲಾಕ್‌ಮೇಲ್ ಮಾಡಲು ಅರ್ಜಿ ಹಾಕಿದ್ದೀಯಾ, ಪೊಲೀಸರಿಗೆ ದೂರು ಕೊಟ್ಟು ಒಳ ಹಾಕಿಸುತ್ತೇನೆ' ಎಂದು ಬೆದರಿಕೆ ಹಾಕಿದ್ದರು ಎಂದು ಜಿಲ್ಲಾ ಪಂಚಾಯಿತಿ ಸಿಇಒ ಭಂವರ್ ಸಿಂಗ್ ಮೀನಾ ಅವರು ಆದೇಶ ಪತ್ರದಲ್ಲಿ ತಿಳಿಸಿದ್ದಾರೆ.

ಈ ಬಗ್ಗೆ ನಾಗಯ್ಯ ಸ್ವಾಮಿ ಅವರು ಚಿತ್ತಾಪುರ ಕಾರ್ಯ ನಿರ್ವಾಹಕ ಅಧಿಕಾರಿಗೆ (ಇಒ) ದೂರು ಸಲ್ಲಿಸಿದ್ದರು. ದೇವೇಂದ್ರಪ್ಪ ಅವರಿಗೆ ಇಒ ನೋಟಿಸ್ ನೀಡಿದ್ದರೂ ಸಮಜಾಯಿಷಿ ನೀಡಿರಲಿಲ್ಲ. ಜತೆಗೆ ಆರ್‌ಟಿಐ ಅಡಿ ಮಾಹಿತಿಯೂ ಕೊಡದೆ ಕರ್ತವ್ಯ ಪಾಲನೆಯಲ್ಲಿ ನಿರ್ಲಕ್ಷ್ಯ ತೋರಿದ್ದು ಮೇಲ್ನೋಟಕ್ಕೆ ಕಂಡುಬಂದಿದೆ. ಹೀಗಾಗಿ, ದೇವೇಂದ್ರಪ್ಪ ಅವರನ್ನು ಅಮಾನತು ಮಾಡಲಾಗಿದೆ ಎಂದು ಹೇಳಿದ್ದಾರೆ.

ನಿಧನ ವಾರ್ತೆ

ಯಕ್ಷಗಾನ ಭಾಗವತ ಸತೀಶ್ ಆಚಾರ್ಯ



ಬೆಳ್ತಂಗಡಿ (ದಕ್ಷಿಣ ಕನ್ನಡ): ಅಂಡಿಂಜೆ ಕಿಲಾರ ಮಾರಿಕಾಂಬಾ ದೇವಸ್ಥಾನದ ಸಮೀಪದ ತಿರುವು ರಸ್ತೆಯಲ್ಲಿ ಎರಡು ಬೈಕ್‌ಗಳ ನಡುವೆ ಸೋಮವಾರ ಬೆಳಗಿನ ಜಾವ ನಡೆದ ಅಪಘಾತದಲ್ಲಿ ಮಂಗಳಾದೇವಿ ಮೇಳದ ಯಕ್ಷಗಾನ ಭಾಗವತ ಸತೀಶ್ ಆಚಾರ್ಯ (40) ಮೃತಪಟ್ಟಿದ್ದಾರೆ.

ಅಂಡಿಂಜೆ ಗ್ರಾಮದ ಪಿಯೂಲಿರುಮನೆ ನಿವಾಸಿ ಸತೀಶ್ ಆಚಾರ್ಯ, ಸುಳ್ಯದಲ್ಲಿ ಭಾನುವಾರ ನಡೆದ ಯಕ್ಷಗಾನ ಮುಗಿಸಿ ತಮ್ಮ ಬೈಕ್‌ನಲ್ಲಿ ಅಂಡಿಂಜೆಗೆ ಬರುತ್ತಿದ್ದಾಗ ಈ ಅಪಘಾತ ಸಂಭವಿಸಿದೆ. ಗಂಭೀರ ಗಾಯಗೊಂಡಿದ್ದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಇನ್ನೊಂದು ಬೈಕ್ ಸವಾರ ಸಹ ಗಾಯಗೊಂಡಿದ್ದು, ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ವೇಣೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತ ಸತೀಶ್ ಆಚಾರ್ಯ ಅವರಿಗೆ ತಾಯಿ, ಸಹೋದರಿ, ಸಹೋದರ ಇದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಯಾರಿಗೆ ತಾವಿರುವಲ್ಲಿ ಸಂತೋಷ, ಉತ್ಸಾಹ, ಕುತೂಹಲ ಇರುವುದಿಲ್ಲವೋ ಅವರು ಅವುಗಳನ್ನು ಹುಡುಕಿಕೊಂಡು ಎಲ್ಲಿಗೋ ಪ್ರವಾಸ ಹೋಗುವುದು ವ್ಯರ್ಥ

–ಕೆ.ಪಿ. ಪೂರ್ಣಚಂದ್ರ ತೇಜಸ್ವಿ

ಶಾಸಕರ ವೇತನ ಹೆಚ್ಚಳ ತಕರಾರಿಲ್ಲದ ಒಪ್ಪಿಗೆಯ ಅಪ್ಪುಗೆ

ಕೇಂದ್ರ ಹಾಗೂ ರಾಜ್ಯಗಳ ಮಟ್ಟದಲ್ಲಿ ಎಲ್ಲ ರಾಜಕೀಯ ಪಕ್ಷಗಳಲ್ಲಿಯೂ ಸಹಮತ ಮೂಡಿಸುವ ಒಂದು ವಿಷಯ ಇದ್ದರೆ, ಅದು ಶಾಸನಸಭೆಗಳ ಸದಸ್ಯರ ವೇತನ, ಭತ್ಯೆಗಳು ಮತ್ತು ಇತರ ಸೌಲಭ್ಯಗಳನ್ನು ಹೆಚ್ಚಿಸುವ ವಿಷಯ! ಕರ್ನಾಟಕದ ಶಾಸಕರು ಮತ್ತು ಸಚಿವರು ತಮ್ಮ ವೇತನ ಹಾಗೂ ವಿವಿಧ ಭತ್ಯೆಗಳನ್ನು ತಾವೇ ಮುಂದಾಗಿ ಸರಿಸುಮಾರು ಶೇಕಡ 100ರಷ್ಟು ಹೆಚ್ಚು ಮಾಡಿಕೊಂಡರು! ರಾಜ್ಯ ಸರ್ಕಾರವು ಹಣಕಾಸಿನ ಸಮಸ್ಯೆಯಲ್ಲಿ ಸಿಲುಕಿರುವ ಸಂದರ್ಭದಲ್ಲಿ ಆಗಿರುವ ಈ ಹೆಚ್ಚಳದ ಪರಿಣಾಮವಾಗಿ ರಾಜ್ಯದ ಬೊಕ್ಕಸಕ್ಕೆ ವಾರ್ಷಿಕ ₹62 ಕೋಟಿ ಹೊರೆಬೀಳಲಿದೆ. ಕೇಂದ್ರ ಸರ್ಕಾರವು ಸಂಸದರ ವೇತನ ಮತ್ತು ಮಾಜಿ ಸಂಸದರ ಪಿಂಚಣಿಯನ್ನು ಶೇ 24ರಷ್ಟು ಹೆಚ್ಚು ಮಾಡುವ ಘೋಷಣೆಯನ್ನು ಈಚೆಗೆ ಹೊರಡಿಸಿದೆ. ಅವರಿಗೆ ನೀಡುವ ಭತ್ಯೆಗಳನ್ನು ಕೂಡ ಹೆಚ್ಚು ಮಾಡಲಾಗಿದೆ. ಶಾಸಕರ ವೇತನ ಹಾಗೂ ಭತ್ಯೆಗಳಲ್ಲಿ ಎಷ್ಟು ಹೆಚ್ಚಳ ಆಗಬೇಕು ಎಂಬುದನ್ನು ತೀರ್ಮಾನಿಸಲು ದೆಹಲಿ ವಿಧಾನಸಭೆಯು ಐವರು ಸದಸ್ಯರ ಸಮಿತಿಯೊಂದನ್ನು ರಚಿಸಿದೆ. ಇಲ್ಲಿ ವೇತನ ಹೆಚ್ಚಳ ಆಗಬೇಕು ಎಂಬ ವಿಚಾರದಲ್ಲಿ ಬಿಜೆಪಿ ಹಾಗೂ ಎಎಪಿ ಶಾಸಕರ ನಡುವೆ ಸಹಮತ ಇದೆ. ಎಷ್ಟು ಹೆಚ್ಚಳ ಎಂಬುದು ಮಾತ್ರ ನಿರ್ಧಾರ ಆಗಬೇಕಿದೆ.

ಶಾಸಕರು ಮತ್ತು ಸಂಸದರು ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಅಗತ್ಯವಿರುವ ಸೌಲಭ್ಯಗಳು, ಹಣಕಾಸಿನ ಶಕ್ತಿ ಇರಬಾರದು ಎಂದು ಯಾರೂ ಹೇಳುವುದಿಲ್ಲ. ಆದರೆ ಶಾಸಕರು ಮತ್ತು ಸಂಸದರಲ್ಲಿ ಬಹುತೇಕರು ಪಡೆಯುತ್ತಿರುವ ವೇತನದ ಪ್ರಮಾಣವು ನ್ಯಾಯಸಮ್ಮತವಾಗಿ ಇಲ್ಲ; ತಾವು ಪಡೆಯುವ ವೇತನ ಹಾಗೂ ಭತ್ಯೆಗಳನ್ನು ಸಮರ್ಥಿಸುವ ರೀತಿಯಲ್ಲಿ, ತಮಗೆ ಕಾಲಕಾಲಕ್ಕೆ ಸಿಗುವ ವೇತನ–ಭತ್ಯೆ ಹೆಚ್ಚಳವನ್ನು ಸಮರ್ಥಿಸುವ ಬಗೆಯಲ್ಲಿ ಅವರು ತಮ್ಮ ಕೆಲಸ ನಿರ್ವಹಿಸುವುದಿಲ್ಲ ಎಂಬ ಭಾವನೆ ಜನರಲ್ಲಿದೆ. ಸರ್ಕಾರದ ಯಾವ ನೌಕರರಿಗೂ ಇಷ್ಟು ಕಡಿಮೆ ಅವಧಿಯಲ್ಲಿ ವೇತನ ಶೇ 100ರಷ್ಟು ಅಥವಾ ಶೇ 24ರಷ್ಟು ಹೆಚ್ಚಳ ಆಗುವುದಿಲ್ಲ. ಹಲವು ಶಾಸಕರು, ಸಂಸದರು ಶಾಸನಸಭೆಗಳಲ್ಲಿ ಉತ್ತಮ ಸಾಧನೆ ತೋರುತ್ತಿಲ್ಲ, ಹಲವರು ಕಲಾಪಗಳಿಗೆ ಅಡ್ಡಿ ಉಂಟುಮಾಡುತ್ತಿರುತ್ತಾರೆ ಎಂಬ ಟೀಕೆಗಳ ಹಿನ್ನೆಲೆಯಲ್ಲಿ ಶಾಸಕರು, ಸಂಸದರ ವೇತನ–ಭತ್ಯೆಗಳ ಹೆಚ್ಚಳವನ್ನು ಅರ್ಥ ಮಾಡಿಕೊಳ್ಳಬೇಕು. ವಿಧಾನ ಮಂಡಲದ ಅಧಿವೇಶನಗಳ ಅವಧಿ ಕಿರಿದಾಗುತ್ತಿದೆ, ಅಧಿವೇಶನ ನಡೆದಾಗ ಅಲ್ಲಿ ಗಂಭೀರ ಸ್ವರೂಪದ ಚರ್ಚೆಗಳು ನಡೆಯುತ್ತಿಲ್ಲ. ಶಾಸಕರ ವೇತನ ಹೆಚ್ಚಳದ ತೀರ್ಮಾನವನ್ನು ಕರ್ನಾಟಕದ ವಿಧಾನಸಭೆಯು ಯಾವ ಚರ್ಚೆಯೂ ಇಲ್ಲದೆ ಕೈಗೊಂಡಿದೆ.



ಶಾಸಕರು–ಸಂಸದರ ಸಂಬಳ–ಭತ್ಯೆ ಹೆಚ್ಚಳಕ್ಕೆ ನಿರ್ದಿಷ್ಟ ಮಾನದಂಡ ಮತ್ತು ಹಿತಾಸಕ್ತಿ ಸಂಘರ್ಷಕ್ಕೆ ಅವಕಾಶ ಇಲ್ಲದ ಒಂದು ವ್ಯವಸ್ಥೆಯ ಅಗತ್ಯ ಇದೆ

ಸರ್ಕಾರಿ ಹಾಗೂ ಖಾಸಗಿ ವಲಯಗಳ ನೌಕರರು ತಮ್ಮ ಸಂಬಳ–ಭತ್ಯೆ ಎಷ್ಟಿರಬೇಕು ಎಂಬುದನ್ನು ತಾವೇ ತೀರ್ಮಾನಿಸಲು ಅವಕಾಶ ಇಲ್ಲ. ಆದರೆ ಶಾಸಕರ ವಿಚಾರ ಹೀಗಿಲ್ಲ. ಶಾಸಕರು ತಮ್ಮ ವೇತನಕ್ಕೆ ಸಂಬಂಧಿಸಿದ ತೀರ್ಮಾನವನ್ನು ತಾವೇ ತೆಗೆದುಕೊಳ್ಳುತ್ತಾರೆ. ಆದರೆ ಜನರು ಒಂದಿಷ್ಟು ಕಟುವಾದ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಎಲ್ಲ ಶಾಸಕರು ಹೇಳುವುದು ತಮಗೆ ಜನರ ಸೇವೆ ಬಹುಮುಖ್ಯ; ಹಣ ಸಂಪಾದನೆ ತಮಗೆ ಮುಖ್ಯ ಅಲ್ಲವೇ ಅಲ್ಲ ಎಂದು. ಕರ್ನಾಟಕದಲ್ಲಿನ ಶಾಸಕರ ಪೈಕಿ ಶೇ 10ರಷ್ಟು ಮಂದಿ ಕೋಟ್ಯಧೀಶರು, ಶಾಸಕರಲ್ಲಿ 30ಕ್ಕೂ ಹೆಚ್ಚು ಮಂದಿಯ ಘೋಷಿತ ಆಸ್ತಿಯ ಮೌಲ್ಯ ₹100 ಕೋಟಿಗಿಂತ ಹೆಚ್ಚಿದೆ. ಹಲವರು ಜನಪ್ರತಿನಿಧಿ ಆಗಿರುವ ಅವಧಿಯಲ್ಲಿ ಆಸ್ತಿಯಲ್ಲಿ ಭಾರಿ ಪ್ರಮಾಣದ ಹೆಚ್ಚಳ ಆಗಿರುವುದನ್ನು ಘೋಷಿಸಿಕೊಳ್ಳುತ್ತಾರೆ, ಈ ಹೆಚ್ಚಳ ಹೇಗೆ ಸಾಧ್ಯವಾಯಿತು ಎಂಬುದನ್ನು ಕೆಲವು ಬಾರಿ ವಿವರಿಸುವುದೇ ಕಷ್ಟವಾಗುತ್ತದೆ. ಅಗತ್ಯ ಸೇವೆಗಳು ಹಾಗೂ ಉತ್ಪನ್ನಗಳ ಬೆಲೆ ತೀವ್ರ ಪ್ರಮಾಣದಲ್ಲಿ ಏರಿಕೆಯಾಗುತ್ತಿರುವಾಗ ಜನಪ್ರತಿನಿಧಿಗಳ ಸಂಬಳ–ಭತ್ಯೆ ಹೆಚ್ಚಾಗಬೇಕಿರುವುದು ಅಪೇಕ್ಷಣೀಯ. ಆದರೆ, ತಮ್ಮ ಸಂಬಳ ಎಷ್ಟು ಹೆಚ್ಚಾಗಬೇಕು ಎಂಬುದನ್ನು ಶಾಸಕರು ಯಾವ ಚರ್ಚೆಯೂ ಇಲ್ಲದೆ ತಾವೇ ತೀರ್ಮಾನಿಸುವುದು ನೈತಿಕವಾಗಿ ಎಷ್ಟು ಸರಿ? ಜನಪ್ರತಿನಿಧಿಗಳ ಸಂಬಳ–ಭತ್ಯೆ ಹೆಚ್ಚಳಕ್ಕೆ ನಿರ್ದಿಷ್ಟ ಮಾನದಂಡ ಮತ್ತು ಹಿತಾಸಕ್ತಿ ಸಂಘರ್ಷಕ್ಕೆ ಅವಕಾಶ ಇಲ್ಲದ ಒಂದು ವ್ಯವಸ್ಥೆಯ ಅಗತ್ಯ ಖಂಡಿತ ಇದೆ.

ದಿನದ ಟ್ವೀಟ್

ವೈಫಲ್ಯಕ್ಕೆ ನೆಪ...



ನಕ್ಸಲ್ ಸಮಸ್ಯೆಗೆ ಕಾಂಗ್ರೆಸ್ ನೀತಿ ಕಾರಣ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಪ್ರಧಾನಿಯವರಿಗೆ ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಒಂದೊ ಕಾಂಗ್ರೆಸ್ ಇರಬೇಕು, ಇಲ್ಲವೆ ನೆಹರೂ ಇರಬೇಕು. ಈ ಹೆಸರುಗಳನ್ನು ಕನವರಿಸದೆ ಅವರು ಜೀವಿಸಲಾರರು...

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ


ಸಂಪತ್ತಿನ ಬಗ್ಗೆ ಮಾತು ಬೇಡ



ಸಂಪತ್ತಿನ ಬಗ್ಗೆ ಮಾತನಾಡಬೇಡಿ. ಕುಟುಂಬದವರು, ಆಪ್ತರು, ಲೆಕ್ಕಪರಿಶೋಧಕರು ಮತ್ತು ಹಣಕಾಸು ಸಲಹೆಗಾರರನ್ನು ಹೊರತುಪಡಿಸಿ ಬೇರೆಯವರ ಜೊತೆ ಸಂಪತ್ತಿನ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿ. ಅದರ ಬಗ್ಗೆ ಹೆಚ್ಚು ಮಾತನಾಡಿದಂತೆಲ್ಲ ಸಂಬಂಧಗಳು ತೋರಿಕೆಯದ್ದಾಗುತ್ತವೆ...

ಡಿ. ಮುತ್ತುಕೃಷ್ಣನ್, ಹೂಡಿಕೆದಾರ

ಕಿಡಿನುಡಿ



ಸದನವು ದೊಡ್ಡ ದೇವಸ್ಥಾನದಂತೆ. ಅಲ್ಲಿ ಮಧುಬಲೆಯಂತಹ ಘಟನೆಗಳ ಬಗ್ಗೆ ಚರ್ಚೆಯಾಗುವುದು ತಲೆತಗ್ಗಿಸುವ ವಿಷಯ. ಇದರಿಂದ ಯಾರಿಗೆ ಒಳ್ಳೆಯದಾಗುತ್ತದೆ? ಮಧುಬಲೆ ಬೀಸಿದವನೂ ಒಳ್ಳೆಯವನಲ್ಲ, ಸಿಕ್ಕಿಹಾಕಿಕೊಂಡವನೂ ಒಳ್ಳೆಯವನಲ್ಲ.

ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸಭಾಪತಿ

25 ವರ್ಷಗಳ ಹಿಂದೆ

ಶನಿವಾರ, 1-4-2000

• **ವಿಜಾಪುರ: ಭೀಕರ ಲಾರಿ ಅಪಘಾತದಲ್ಲಿ 25 ಜನರ ಸಾವು**

ವಿಜಾಪುರ, ಮಾರ್ಚ್ 31– ಮನಗೂಳಿ ಕ್ರಾಸ್ ಬಳಿ ರಾಷ್ಟ್ರೀಯ ಹೆದ್ದಾರಿ 13ರಲ್ಲಿ ಗುರುವಾರ ಮಧ್ಯರಾತ್ರಿ ಸಂಭವಿಸಿದ ಭೀಕರ ಲಾರಿ ಅಪಘಾತದಲ್ಲಿ 2 ವರ್ಷದ ಹಸುಳೆ, 9 ಮಂದಿ ಮಕ್ಕಳೂ ಸೇರಿದಂತೆ 25 ಮಂದಿ ಸ್ಥಳದಲ್ಲೇ ಸತ್ತು ಇತರ 44 ಮಂದಿ ಗಾಯಗೊಂಡಿದ್ದಾರೆ.

ಹೆದ್ದಾರಿ ಪಕ್ಕದಲ್ಲಿ ಕಬ್ಬಿಣದ ಸರಳುಗಳನ್ನು ಹೊತ್ತು ನಿಂತಿದ್ದ ಲಾರಿಯೊಂದಕ್ಕೆ ತಾಲ್ಲೂಕಿನ ಜಂಬಗಿ (ಆಹೇರಿ) ಗ್ರಾಮದಿಂದ ಭಕ್ತಾದಿಗಳನ್ನು ತುಂಬಿಕೊಂಡು ಆಲಮಟ್ಟಿ ಬಳಿ ಇರುವ ಬೂದಿಹಾಳ ಎಲ್ಲಮ್ಮ ದೇವರ ಸನ್ನಿಧಿಗೆ ಹೊರಟಿದ್ದ ಲಾರಿಯೊಂದು ಡಿಕ್ಕಿ ಹೊಡೆದ ಪರಿಣಾಮ ಈ ದಾರುಣ ಘಟನೆ ಸಂಭವಿಸಿದೆ.

ವಿಜಾಪುರ ಜಿಲ್ಲೆಯಲ್ಲಿ ಸಂಭವಿಸಿದ ಅಪಘಾತಗಳಲ್ಲಿ ಇದು ಅತ್ಯಂತ ದೊಡ್ಡ ದುರಂತ ಎನ್ನಲಾಗಿದೆ.

• **ಎರಡು ಮುಕ್ತ ರಫ್ತು ವಲಯ: 714 ಸರಕು ಆಮದು ನಿರಾತಂಕ**

ಮುಂಬೈ, ಮಾರ್ಚ್ 31 (ಪಿಟಿಐ)– ದೇಶದ ಹೊಸ ರಫ್ತು– ಆಮದು ನೀತಿಯನ್ನು ಇಂದು ಇಲ್ಲಿ ಪ್ರಕಟಿಸಿದ ಕೇಂದ್ರ ಸರ್ಕಾರವು ಹಾಲು, ಕಾಳು ಮೆಣಸು, ಸಾಮಾನ್ಯ ಉಪ್ಪು, ಸಿಗರೇಟು ಸಹಿತ 714 ವಸ್ತುಗಳ ಮೇಲಿನ ಆಮದು ಪ್ರಮಾಣ ನಿರ್ಬಂಧಗಳನ್ನು ತೆಗೆದು ಹಾಕಿತು. ರಫ್ತಿಗೆ ಪ್ರೋತ್ಸಾಹ ನೀಡುವ ಮಹತ್ವದ ಕ್ರಮವಾಗಿ ಎರಡು ಮುಕ್ತ ವ್ಯಾಪಾರ ವಲಯಗಳ ಸ್ಥಾಪನೆ ಮತ್ತು ನಾಲ್ಕು ರಫ್ತು ವಲಯಗಳನ್ನು ಮುಕ್ತ ವ್ಯಾಪಾರ ವಲಯಗಳಾಗಿ ಪರಿವರ್ತಿಸುವ ಕ್ರಮಗಳನ್ನೂ ಘೋಷಿಸಿತು.

50 ವರ್ಷಗಳ ಹಿಂದೆ

ಮಂಗಳವಾರ, 1-4-1975

• **ವಿಮಾನ ಅಪಘಾತ: ಹಿಲರಿ ಪತ್ನಿ, ಪುತ್ರಿ ಸಾವು**

ಕಠ್ಮಂಡು, ಮಾರ್ಚ್ 31 (ಎಪಿ,ಎಎಫ್‌ಪಿ)– ಮೌಂಟ್ ಎವರೆಸ್ಟ್ ಪರ್ವತವನ್ನು 1953ರಲ್ಲಿ ಏರಿದ ಸರ್ ಎಡ್ಮಂಡ್ ಹಿಲರಿ ಅವರ ಪತ್ನಿ ಮತ್ತು ಪುತ್ರಿ ಇಲ್ಲಿ ಸಂಭವಿಸಿದ ವಿಮಾನ ಅಪಘಾತದಲ್ಲಿ ಮೃತಪಟ್ಟಿದ್ದಾರೆ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ಈ ಅಪಘಾತದಲ್ಲಿ ವಿಮಾನದ ಪೈಲಟ್ ಸೇರಿ ಐವರೂ ಪ್ರಯಾಣಿಕರು ಮೃತಪಟ್ಟಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ. ಕಠ್ಮಂಡು ವಿಮಾನ ನಿಲ್ದಾಣದಿಂದ ಟೇಕ್ ಆಫ್ ಆದ ಏಕ ಎಂಜಿನ್ ವಿಮಾನವು ಪತನಗೊಂಡು ಈ ದುರಂತ ಸಂಭವಿಸಿದೆ.

ಎವರೆಸ್ಟ್ ಪರ್ವತ ಏರುವಾಗ ನೆರವಾಗುವ ಶೆರ್ಪಾ ಮಾರ್ಗದರ್ಶಕರ ಕುಟುಂಬದವರಿಗೆ ಶಾಲೆಗಳು, ಆಸ್ಪತ್ರೆಗಳ ನಿರ್ಮಾಣ ಕಾರ್ಯದ ಮೇಲ್ವಿಚಾರಣೆಯನ್ನು ಸರ್ ಎಡ್ಮಂಡ್ ವಹಿಸಿದ್ದಾರೆ.

ಡಾಂಬಿಕತನ ಎಂಬ ರೋಗದ ಚಿಕಿತ್ಸೆಯ ಬಗ್ಗೆ ನಾವಿಂದು ಮಾತನಾಡಬೇಕಿದೆ

ನೆಗಡಿ ಎಂದು ಮೂಗನ್ನೇ ಕೊಯ್ಯುವುದೆ?



ಅನುತ್ತರ

ಎಸ್. ಸೂರ್ಯಪ್ರಕಾಶ ಪಂಡಿತ್

‘ನಾಗರಿಕತೆಗಳ ಸಂಘರ್ಷ’. ಈ ಪರಿಕಲ್ಪನೆಯನ್ನು ಮುಂದಿಟ್ಟದ್ದು ಸ್ಯಾಮುಯೆಲ್ ಪಿ. ಹಂಟಿಂಗ್‌ಟನ್. ಮಹಾಕುಂಭಮೇಳದ ಬಗ್ಗೆ ನಡೆದ ಪರ–ವಿರೋಧಗಳ ಕೋಲಾಹಲಗಳು ಎರಡು ಭಿನ್ನ ನಾಗರಿಕತೆ ಅಥವಾ ಸಂಸ್ಕೃತಿಗಳ ಸಂಘರ್ಷಕ್ಕೆ ಸಮವೇ ಸರಿ.

ಕುಂಭಮೇಳದ ವಿರೋಧಿಗುಂಪಿನ ವಿಚಾರಸರಣಿಗೆ ಎರಡು ಪ್ರಾತಿನಿಧಿಕ ಅಭಿಪ್ರಾಯಗಳನ್ನು ನೋಡೋಣ. ಕಾಂಗ್ರೆಸ್‌ನ ರಾಜಕಾರಣಿಯೊಬ್ಬರು ‘ಕುಂಭಮೇಳದಿಂದ ಬಡತನ ನಿವಾರಣೆ ಆಗುವುದೆ?’ ಎಂದರು. ಇನ್ನೊಬ್ಬರು, ‘ಚಿಂತಕ’ರು ‘ಗಂಗೆ ಮಾತ್ರ ಪವಿತ್ರ ಎಂಬುದು ಧಾರ್ಮಿಕ ಸರ್ವಾಧಿಕಾರ’ ಎಂದರು.


ಸುಮಾರು ಸಾವಿರ ವರ್ಷಗಳ ಹಿಂದಿದ್ದ ವಾಚಸ್ಪತಿ ಮಿಶ್ರ, ತನ್ನ ‘ಭಾಮತಿ’ ಎಂಬ ವ್ಯಾಖ್ಯಾನಗ್ರಂಥದಲ್ಲಿ, ಆಚಾರ್ಯ ಶಂಕರರ ಪ್ರತಿಭಾಸಾಮರ್ಥ್ಯವನ್ನೂ, ತನ್ನ ಮಿತಿಯನ್ನೂ ಆಲಂಕಾರಿಕವಾಗಿ ಪ್ರಕಟಿಸಿದ್ದಾನೆ: ‘ನನ್ನ ಮಾತುಗಳು ರಸ್ತೆಯಲ್ಲಿ ಹರಿಯುವ ನೀರಿನಂತೆ, ಕಲುಷಿತವಾದುದು. ಆದರೆ ಶಂಕರರ ಮಾತುಗಳೋ ಸಾಕ್ಷಾತ್ ಗಂಗಾಪ್ರವಾಹ. ಆದರೆ ನನ್ನ ಮಾತುಗಳು ಶಂಕರರ ಮಾತುಗಳ ಜೊತೆ ಸೇರಿದರೆ ಅವು ಪವಿತ್ರವಾಗುವುದು ದಿಟ’. ಗಂಗಾನದಿಯನ್ನು ಶ್ರದ್ಧಾಳುಗಳು ಹೇಗೆ ಸ್ವೀಕರಿಸುತ್ತಾರೆ– ಎಂಬುದಕ್ಕೆ ಈ ಮಾತೊಂದು ಪ್ರತೀಕ.

ಕುಂಭಮೇಳದಿಂದ ಬಡತನ ನಾಶವಾಗುತ್ತದೆ– ಎಂದು ಯಾರೂ ನಂಬಿಲ್ಲ. ದಿಟ, ತೀರ್ಥಸ್ನಾನದಿಂದ ಪಾಪಗಳು ನಾಶವಾಗುತ್ತವೆ– ಎಂದೇ ಆಸ್ತಿಕರು ನಂಬುತ್ತಾರೆ. ಪಾಪ–ಪುಣ್ಯಗಳು ನಮ್ಮ ಮಾನಸಿಕ ಕಲ್ಪನೆಗಳು. ಹೇಗೆ ಪಾಪಗಳು ಕಣ್ಣಿಗೆ ಕಾಣಲಾರವೋ, ಹಾಗೆಯೇ ಪುಣ್ಯಸಂಪಾದನೆಯೂ ಕಾಣದು. ಹೀಗಾಗಿ ತೀರ್ಥಸ್ನಾನದಿಂದ ಶ್ರದ್ಧಾಳುಗಳು ಹೊಂದುವ ಲಾಭ–ನಷ್ಟಗಳನ್ನು ಬ್ಯಾಂಕಿನ ಪಾಸ್‌ಬುಕ್‌ನ ‘ಕ್ರೆಡಿಟ್’–‘ಡೆಬಿಟ್’ಗಳ ಲೆಕ್ಕಾಚಾರದಂತೆ ಪ್ರತ್ಯಕ್ಷಪ್ರಮಾಣದ ಅಳತೆಯಲ್ಲಿ ಲೆಕ್ಕಮಾಡಲಾಗದು. ತೀರ್ಥಸ್ನಾನವು ನಮ್ಮ ಮನಸ್ಸಿನಲ್ಲಿ ನೆಲೆಯೂರಿರುವ ಪಾಪಪ್ರಜ್ಞೆ, ಅಸಹಾಯಕತೆ, ಭಯ ಮುಂತಾದ ಮಾನಸಿಕ ‘ಬಡತನ’ಗಳನ್ನು ದೂರಮಾಡಿ, ನಮ್ಮಲ್ಲಿ ಆತ್ಮಸಂಪತ್ತನ್ನು ಹೆಚ್ಚಿಸುತ್ತದೆ ಎಂಬುದೇ ಜನರ ಶ್ರದ್ಧೆಗೆ ಮೂಲವಾಗಿರುವ ಬಂಡವಾಳ. ಬಡತನವನ್ನು ದೇಶದಿಂದ ಉಚ್ಚಾಟಿಸಲೆಂದೇ ಕಾಂಗ್ರೆಸ್ ಪಕ್ಷ ಪಣತೊಟ್ಟು ಆರಂಭಿಸಿದ್ದ ‘ಗರೀಬಿ ಹಟಾವೋ’ದಂಥ ಸರ್ಕಾರದ ಯೋಜನೆಗಳೇ ವಿಫಲವಾಗಿವೆಯಷ್ಟೆ! ಹೀಗಿರುವಾಗ ಧಾರ್ಮಿಕ ಆಚರಣೆಯೊಂದು ಬಡತನವನ್ನು ಓಡಿಸುತ್ತದೆ ಎಂದು, ಅದಕ್ಕೆ ಅಂಥ ಯಾವುದೇ ಸಂಕಲ್ಪ ಇಲ್ಲದಿದ್ದರೂ, ನಾವು ಮಾತ್ರ ಹಾಗೆ ಯೋಚಿಸುವುದು ಬಾಲಿಶತನವಲ್ಲವೆ? ಕಾಂಗ್ರೆಸ್ ಅಂದೇ ಯಶಸ್ವಿಯಾಗಿ ಬಡತನವನ್ನು ಓಡಿಸಿದಿದ್ದರೆ, ಇಂದು ಕುಂಭಮೇಳದ ಮೇಲೆ ಆ ಹೊಣೆಗಾರಿಕೆಯು ವರ್ಗಾವಣೆ ಆಗುತ್ತಲೇ ಇರಲಿಲ್ಲವೆನ್ನಿ!

ಇನ್ನು ಧಾರ್ಮಿಕ ಸರ್ವಾಧಿಕಾರದ ವಿಷಯ. ಮಾರ್ಕ್ಸ್‌ವಾದವಷ್ಟೆ ಶ್ರೇಷ್ಠ– ಎಂಬಂಥ ಯಾವುದೇ ಅಪ್ರಬುದ್ಧ ವೈಚಾರಿಕತೆಯೂ ಗಂಗಾಸ್ನಾನದ ಪಾವಿತ್ರ್ಯದ ವಿಷಯದಲ್ಲಿ ಗೂಡು ಕಟ್ಟಿಲ್ಲ. ಗಂಗಾನದಿಯ ಉಗಮ, ಅದರ ಪಾವಿತ್ರ್ಯ– ಇವೆಲ್ಲವೂ ‘ಮಿಥ್’ಗಳ ಭಾವಸಾಮ್ರಾಜ್ಯದ ವಿವರಗಳು. ಸಾವಿರಾರು ವರ್ಷಗಳಿಂದ ಇಂಥ ಮಿಥ್‌ಗಳ ಸಂಕೇತಗಳು ಜನಮಾನಸಿಕತೆಯಲ್ಲಿ ನೆಲೆಯೂರಿ, ಧಾರ್ಮಿಕ ಕಲಾಪಗಳ ಮೂಲಕ ಅವುಗಳ ಧ್ವನ್ಯರ್ಥಗಳು ಪ್ರಕಟವಾಗುತ್ತಿರುತ್ತವೆ. ಈ ಮಿಥ್‌ಗಳು ಐತಿಹಾಸಿಕ ತಥ್ಯಗಳಲ್ಲ, ಅವು ಜೀವಕೇಂದ್ರಿತ ಭಾವಸತ್ಯಗಳು. ಇವು ವಾಸ್ತವಸತ್ಯಗಳಿಗಿಂತಲೂ ಹೆಚ್ಚು ಪ್ರಭಾವವನ್ನು ಮೂಡಿಸಬಲ್ಲಂಥವು. ‘ದೇವಲೋಕದ ಗಂಗೆ ನಮ್ಮ ಪಾಪಗಳನ್ನು ತೊಳೆಯುತ್ತಾಳೆ’ ಎಂದು ಹೇಳುವ ಮಿಥ್‌ಗಳೇ, ‘ಕಾಶಿಯಲ್ಲಿ ಹರಿಯುವ ಗಂಗಾನದಿ ಮಾತ್ರವೇ ಗಂಗೆಯಲ್ಲ, ನಮ್ಮ ಮನೆಯ ಬಾವಿಯಲ್ಲಿರುವ ನೀರು ಕೂಡ ಗಂಗೆಯೇ ಹೌದು’–ಎಂದೂ ಹೇಳುತ್ತಿರುತ್ತವೆ. ‘ಗಂಗೇ ಚ ಯಮುನೇ ಚೈವ’ ಎಂಬ ಮಂತ್ರದಲ್ಲಿ ಇಂಥ ಸಮನ್ವಯವನ್ನೇ ಕಾಣುವುದು.

ಪ್ರಯಾಗರಾಜ್‌ನಲ್ಲಿ ಅಂದು ಮಾತ್ರ ಪವಿತ್ರಸ್ನಾನ ಏಕೆ? ಮಿಥ್‌ಗಳ ಜೊತೆಗೆ ಹಲವು ಭೌತಿಕ, ಐತಿಹಾಸಿಕ, ಸಾಂಸ್ಕೃತಿಕ, ಧಾರ್ಮಿಕ ವಿವರಗಳೂ ಸೇರಿಕೊಂಡು ತೀರ್ಥಕ್ಷೇತ್ರವೊಂದು ರೂಪವನ್ನು ಪಡೆದಿರುತ್ತದೆ. ಕಾಲಾಂತರದಲ್ಲಿ ಅದು ಮಿಥ್‌ನ ನಾಭಿಯಂತೆ ಮನ್ನಣೆಯನ್ನು ಪಡೆಯುತ್ತದೆಯಷ್ಟೆ. ಇಲ್ಲೊಂದು ಉದಾಹರಣೆಯನ್ನು ಕೊಡಬಹುದು. ಭಾರತದಲ್ಲಿ ಇಷ್ಟು ಊರುಗಳಿರಲು ದೆಹಲಿಯನ್ನೇ ರಾಜಧಾನಿಯನ್ನಾಗಿ ಏಕೆ ಸ್ವೀಕರಿಸಲಾಯಿತು? ದೆಹಲಿ ‘ದೆಹಲಿ’ಯಾಗಲು ಎಷ್ಟೋ ವಿವರಗಳು, ಎಷ್ಟೋ ವರ್ಷಗಳು ಕಾರಣವಾಗಿರುತ್ತವೆ. ಕೊನೆಗೆ ಭಾರತದ ದನಿಯಾಗಿ ‘ದೆಹಲಿ’ ಎಂಬ ಸಂಕೇತ ಸಿದ್ಧವಾಗುತ್ತದೆ. ದೇಶದ ಉದ್ದಗಲಕ್ಕೂ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿದರೂ, ದೆಹಲಿಯಲ್ಲಿಯ ಆಚರಣೆಗಿರುವ ತೂಕ ಸ್ವಲ್ಪ ಹೆಚ್ಚು; ಏಕೆಂದರೆ ಅದು ರಾಜಧಾನಿ. ಹೀಗೆಂದು ಕನ್ಯಾಕುಮಾರಿಯಲ್ಲಿ ನಡೆಯುವ ಉತ್ಸವ, ಅದು ಭಾರತದ ಸ್ವಾತಂತ್ರ್ಯೋತ್ಸವ ಅಲ್ಲ ಎಂದು ಹೇಳಲಾದೀತೆ?

ಮಿಥ್‌ಗಳ ಭಾಷೆ ರೂಪಕಭಾಷೆ. ಹೀಗಾಗಿಯೇ ಇವು ಜಾತಿ–ಭಾಷೆ–ದೇಶ ಮುಂತಾದ ಎಲ್ಲೆಗಳನ್ನು ಮೀರಿ ಎಲ್ಲರೊಂದಿಗೂ ಸಂವಹಿಸುತ್ತಿರುತ್ತವೆ. ವೈಯಕ್ತಿಕ ಆಮಂತ್ರಣವಿಲ್ಲದಿದ್ದರೂ ಕುಂಭಮೇಳದಲ್ಲಿ ಹೇಗೆ ಕೋಟಿಕೋಟಿ ಜನರು ಏಕತ್ರ ಸೇರಿದ್ದರು? ಜನರನ್ನು



ಹೀಗೆ ಒಗ್ಗೂಡಿಸಬಲ್ಲದ್ದು ಜನರ ಸಮೂಹಪ್ರಜ್ಞೆಯಲ್ಲಿ ಸುಪ್ತವಾಗಿರುವ ಧಾರ್ಮಿಕ ಮಿಥ್‌ಗಳೇ ಹೌದು ಎಂಬುದನ್ನು ಹರಾರಿ ‘ಸೇಪಿಯನ್ಸ್’ ಕೃತಿಯಲ್ಲಿ ಚೆನ್ನಾಗಿ ವಿವರಿಸಿದ್ದಾರೆ. ಮಿಥ್‌ಗಳು ಲೌಕಿಕ–ಅಲೌಕಿಕಗಳ ಸಂಗಮಸ್ಥಾನಗಳು. ರಾಮ ಕೃಷ್ಣ ಶಿವ– ಈ ಮೂರು ಮಿಥ್‌ಗಳು ಭಾರತೀಯತೆಯ ಅಖಂಡತತ್ತ್ವಗಳು ಎಂದಿದ್ದಾರೆ, ಲೋಹಿಯಾ. ಈಗ ಅವರೇನಾದರೂ ಇದ್ದಿದ್ದರೆ ಈ ಪಟ್ಟಿಗೆ ಗಂಗೆಯನ್ನೂ ಸೇರಿಸಿಕೊಳ್ಳುತ್ತಿದ್ದರೇನೋ! ಮನುಷ್ಯನ ಬುದ್ಧಿಶಕ್ತಿಗೆ ಅಂಟಬಹುದಾದ ಅತಿರೇಕದ ಎರಡು ಜಾಡ್ಯಗಳನ್ನು, 17ನೇ ಶತಮಾನದ ಬ್ಲೇಸ್ ಪ್ಯಸ್ಕಲ್ ಸೊಗಸಾಗಿ ಒಕ್ಕಣಿಸಿದ್ದಾನೆ. ಒಂದು: ತರ್ಕವನ್ನು ಪೂರ್ಣವಾಗಿ ತಿರಸ್ಕರಿಸುವುದು; ಎರಡು: ತರ್ಕವನ್ನಷ್ಟೆ ನೆಚ್ಚಿಕೊಳ್ಳುವುದು. ಆದರೆ ‘ಹೃದಯ ಮತ್ತು ಮತಿಗಳು ಸತಿಪತಿ’ಗಳಂತೆ ಅನುಕೂಲದಾಂಪತ್ಯದಲ್ಲಿ ದ್ದರಷ್ಟೆ ಮಿಥ್‌ಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯ. ಸಮಾಜವನ್ನು ಒಗ್ಗೂಡಿಸುವಲ್ಲಿ ಧಾರ್ಮಿಕ ಆಚಾರ–ವಿಚಾರಗಳ ಪಾತ್ರ ದೊಡ್ಡದು ಎಂಬ ಸಮಾಜಶಾಸ್ತ್ರಜ್ಞ ಎಮಿಲ್ ಡರ್ಖೈಮ್‌ನ ಪ್ರತಿಪಾದನೆ ಗಮನಾರ್ಹ. ಸನಾತನಧರ್ಮದ ಕೋಟ್ಯಂತರ ಶ್ರದ್ಧಾಳುಗಳು ತಮ್ಮ ಲೌಕಿಕ ಭೇದಗಳನ್ನು ಮರೆತು, ಸಂಗಮಸ್ಥಾನದಲ್ಲಿ ಸೇರಿದ್ದು ಸುಳ್ಳಲ್ಲವಷ್ಟೆ! ನಾಗರಿಕತೆಗಳ ಉಗಮಗಳ ಹಿಂದೆ ಧಾರ್ಮಿಕತೆಯ ಅಡಿಪಾಯಗಳಿರುವುದು ಸ್ಪಷ್ಟ.

ಜನರ ಭಾವನೆಗಳನ್ನು ಸಹಾನುಭೂತಿಯಿಂದ ವಿಶ್ಲೇಷಣೆಯ ನಿಕಷಕ್ಕೆ ಒಳಪಡಿಸಿ, ಅವುಗಳ ಸಾಧಕ–ಬಾಧಕಗಳ ಬಗ್ಗೆ ಪರಾಮರ್ಶಿಸುವಂಥ ಪ್ರಬುದ್ಧತೆಯೇ ಇಂದು ಮರೆಯಾಗುತ್ತಿದೆ. ‘ನಾನು ಹೇಳಿದ್ದೇ ಸತ್ಯ’ ಎಂಬ ಹಟಬುದ್ಧಿ ಎಲ್ಲೆಡೆ ತೀವ್ರವಾಗುತ್ತಿದೆ. ವಿಜ್ಞಾನವನ್ನೂ ಧರ್ಮವನ್ನೂ ನಾವು ತಪ್ಪಾಗಿಯೇ ಅರ್ಥಮಾಡಿಕೊಳ್ಳುತ್ತಿದ್ದೇವೆ. ಈ ತಪ್ಪುಹೆಜ್ಜೆಗಳಿಗೆ ಪ್ರಚೋದನೆಯನ್ನು ಕೊಡುತ್ತಿರುವುದು ನಮ್ಮ ರಾಜಕೀಯ ನಿಲುವುಗಳೇ ಹೊರತು, ಭಾವ–ಬುದ್ಧಿಗಳ ಸಂಸ್ಕಾರದಿಂದ ಸಂಸ್ಕೃತಗೊಂಡ ಚಿಂತನೆ ಅಲ್ಲ.

ಎಲ್ಲರ ಧಾರ್ಮಿಕ ಆಚರಣೆಗಳೂ ಪರಿಶುದ್ಧವಾಗಿರುತ್ತವೆ ಎಂದೇನಲ್ಲ. ವೈದ್ಯನೊಬ್ಬನ ತಪ್ಪಿನಿಂದ ರೋಗಿ ಸತ್ತರೆ, ಆ ತಪ್ಪನ್ನು ವೈದ್ಯಶಾಸ್ತ್ರದ ತಲೆಗೆ ಕಟ್ಟಬಹುದೆ? ದಿಟ, ಗಂಗಾನದಿ ಮಾತ್ರವಲ್ಲ, ನಮ್ಮ ಯಾವುದೇ ನದಿಯೂ ಇಂದು ಭೌತಿಕವಾಗಿ ಶುದ್ಧವಾಗಿಲ್ಲ. ಆದರೆ ಕಲ್ಮಷದ ನೆಪದಲ್ಲಿ ಜನರ ಶ್ರದ್ಧೆಯನ್ನು ಕಲುಷಿತಗೊಳಿಸಬಾರದು. ಜಲಮೂಲಗಳನ್ನು ಅಶುದ್ಧಗೊಳಿಸಬಾರದು ಎಂದು ಧರ್ಮಶಾಸ್ತ್ರಗಳು ಸಾವಿರಾರು ವರ್ಷಗಳ ಹಿಂದೆಯೇ ಹೇಳಿವೆ. ಆದರೆ ನಮ್ಮ ಸಂಸ್ಕಾರಹೀನತೆಯಿಂದ ನಮ್ಮ ಧಾರ್ಮಿಕ ಕೇಂದ್ರಗಳನ್ನೂ ನಾವು ವಿರೂಪಗೊಳಿಸುತ್ತಿದ್ದೇವೆ. ‘ವಿದೇಶಗಳಲ್ಲಿ ನದಿಗಳನ್ನು ಪೂಜಿಸುವುದಿಲ್ಲ; ಆದರೆ ಅವರು ಅವನ್ನು ಶುದ್ಧವಾಗಿಟ್ಟುಕೊಂಡಿದ್ದಾರೆ. ನಾವು ನದಿಗಳನ್ನು ಪೂಜಿಸುತ್ತೇವೆ; ಆದರೆ ಅವನ್ನು ನಾವು ಶುದ್ಧವಾಗಿಟ್ಟುಕೊಂಡಿಲ್ಲ’ ಎಂದಿದ್ದರು ಒಮ್ಮೆ, ಶೃಂಗೇರಿಶ್ರೀಗಳು. ನಮ್ಮ ಧರ್ಮಧ್ವಜಬುದ್ಧಿಗೆ ಈ ಮಾತು ಚೆನ್ನಾದ ವಿವರಣೆ. ಹೀಗಾಗಿ ನಮ್ಮ ಡಾಂಬಿಕತನ ಎಂಬ ರೋಗದ ಚಿಕಿತ್ಸೆಯ ಬಗ್ಗೆ ನಾವಿಂದು ಮಾತನಾಡಬೇಕಿದೆ. ಹೀಗಲ್ಲದೆ, ಧಾರ್ಮಿಕತೆಯನ್ನೇ ರೋಗ ಎಂದು ಅರಚುವುದು ದುರಹಂಕಾರದ ಪರಮಾವಧಿ. ನೆಗಡಿ ಎಂದು ಮೂಗನ್ನೇ ಕತ್ತರಿಸುವುದು ಮೂರ್ಖತನ. ನಮ್ಮ ಸ್ವಘೋಷಿತ ‘ಪ್ರಗತಿಪರ’ರು ಇಂಥ ಬಾಲಿಶ ಮಾನಸಿಕತೆಯಿಂದ ಮುಕ್ತರಾಗಿ, ಶುದ್ಧರಾಗಲಿ.

ಚುರುಮುರಿ



ಹೊಸ ಸಂವತ್ಸರ ಫಲ

• ಸುಮಂಗಲಾ

ಬೆಕ್ಕಣ್ಣ ಮಡಿ ಪಂಚೆಯುಟ್ಟು, ಹಣೆಗೆ ಕುಂಕುಮ ವಿಟ್ಟು, ಪಂಚಾಂಗದ ಕಟ್ಟು ಹಿಡಿದು ಕೂತಿತ್ತು.

‘ಏನಲೇ ಇದು ನಿನ್ನ ಅವತಾರ? ನೀ ಯಾವಾಗಿಂದ ಯುಗಾದಿ ಪಂಚಾಂಗ ಹೇಳಾಕೆ ಶುರು ಮಾಡಿದೆ?’ ಎಂದೆ ಗಾಬರಿಯಿಂದ.

‘ಹಾಕಿದ್ಯಾ ಅಡ್ಡಬಾಯಿ’ ಎಂದು ರೇಗಿದ ಬೆಕ್ಕಣ್ಣ ‘ಯುಟ್ಯೂಬ್‌ಗೆ ಅಪ್‌ಲೋಡ್ ಮಾಡೂಣು ಅಂತ ರಿಹರ್ಸಲ್ ಮಾಡಾಕತ್ತೀನಿ’ ಎಂದುತ್ತರಿಸಿ ಗಂಟಲು ಸರಿಪಡಿಸಿಕೊಂಡಿತು.

‘ಹೊಸ ವಿಶ್ವಾವಸು ಸಂವತ್ಸರದೊಳು ಕರುನಾಡಿಗರಿಗೆ ಕ್ಷೀರ, ಧಾನ್ಯ, ಫಲ, ತರಕಾರಿ ಬಲು ತುಟ್ಟಿಯಾಗುವುದು. ವಿದ್ಯುತ್ ತಂತಿಗಿಂತಲೂ ವಿದ್ಯುತ್ ಬಿಲ್ ಹೆಚ್ಚು ಶಾಕ್ ಹೊಡೆಯುವುದು’.

‘ಅದನ್ನು ಹೇಳಾಕೆ ನಿನ್ನ ಪಂಚಾಂಗ ಎದಕ್ಕೆ ಬೇಕಲೇ? ಹಳೇ ಸಂವತ್ಸರ ಹೋಗುವಾಗ ಬೆಲೆ ಏರಿಕೆ ಉಡುಗೊರೆ ಕೊಟ್ಟು ಹೋಗೈತಿ. ಹೊಸ ಸಂವತ್ಸರನೂ ಬೆಲೆ ಏರಿಕೆ ಉಡುಗೊರೆ ಹಿಡಕೊಂಡೇ ಬಂದೈತಿ’ ಎಂದೆ.

‘ನೀ ಸುಮ್ಮನೆ ಕೇಳು. ವಿಶ್ವಾವಸು ಅಂದರೆ ವಿಶ್ವಾಸ, ನಂಬಿಕೆ ವೃದ್ಧಿ. ಮೋದಿಮಾಮ, ಟ್ರಂಪ್, ಪುಟಿನ್ ತ್ರಿಮೂರ್ತಿಗಳ ಮೇಲೆ ವಿಶ್ವದೆಲ್ಲೆಡೆಯ ಜನರ ವಿಶ್ವಾಸ ವೃದ್ಧಿಯಾಗುವುದು. ಈ ಜನನಾಯಕರಿಗೆ ದೊಡ್ಡ ಕಾರ್ಪೊರೇಟ್ ಕುಳಗಳ ಮೇಲೆ ನಂಬಿಕೆ ಇನ್ನಷ್ಟು ಹೆಚ್ಚುವುದು’.

‘ಅಂಗೈ ಹುಣ್ಣಿಗೆ ಕನ್ನಡಿ ತೋರಿಸಿದಂತೆ ನೀ ಸಂವತ್ಸರ ಫಲ ಹೇಳಾಕೆ ಹತ್ತಿ! ನಿಮ್ಮ ಯತ್ನಾಳ ಅಂಕಲ್ಲು ಪಕ್ಷದಿಂದ ಉಚ್ಚಾಟನೆಯಾದ್ರೂ 2028ರಾಗೆ ನಾನೇ ಸಿಎಂ ಅಂದಾರೆ. ಹೊಸ ಸಂವತ್ಸರ ಏನು ಹೇಳತೈತೆ?’ ಎಂದು ಕೇಳಿದೆ.

‘2028ರ ಸಂವತ್ಸರ ಫಲದ ಮೇಲೆ ಅವರು ಸಿಎಂ ಆಗೂದು ಅವಲಂಬಿಸಿರತೈತಿ. ಮುಂದೆ ಕೇಳು. ವಿಶ್ವಾವಸು ಸಂವತ್ಸರದೊಳು ಎಲ್ಲಾ ರಾಶಿಯವರ ಸಂಪತ್ತು ಸಮೃದ್ಧಿಯಾಗುವುದು’ ಎಂದು ಖುಷಿಯಿಂದ ಹೇಳಿತು.

ನಾನು ಕಿಸಕ್ಕನೆ ನಕ್ಕೆ.

‘ಯಾರ ಸಂಪತ್ತು ವೃದ್ಧಿ? ಅದಾನಿ, ಅಂಬಾನಿಗಳದ್ದೋ ಅಥವಾ ಶ್ರೀಸಾಮಾನ್ಯರಿದ್ದೋ?’

‘ಶ್ರೀಸಾಮಾನ್ಯರಿಗೆ ಸಂಪತ್ತು ಎದಕ್ಕೆ ಬೇಕು? ಅವರು ಚುನಾವಣೆವಳಗೆ ಮತ ಹಾಕಕ್ಕೆ ಜೀಂವಾ ಹಿಡಕ್ಕೊಂಡಿದ್ದರೆ ಸಾಕೇಳು!’ ಬೆಕ್ಕಣ್ಣ ಹಂಗಿಸಿತು.

ಸಂಗತ

ನವೋಲ್ಲಾಸಕ್ಕೆ ಕಚಗುಳಿಯೆಂಬ ಗುಳಿಗೆ

ಎಂತಹ ಒತ್ತಡವನ್ನಾದರೂ ಶಮನಗೊಳಿಸಬಲ್ಲ ಶಕ್ತಿ ಹಾಸ್ಯಕ್ಕೆ ಇದೆ

• ಬಿ.ಎಸ್. ಭಗವಾನ್

ಆ ವೃತ್ತಿ ನಾಟಕದ ಕಂಪನಿಗೆ ಪ್ರೇಕ್ಷಕರ ಸಂಖ್ಯೆ ಕಡಿಮೆಯಾಯಿತು. ರಾಜನ ಪಾತ್ರವನ್ನು ಮಾಲೀಕನೇ ಮಾಡುತ್ತಿದ್ದ. ಒಮ್ಮೆ ರಾಜನ ದರ್ಬಾರಿನ ದೃಶ್ಯ. ಸಂಭಾಷಣೆಯ ಒಂದು ಹಂತದಲ್ಲಿ ರಾಜ ಬಹಳ ಠೀವಿಯಿಂದ ‘ಯಾರಲ್ಲಿ?’ ಎಂದು ಗುಡುಗಿದ. ಸೇವಕನೊಬ್ಬ ಏನಪ್ಪಣೆ ಪ್ರಭು ಅಂತ ಕೈಜೋಡಿಸಿ ಬರುವನೆಂದು ರಾಜನ ಜೊತೆಗೆ ಪ್ರೇಕ್ಷಕರೂ ಭಾವಿಸಿದ್ದರು. ಆದರೆ ಆಗಿದ್ದೇ ಬೇರೆ. ಸೇವಕನೇನೂ ಬಂದ. ಆದರೆ ‘ಯಾರೂ ಇಲ್ಲ’ ಎಂದು ಹೇಳಿ ಮರೆಯಾಗಿದ್ದ!

ನಟ–ನಟಿಯರಿಗೆ ಮೂರು ತಿಂಗಳಿಂದ ಸಂಬಳ ಪಾವತಿಯಾಗದಿರುವುದೇ ಈ ಅಸಹಕಾರದ ಮೂಲವಾಗಿತ್ತು. ನಾಟಕ ನೋಡುತ್ತಿದ್ದವರು ಪಾತ್ರ ನಿರ್ವಹಣೆಯಲ್ಲಿ ಹೀಗೂ ಉಂಟೆ ಅಂತ ಬೇಸರಗೊಂಡರು ನಿಜ. ಆದರೆ ಆದ ಎಡವಟ್ಟನ್ನು ಒಳಗೊಳಗೆ ಅವರು ಆನಂದಿಸಿದ್ದರು. ಹಾಸ್ಯದ ಜಾಯಮಾನವೇ ಹಾಗೆ. ಎಂತಹ ಕಠಿಣ ಸಂದರ್ಭವನ್ನೂ ಅದು ಹಗುರಗೊಳಿಸುತ್ತದೆ, ತಿಳಿಯಾಗಿಸುತ್ತದೆ. ವಿನೋದವೆಂಬ ಸುರಕ್ಷಾ ಕವಾಟದ ಮೂಲಕ ನಾವು ಆಕ್ರೋಶವನ್ನು ಹೊರಹಾಕಬಹುದು. ನಾವೇನು ಈಗ ನೋಡುತ್ತಿದ್ದೇವೆ ಅದು ಬದುಕಿನ ಒಂದು ಅಧ್ಯಾಯ ಎಂಬ ಭಾವವನ್ನು ಹಾಸ್ಯ ಮೂಡಿಸುತ್ತದೆ. ವಿನೋದಪ್ರಜ್ಞೆ ಒಂದು ಸ್ವಾಭಾವಿಕ ವರ. ಉತ್ತಮ ಆರೋಗ್ಯದ ಅವಶ್ಯಕ ಭಾಗ. ನಗು ಮಾನವನ ಒಂದು ಸಾರ್ವತ್ರಿಕ ಅನುಭವ. ನಗಬಲ್ಲ ಏಕೈಕ ಪ್ರಾಣಿಯೆಂದರೆ ಮನುಷ್ಯನೇ. ಅದಕ್ಕೆ ಜಿಗುಟುತನ ಬೇಡ.

ವಿನೋದವು ಸೃಜನಶೀಲ ನಾವೀನ್ಯತೆಯ ಒಂದು ಮುಖ್ಯ ಲಕ್ಷಣ. ಬ್ರಿಟನ್ನಿನ ಕಾದಂಬರಿಕಾರ ಚಾರ್ಲ್ಸ್ ಡಿಕನ್ಸ್ ಗಂಭೀರ ಹಾಸ್ಯ ಕುರಿತು ನುಡಿದಿದ್ದು ಹೀಗೆ: ‘ನಗುವಿನಷ್ಟು ತಡೆಯಲಾಗದ ಸಾಂಕ್ರಾಮಿಕ ಜಗತ್ತಿನಲ್ಲಿ ಬೇರೆಲ್ಲೂ ಇಲ್ಲ’. ಮನೆ, ಕಚೇರಿ, ಮಾಲ್, ಸಭೆ, ಕ್ರೀಡಾಂಗಣ.... ಎಲ್ಲೇ ಇದ್ದರೂ ಒತ್ತಡವನ್ನು ಶಮನಗೊಳಿಸಬಲ್ಲ ಶಕ್ತಿ ಹಾಸ್ಯಕ್ಕೆ ಇದೆ. ಅಮೆರಿಕದ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಎಂ.ಬಿ.ಎ. ಕೋರ್ಸ್‌ನ ಪಠ್ಯಕ್ರಮದಲ್ಲಿ ಕಚೇರಿಗಳಲ್ಲಿನ ದಕ್ಷತೆಗೆ ಹಾಸ್ಯಪ್ರವೃತ್ತಿ ಕುರಿತು ಅಧ್ಯಾಯಗಳಿವೆ. ನಗುವುದಕ್ಕೂ ಮೀರಿ ವಿನೋದವು ಪರಸ್ಪರ ನಂಬಿಕೆ ಮತ್ತು ವಿಶ್ವಾಸವನ್ನು ವೃದ್ಧಿಸುತ್ತದೆ. ಅನಗತ್ಯ ಆತಂಕಕ್ಕೆ ಕಡಿವಾಣ ಹಾಕಿ, ಸ್ವಸಾಮರ್ಥ್ಯ ವರ್ಧಿಸುವ ಹಾಸ್ಯವು ಬದುಕಿನ ಗುಣಮಟ್ಟ ಸುಧಾರಿಸುತ್ತದೆ.

ಆದರೆ ಅದು ಪರರ ಭಾವನೆಗಳನ್ನು ಗೌರವಿಸುವ ಪ್ರಸ್ತುತ ವಿನೋದವಾಗಿರಬೇಕಷ್ಟೆ. ವಿವೇಚನೆಯಿಲ್ಲದ ಮತ್ತು ನಿಂದನಾತ್ಮಕ ತಮಾಷೆಗಳು ರೋಷದ ವಾತಾವರಣ ಸೃಷ್ಟಿಸುವ ಅಪಾಯ ಇದೆ. ನಾವೇನು ವೇದಿಕೆಯ ನಗೆಗಾರರಾಗಬೇಕಿಲ್ಲ. ನಗುವ, ನಗಿಸುವ ಸ್ವಭಾವವಿದ್ದರಾಯಿತು. ದಿನಕ್ಕೆ ಒಂದಾದರೂ ತಮಾಷೆಯ ಸಂಗತಿ ಗುರುತಿಸುವ ತೆರೆದ ಮನಸ್ಸು ಬೇಕು. ಅಹಮಿಕೆಯ ವ್ಯಸನ ನಗಿಸುವ ಅವಕಾಶಗಳನ್ನು ತಡೆಯುವುದು. ಸ್ವಯಂ ನವಿರಾದ ವಿಡಂಬನೆಗೆ ಒಳಪಡಿಸಿಕೊಂಡು ನಕ್ಕು ನಗಿಸುವುದು ಮೆಚ್ಚುಗೆಗೆ ಪಾತ್ರವಾಗುತ್ತದೆ. ಹಾಸ್ಯಪ್ರವೃತ್ತಿ ಎಂದರೆ ಪರರನ್ನು ಗೇಲಿಗೆ ಗುರಿಯಾಗಿಸುವುದಲ್ಲ.

ವಯಸ್ಸು,ಲಿಂಗತ್ವ,ಭಾಷೆ,ಗಡಿ,ವೃತ್ತಿಯತಾರತಮ್ಯವಿಲ್ಲದೆ ಎಲ್ಲರೂ ವಿಡಂಬನೆಯನ್ನು ಆನಂದಿಸುತ್ತಾರೆ. ಸರಳವಾದ ಬದುಕನ್ನು ಕದಡದಿದ್ದರಾಯಿತು, ಹಾಸ್ಯ ತಂತಾನೆ ಪುಟಿಯುತ್ತದೆ. ಆಡ್ತಾ ಆಡ್ತಾ ಆಯಾಚಿತವಾಗಿ ವಿನೋದ ವಿಜೃಂಭಿಸಿರುತ್ತದೆ. ಅದೊಂದು ಕವಿಗೋಷ್ಠಿ. ಸಮಯದ ಅಭಾವದ ಕಾರಣ ಪ್ರತಿಯೊಬ್ಬರೂ ಒಂದೊಂದೇ ಕವನ ಓದಬೇಕೆಂಬ ಷರತ್ತು ಇತ್ತು. ಒಬ್ಬ ಕವಿ ಎರಡು ಕವನಗಳನ್ನು ತಂದಿರುವುದನ್ನು ಕವಿಗೋಷ್ಠಿಯ ಅಧ್ಯಕ್ಷ ಗಮನಿಸಿ ‘ನೀವು ಎರಡನೇ ಕವನ ಓದಿಬಿಡಿ’ ಎಂದರು! ಕವಿ ಚೆನ್ನವೀರ ಕಣವಿ ಅವರು ಸಮಾರಂಭಕ್ಕೆ ಅಧ್ಯಕ್ಷ ಏಕೆ ಬೇಕು ಎನ್ನುವುದಕ್ಕೆ ಕೊಟ್ಟ ಕಾರಣ ಮಾರ್ಮಿಕ. ಸಭೆಯಲ್ಲಿ ಒಬ್ಬರಾದರೂ ಗಂಭೀರವಾಗಿ ಕುಳಿತುಕೊಳ್ಳಬೇಕೆಂದು!



ಒಂದರ ಮೇಲೆ ಇನ್ನೊಂದು ನಗೆಹನಿಗಳನ್ನು ಒಪ್ಪಿಸಿದ ಮಾತ್ರಕ್ಕೆ ಹಾಸ್ಯದ ಉತ್ಸವವಾಗದು. ಅವನ್ನು ಸಂಬಂಧವೆನ್ನುವ ನಾರು ಪೋಣಿಸಿರಬೇಕಲ್ಲ. ದಶಕಗಳ ಹಿಂದಿನ ಕನ್ನಡ ಸಿನಿಮಾಗಳಲ್ಲಿನ ಹಾಸ್ಯ ಈಗ ಬರೀ ಮೆಲುಕು. ತನ್ನಿಂದ ಸಾಲ ಪಡೆದವನು ವಾಪಸ್ ಕೊಡುತ್ತಾನ ಅಂತ ಒಬ್ಬ ವ್ಯಾಪಾರಿಯು ಊರ ಹಿರಿಯನನ್ನು ಕೇಳುತ್ತಾನೆ. ‘ಧೈರ್ಯವಾಗಿರು, ಬೇಕಾದರೆ ಎದೆ ಮೇಲೆ ಒಂದು ಕಲ್ಲು ಇಟ್ಟುಕೊ’ ಎನ್ನುವುದೇ ಅಭಯದಾತ? ಉಪಕಾರದ ನೆಪದಲ್ಲಿ ಅಪಕರಿಸುವ ಖಳನಾಯಕನನ್ನು ನಾಯಕ ವಂದಿಸುತ್ತಾನೆ. ‘ನನ್ನ ಚಿಲ್ಲರೆ ಕೆಲಸಕ್ಕೇಕೆ ಇಂಥ ಹೊಗಳಿಕೆ’ ಎನ್ನುವ ಖಳನಾಯಕನ ಪ್ರತಿಕ್ರಿಯೆಯಲ್ಲಿ ಅದ್ಭುತ ವಿನೋದವಿದೆ. ತಾವು ಸಿಡಿಸಿದ ಚಟಾಕಿಗೆ ಯಾರೂ ನಗದಿದ್ದರೆ ‘ಇದು ಜೋಕು ಕಣ್ರೊ, ನಗಿ’ ಎನ್ನುತ್ತಿದ್ದರು ಕೈಲಾಸಂ. ಅಂದಹಾಗೆ ಒಂದು ತಮಾಷೆಯನ್ನು ವಿವರಿಸಿದರೆ ಅದನ್ನು ಕೊಂದಂತೆ! ಕಂಡ, ಅನುಭವಿಸಿದ ಹಾಸ್ಯವನ್ನು ವಿನಿಮಯ ಮಾಡಿಕೊಂಡರೆ ಮತ್ತಷ್ಟು ಖುಷಿ.

ತಮ್ಮ ದುಗುಡ, ಅಳಲು ಮರೆಮಾಚಲು ವಿನೋದವನ್ನು ಒಂದು ರಕ್ಷಣಾ ತಂತ್ರ ಆಗಿಸಿಕೊಳ್ಳುವುದು ಸಲ್ಲದು. ಇಂಥ ದುಸ್ಸಾಹಸ ಖಿನ್ನತೆಗೆ ಮೂಲವಾದ ನಿದರ್ಶನಗಳುಂಟು. ನಾನು ಇವೊತ್ತಿನ ದಿನಪತ್ರಿಕೆಯನ್ನು ನಿನ್ನೆಯಿಂದ ಹುಡುಕುತ್ತಿದ್ದೇನೆ ಎಂಬ ಹಸಿ ಸುಳ್ಳನ್ನು ಮುಗುಳ್ನಗೆ ಕ್ಷಮಿಸುತ್ತದೆ. ವರ್ಷದ ಪ್ರತೀ ದಿನ ನಮ್ಮನ್ನು ‘ದಡ್ಡರನ್ನಾಗಿಸಲು’ ಕಾಡುತ್ತಿರಲಿ ಕಚಗುಳಿಗಳು.

ವಾಚಕರ ವಾಣಿ

ನೇಪಾಳ: ಹಳೆ ಗಂಡನ ಪಾದವೇ ಗತಿ?

‘ಪ್ರಜಾಪ್ರಭುತ್ವ ಬೇಡ, ಅರಸೊತ್ತಿಗೆ ಬೇಕು, ಜಾತ್ಯತೀತ ರಾಷ್ಟ್ರ ಬೇಡ, ಹಿಂದೂ ರಾಷ್ಟ್ರ ಬೇಕು’ ಎನ್ನುವ ಹೋರಾಟ ನೇಪಾಳದಲ್ಲಿ ತೀವ್ರವಾಗುತ್ತಿದೆ. 16 ವರ್ಷಗಳಲ್ಲಿ 14 ಪ್ರಜಾಸತ್ತಾತ್ಮಕ ಸರ್ಕಾರಗಳನ್ನು ನೋಡಿ ಜನ ರೋಸಿಹೋಗಿದ್ದಾರೆ, ಮರಳಿ ಬಂದು ಅಧಿಕಾರದ ಸೂತ್ರ ಹಿಡಿದು ದೇಶವನ್ನು ಮುನ್ನಡೆಸುವಂತೆ ಹಿಂದಿನ ಅರಸರನ್ನು ಕರೆಯುತ್ತಿದ್ದಾರೆ.

ನಾವು ಪ್ರಜಾಪ್ರಭುತ್ವಕ್ಕೆ ಅರ್ಹರಲ್ಲ, ಪ್ರಜಾಪ್ರಭುತ್ವದ ಓವರ್‌ಡೋಸ್ ದೇಶವನ್ನು ನಾಶಪಡಿಸುತ್ತಿದೆ, ರಾಜಕೀಯ ಅಸ್ಥಿರತೆಯಿಂದ ದೇಶದ ಅಭಿವೃದ್ಧಿ ನಿಂತ ನೀರಾಗಿದೆ ಎಂದು ಜನ ಧ್ವನಿ ಎತ್ತಿರುವುದನ್ನು ಅವಲೋಕಿಸಿದರೆ, ಅವರು ಹಳೆ ಗಂಡನ ಪಾದವೇ ಲೇಸು ಎನ್ನುತ್ತಿರುವಂತಿದೆ. ಭಾರತದಲ್ಲೂ ಕೆಲವು ರಾಜ್ಯಗಳಲ್ಲಿನ ರಾಜಕೀಯ ಅಸ್ಥಿರತೆ ಮತ್ತು ಆಡಳಿತ ವೈಖರಿಯನ್ನು ನೋಡಿದರೆ ಮುಂದಿನ ದಿನಗಳಲ್ಲಿ ಇಂತಹ ಧ್ವನಿ ಕೇಳುವ ಭಯ ಕಾಡುತ್ತದೆ.

ರಮಾನಂದ ಶರ್ಮಾ, ಬೆಂಗಳೂರು

ಯತ್ನಾಳ: ರಾಜಕೀಯ ಪಯಣ ಅವಲೋಕನಕ್ಕೆ ಸಕಾಲ

ಬಿಜೆಪಿ ಶಾಸಕ ಶಿವರಾಮ್ ಹೆಬ್ಬಾರ ಅವರು ಪಕ್ಷದಲ್ಲಿ ಮೂರು ವರ್ಗಗಳನ್ನು ಗುರುತಿಸಿದ್ದಾರೆ. ಜೈಕಾರ ಹಾಕುವವರು, ಜಿಲೇಬಿ ತಿನ್ನುವವರು ಹಾಗೂ ಜೈಲಿಗೆ ಹೋಗುವವರು. ಹೆಬ್ಬಾರ ಅವರಿಗೆ ನೋಟಿಸ್ ಮಾತ್ರ ನೀಡಲಾಗಿದೆ. ಆದರೆ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ. ಯತ್ನಾಳ ಅವರ ಈಗಿನ ಪರಿಸ್ಥಿತಿಯನ್ನು ನೋಡಿದರೆ ದಶಕಗಳ ಹಿಂದಿನ ಎ.ಕೆ.ಸುಬ್ಬಯ್ಯ ನೆನಪಾಗುತ್ತಾರೆ. ಅವರನ್ನು ‘ಸುದ್ದಿ ಸುಬ್ಬಯ್ಯ’ ಅನ್ನುತ್ತಿದ್ದರು. ಸದನದ ಒಳಗೆ, ಹೊರಗೆ ಅವರು ಹೇಳುತ್ತಿದ್ದುದನ್ನು ಎಲ್ಲರೂ ಆಲಿಸುತ್ತಿದ್ದರು. ಆದರೆ ಅವರು ಅಂತಿಮವಾಗಿ ಒಂಟಿಯಾದರು.

ಒಬ್ಬ ರಾಜಕಾರಣಿಯಾಗಿ ಯತ್ನಾಳರು ಈಗಲಾದರೂ ತಮ್ಮ ರಾಜಕೀಯ ಪಯಣವನ್ನು ಅವಲೋಕಿಸಿಕೊಳ್ಳಲು ಇದು ಸಕಾಲ. ಅವರ ಮುಖ್ಯ ದೌರ್ಬಲ್ಯ- ತೀವ್ರ ಹಿಂದುತ್ವದ ನಿಲುವು, ಹೇಳಿಕೆಗಳು (ಶಾಸಕನಾದವನು ‘ನನಗೆ ನಿಮ್ಮ ಮತ ಬೇಡ’ ಎಂದು ಒಂದು ಕೋಮಿಗೆ ಹೇಳುವುದು ರಾಜಧರ್ಮಕ್ಕೆ ವಿರುದ್ಧವಾದುದು). ಈಚೆಗೆ ಅವರ ಮಾತು ಅತಿ ಆಗಿದೆ. ಅದಕ್ಕೆ ಪ್ರಚಾರವೂ ಸಿಗುತ್ತಿದೆ. ಆದರೆ ಅಷ್ಟರಿಂದಲೇ ಜನಬೆಂಬಲ ಹೆಚ್ಚಿಬಿಡುವುದಿಲ್ಲ. ‘ನನಗೆ ಒಳ್ಳೆಯ ದಿನಗಳು ಬರಲಿವೆ’ ಎಂಬ ಆಶಾಭಾವ ತಪ್ಪಲ್ಲ. ಆದರೆ ‘ನಾನು ಮುಖ್ಯಮಂತ್ರಿ ಆಗಲಿದ್ದೇನೆ’ ಎನ್ನುವುದು ಹಾಸ್ಯಾಸ್ಪದ. ಬಿಜೆಪಿಗೆ ಹಿಂತಿರುಗಿದರೂ ಹಾಗಾಗುವ ಸಾಧ್ಯತೆ ತೀರಾ ಕಡಿಮೆ.

‘ಒಂದು ಸಮುದಾಯ, ಜಿಲ್ಲೆ, ಪ್ರದೇಶ ಅಷ್ಟೇ ಅಲ್ಲ ಇಡೀ ಕರ್ನಾಟಕದಲ್ಲಿ ಎಲ್ಲೆಡೆ ಜನ ನನ್ನನ್ನು ಬೆಂಬಲಿಸುತ್ತಿದ್ದಾರೆ’ ಎಂಬುದು ಅವರ ಗ್ರಹಿಕೆ ಅಷ್ಟೇ, ವಾಸ್ತವ ಅಲ್ಲ. ರಾಜಕಾರಣದಲ್ಲಿ ನೈತಿಕ ಮೌಲ್ಯಗಳು, ಪ್ರಾಮಾಣಿಕತೆ ಇರಬೇಕು ಎಂಬುದು ಅವರ ಆಶಯ ಆಗಿದ್ದರೆ, ಈಗ ಕರ್ನಾಟಕದಲ್ಲಿರುವ ಮೂರು ಪ್ರಮುಖ ಪಕ್ಷಗಳಿಂದಲೂ ಅವರು ದೂರವಿರಬೇಕಾಗುತ್ತದೆ. ಸ್ವತಂತ್ರ, ವೈಯುಕ್ತಿಕ ನೆಲೆಯಲ್ಲಿ ಕೆಲಸ ಮಾಡಬೇಕಾದರೆ ತಮ್ಮ ವಿಚಾರಗಳಲ್ಲಿ ಮೊದಲು ವೈಶಾಲ್ಯತೆಯನ್ನು ಅಳವಡಿಸಿಕೊಳ್ಳಬೇಕಾಗುತ್ತದೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಫೋನ್ ಕದ್ದಾಲಿಕೆ ಆರೋಪಕ್ಕೆ ಕೊನೆಯೆಂದು?

ರಾಜ್ಯದಲ್ಲಿ ಸಿ.ಡಿ., ಪೆನ್‌ಡ್ರೈವ್, ಮಧುಬಲೆಗೆ ಸಂಬಂಧಿಸಿದ ಆರೋಪ, ಪ್ರತ್ಯಾರೋಪಗಳು ಈಚಿನ ದಿನಗಳಲ್ಲಿ ವಿಪರೀತಕ್ಕೆ ಹೋಗಿವೆ. ಇವುಗಳೊಂದಿಗೆ ಫೋನ್ ಕದ್ದಾಲಿಕೆಯ ಆರೋಪವೂ ಆಗಾಗ್ಗೆ ಕೇಳಿಬರುತ್ತಲೇ ಇದೆ. ಫೋನ್ ಕದ್ದಾಲಿಕೆ ಎಂಬುದನ್ನು ಆಡಳಿತ ಪಕ್ಷದವರು ತಮ್ಮ ರಾಜಕೀಯ ಹಿತಾಸಕ್ತಿಗಾಗಿ ಬಳಸಿಕೊಳ್ಳುವ ರಾಜಕೀಯ ಅಸ್ತ್ರ ಎಂಬುದಾಗಿ ವಿರೋಧ ಪಕ್ಷಗಳ ಮುಖಂಡರು ದೂರುತ್ತಿದ್ದಾರೆ.

ಕದ್ದಾಲಿಕೆ ನಡೆದಿರುವುದು ನಿಜವೇ ಆಗಿದ್ದರೆ ಅದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಕಳಂಕಪ್ರಾಯ. ಇಂತಹ ಆರೋಪದ ಪರಿಣಾಮವಾಗಿ ರಾಜ್ಯದಲ್ಲಿ ರಾಮಕೃಷ್ಣ ಹೆಗಡೆ ನೇತೃತ್ವದ ಸರ್ಕಾರ ಪತನವಾಗಿತ್ತು. ವಿ.ಪಿ. ಸಿಂಗ್ ಪ್ರಧಾನಿಯಾಗಿದ್ದ ಸಂದರ್ಭದಲ್ಲೂ ಇದು ಹೆಚ್ಚು ಸದ್ದು ಮಾಡಿತ್ತು. ಇಂತಹ ಪ್ರಕರಣಗಳ ಕುರಿತು ಕಾಲಮಿತಿಯಲ್ಲಿ ತನಿಖೆ ನಡೆಸಿ ಸತ್ಯಾಂಶ ಹೊರಬರುವಂತೆ ನೋಡಿಕೊಳ್ಳುವ ಅಗತ್ಯ ಇದೆ.

ಸುರೇಂದ್ರ ಪೈ, ಭಟ್ಕಳ

ಮತಕ್ಷೇತ್ರ ಭತ್ಯೆ ಹೆಚ್ಚಳ: ಭೇಟಿ?

ಶಾಸಕರು ಮತ್ತು ಸಂಸದರು ತಿಂಗಳ ಸಂಬಳ ಅಲ್ಲದೆ ಪಡೆಯುವ ವಿವಿಧ ಭತ್ಯೆ ಮತ್ತು ಸೌಲಭ್ಯಗಳಲ್ಲಿ ಮತಕ್ಷೇತ್ರ ಭತ್ಯೆಯೂ ಒಂದು. ಇತ್ತೀಚೆಗೆ ಕರ್ನಾಟಕದಲ್ಲಿ ಶಾಸಕರ ಭತ್ಯೆಯಲ್ಲಿ ಹೆಚ್ಚಳವಾಗಿದೆ. ಅಂತೆಯೇ ಸಂಸದರ ಭತ್ಯೆಯೂ ಹೆಚ್ಚಳಗೊಂಡಿದೆ. ಈ ಭತ್ಯೆಯ ಪ್ರಮಾಣವು ಕರ್ನಾಟಕದಲ್ಲಿ ಶಾಸಕರಿಗೆ ತಿಂಗಳಿಗೆ ₹1 ಲಕ್ಷ, ಸಂಸದರಿಗೆ ₹70 ಸಾವಿರದಷ್ಟು ಆಗಿದೆ (ಅಂದರೆ ಒಂದು ದಿನಕ್ಕೆ ಕ್ರಮವಾಗಿ ಸರಾಸರಿ ಲೆಕ್ಕದಲ್ಲಿ ₹3,333 ಮತ್ತು ₹2,333 ಆಗುತ್ತದೆ). ಇದನ್ನು ಇವರು ಪಡೆಯುವುದು ತಮ್ಮ ಕ್ಷೇತ್ರಗಳಲ್ಲಿ ಕಚೇರಿಯ ನಿರ್ವಹಣೆ ಮತ್ತು ಮತದಾರರನ್ನು ಸಂಪರ್ಕಿಸುವುದಕ್ಕಾಗಿ.

ಬೆಂಗಳೂರು ನಗರದಲ್ಲಿ ನಾವಿರುವ ಶ್ರೀನಿವಾಸನಗರವನ್ನು ಒಳಗೊಂಡ ಮತಕ್ಷೇತ್ರದ ಶಾಸಕರಾಗಲೀ ಸಂಸದರಾಗಲೀ ಈ ಬಡಾವಣೆಗೆ ಖುದ್ದಾಗಿ ಬಂದು ಇಲ್ಲಿನ ರಸ್ತೆಗಳ ಸ್ಥಿತಿಗತಿ, ಕಸದ ನಿರ್ವಹಣೆಯ ವ್ಯವಸ್ಥೆ, ಪ್ರತಿ ರಸ್ತೆಯ ಆಚೆ ಈಚೆ ವಾಹನಗಳನ್ನು ನಿಲ್ಲಿಸುವುದರಿಂದ ಸಂಚಾರಕ್ಕಾಗುವ ಇಕ್ಕಟ್ಟಿನ ಸ್ಥಿತಿ... ಇಂತಹವುಗಳ ಬಗ್ಗೆ ಹಾಗೂ ಜನರನ್ನು ಬಾಧಿಸುವ ಇತರ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆಯುವ ಅಭ್ಯಾಸವನ್ನು ಇಟ್ಟುಕೊಂಡಂತಿಲ್ಲ ಎಂದರೆ ಇದನ್ನು ಆರೋಪ ಎಂದು ಭಾವಿಸದೆ ಕೊರತೆಯತ್ತ ಬೊಟ್ಟು ಮಾಡಿರುವುದು ಎಂದು ತಿಳಿದರೆ ಸಂತೋಷ. ಹೌದು, ಹೀಗೆ ಪಡೆಯುವ ಭತ್ಯೆಯ ಲೆಕ್ಕಪತ್ರ (ಇಟ್ಟಿದ್ದರೆ) ತಪಾಸಣೆ ಮಾಡುವ ವ್ಯವಸ್ಥೆ ಏನಾದರೂ ಸರ್ಕಾರದಲ್ಲಿ ಇದೆಯೇ ಎಂಬ ಬಗೆಗೂ ಸಾರ್ವಜನಿಕರು ತಿಳಿಯಲು ಇಚ್ಛಿಸಿದರೆ ಅದೇನೂ ತಪ್ಪಲ್ಲ ಅಲ್ಲವೇ?

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಆನ್‌ಲೈನ್ ಆಟ ಬೇಕಿದೆ ಅಂಕುಶ

ಆನ್‌ಲೈನ್ ಗೇಮಿಂಗ್ ಮತ್ತು ಬೆಟ್ಟಿಂಗ್ ಜಾಹೀರಾತುಗಳಲ್ಲಿ ಕಾಣಿಸಿಕೊಂಡ ಸಿನಿಮಾ ನಟರು ಮತ್ತು ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರ ಮಾಡುವ ಮೂಲಕ ಉತ್ತೇಜಿಸಿದ ಯುಟ್ಯೂಬರ್‌ಗಳ ವಿರುದ್ಧ ತೆಲಂಗಾಣದಲ್ಲಿ ಪ್ರಕರಣಗಳು ದಾಖಲಾಗಿವೆ. ಇದರೊಂದಿಗೆ ಆನ್‌ಲೈನ್ ಗೇಮಿಂಗ್ ವಿಚಾರ ಮುನ್ನೆಲೆಗೆ ಬಂದಿದೆ. ಇವುಗಳ ನಿಯಂತ್ರಣಕ್ಕೆ ಕೇಂದ್ರ ಸರ್ಕಾರ ಕೆಲವು ನಿಯಮಗಳನ್ನು ರೂಪಿಸಿದ್ದರೂ ಇದರ ಬಗ್ಗೆ ರಾಜ್ಯಗಳೇ ಕ್ರಮ ಕೈಗೊಳ್ಳಬೇಕು ಎಂದು ಹೇಳುತ್ತಿದೆ. ಕೆಲವು ರಾಜ್ಯಗಳಲ್ಲಿ ನಿರ್ಬಂಧ ಹೇರಲಾಗಿದೆ. ಈ ಬಗ್ಗೆ ಕಾನೂನಿನಲ್ಲಿ ಸ್ಪಷ್ಟತೆಯ ಕೊರತೆ ಇದೆ. ಅತ್ಯಂತ ಬೇಗ ಹಣ ಮಾಡುವ ಆಸೆಯಿಂದ ಜನ ಅತ್ಯಂತ ಶೀಘ್ರವಾಗಿ ಹಣ ಕಳೆದುಕೊಳ್ಳುತ್ತಲೇ ಇದ್ದಾರೆ

ಪ್ರಜಾವಾಣಿ ವಾರ್ತೆ



ಆನ್‌ಲೈನ್ ಗೇಮಿಂಗ್ (ಆಟ) ಮಾರುಕಟ್ಟೆ ಭಾರತದಲ್ಲಿ ಭಾರಿ ವೇಗವಾಗಿ ಬೆಳವಣಿಗೆ ಕಾಣುತ್ತಿದೆ. ದೇಶದಲ್ಲಿ ಡಿಜಿಟಲ್ ಕ್ರಾಂತಿ ಸಂಭವಿಸಿದ ನಂತರ ಗೇಮಿಂಗ್ ಆ್ಯಪ್‌ಗಳು ಮತ್ತು ವೆಬ್‌ಸೈಟ್‌ಗಳು ಅತ್ಯಂತ ತ್ವರಿತವಾಗಿ ಬೆಳವಣಿಗೆ ಕಂಡವು. ದೇಶದಲ್ಲಿ ಯುವಜನರೇ ಬಹುಸಂಖ್ಯಾತರಾಗಿದ್ದು, ಈ ಪೈಕಿ ಹೆಚ್ಚಿನವರ ಬಳಿ ಸ್ಮಾರ್ಟ್ ಫೋನ್‌ಗಳಿವೆ. ಆನ್‌ಲೈನ್ ಗೇಮಿಂಗ್ ಉದ್ಯಮ ಬಹುಬೇಗ ಬೆಳೆಯಲು ಇದು ಪ್ರಮುಖ ಕಾರಣ.

ಡಿಜಿಟಲ್ ಪೇಮೆಂಟ್ ಆ್ಯಪ್‌ಗಳು ಬಳಕೆಗೆ ಬಂದ ನಂತರ ಇದು ಮತ್ತಷ್ಟು ಹೆಚ್ಚಾಯಿತು. ಅನೇಕ ದೇಶೀಯ ಮತ್ತು ವಿದೇಶಿ ಮೂಲದ ಕಂಪನಿಗಳು ಗೇಮಿಂಗ್ ಆ್ಯಪ್‌ಗಳನ್ನು ಅಭಿವೃದ್ಧಿಪಡಿಸಿ, ವಾರ್ಷಿಕವಾಗಿ ಸಾವಿರಾರು ಕೋಟಿ ರೂಪಾಯಿಗಳ ವ್ಯವಹಾರ ಮಾಡುತ್ತಿವೆ. ಸೆಲೆಬ್ರೆಟಿಗಳು, ಕ್ರೀಡಾಪಟುಗಳು, ನಟ ನಟಿಯರು ಇದರ ಜಾಹೀರಾತು ಪ್ರಚಾರಕರಾಗಿದ್ದಾರೆ. ಆನ್‌ಲೈನ್ ಗೇಮಿಂಗ್ ಮೂಲಕ ಮನೆಯಲ್ಲಿಯೇ ಕುಳಿತು ಸುಲಭವಾಗಿ ಮತ್ತು ಶೀಘ್ರವಾಗಿ ಹಣ ಮಾಡಬಹುದು ಎಂದು ಪ್ರಚಾರ ಮಾಡಲಾಗುತ್ತಿದೆ. ಹಲವು ರೀತಿಯ ಬೆಟ್ಟಿಂಗ್ ಆ್ಯಪ್‌ಗಳು ಚಾಲ್ತಿಯಲ್ಲಿದ್ದು, ಒಂದೊಂದರಲ್ಲೂ ಹಲವು ರೀತಿಯ ಆಟಗಳಿವೆ.

ಇದರ ಬೆನ್ನಲ್ಲೇ, ಇದರಿಂದ ಹಣ ಕಳೆದುಕೊಂಡು ಬೀದಿಗೆ ಬಿದ್ದವರು, ಐಪಿಎಲ್ ಸೇರಿದಂತೆ ಇನ್ನಿತರ ಕ್ರೀಡೆಗಳ ಬೆಟ್ಟಿಂಗ್‌ನಲ್ಲಿ ತೊಡಗಿ ಸಾಲ ಮಾಡಿಕೊಂಡು ಕೌಟುಂಬಿಕ ಕಲಹಗಳಿಗೆ ಗುರಿಯಾದವರು, ಕುಟುಂಬಸಮೇತ ಆತ್ಮಹತ್ಯೆ ಮಾಡಿಕೊಂಡವರ ಬಗ್ಗೆ ವರದಿಗಳು ಹೆಚ್ಚಾಗಿವೆ. ಅನೇಕ ಯುವಕರಿಗೆ ಇದು ಒಂದು ಗೀಳಾಗಿ ಮಾರ್ಪಟ್ಟಿದ್ದು, ಮಾನಸಿಕ ಅಸ್ವಸ್ಥತೆಗೂ ಒಳಗಾಗುತ್ತಿದ್ದಾರೆ. ಇಂಥವರ ಸಂಖ್ಯೆ ಕೋಟಿಗಳ ಲೆಕ್ಕದಲ್ಲಿ ಇದೆ.

ಈ ವಿಚಾರ ಸಂಸತ್ತಿನಲ್ಲಿಯೂ ಇತ್ತೀಚೆಗೆ ಪ್ರತಿಧ್ವನಿಸಿ, ಎಲ್ಲ ಆನ್‌ಲೈನ್ ವೆಬ್‌ಸೈಟ್, ಆ್ಯಪ್‌ಗಳನ್ನು ನಿರ್ಬಂಧಿಸಬೇಕು ಎನ್ನುವ ಕೂಗೆದ್ದಿತ್ತು. ಆದರೆ, ಇದು ರಾಜ್ಯಪಟ್ಟಿಯಲ್ಲಿ ಬರುವ ವಿಚಾರವಾಗಿದ್ದು, ರಾಜ್ಯಗಳ ಮಟ್ಟದಲ್ಲೇ ಕಾನೂನು ತರಬೇಕು ಎಂದು ಕೇಂದ್ರ ಮಾಹಿತಿ ಮತ್ತು ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದರು. ಇಷ್ಟಾದರೂ ಕೇಂದ್ರವು ಆನ್‌ಲೈನ್ ಗೇಮಿಂಗ್ ಸಂಬಂಧ ಕೆಲವು ನಿಯಮಗಳನ್ನು ರೂಪಿಸಿದ್ದು, 1,410 ಆನ್‌ಲೈನ್ ಗೇಮಿಂಗ್ ಆ್ಯಪ್/ವೆಬ್‌ಸೈಟ್‌ಗಳನ್ನು (2022ರಿಂದ 2025 ಫೆಬ್ರುವರಿವರೆಗೆ) ನಿರ್ಬಂಧಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದರು. ಅದರ ಹೊರತಾಗಿಯೂ ಇಂಥ ಪ್ರಕರಣಗಳು ವರದಿಯಾದರೆ, ತಪ್ಪಿತಸ್ಥರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) 112ರ ಅಡಿ ಕ್ರಮ ಜರುಗಿಸಲಾಗುವುದು ಎಂದಿದ್ದರು.

ಭಾರತದಲ್ಲಿ ಜೂಜು ಸಾಂಪ್ರದಾಯಿಕ ಕ್ರೀಡೆ ಎಂಬಂತೆ ನಡೆದುಬಂದಿದ್ದು, ಅದನ್ನು ನಿರ್ಬಂಧಿಸಲು 1867ರ ಸಾರ್ವಜನಿಕ ಜೂಜಾಟ ಕಾಯ್ದೆಯನ್ನು ಜಾರಿಗೆ ತರಲಾಗಿತ್ತು. ಅದನ್ನು ಸಂವಿಧಾನದ 7ನೇ ಪರಿಚ್ಛೇದದಲ್ಲಿ ಸೇರಿಸಲಾಗಿದ್ದು, ರಾಜ್ಯಗಳು ಬಯಸಿದರೆ ಅದನ್ನು ಹಾಗೆಯೇ ಉಳಿಸಿಕೊಳ್ಳಬಹುದು ಇಲ್ಲವೇ ಬದಲಾಯಿಸಿಕೊಳ್ಳಬಹುದು ಎಂದು ಹೇಳಲಾಗಿತ್ತು. ಆನ್‌ಲೈನ್ ಗೇಮಿಂಗ್‌ಗೆ ಸಂಬಂಧಿಸಿದ ಕಾಯ್ದೆ/ನಿಯಮಗಳೂ ಬಹುತೇಕ ಹೀಗೆಯೇ ಇವೆ. ಹಲವು ರಾಜ್ಯಗಳಲ್ಲಿ ಆನ್‌ಲೈನ್ ಗೇಮಿಂಗ್ ಅನ್ನು ನಿಷೇಧಿಸಲಾಗಿದ್ದರೆ, ಕೆಲವು ರಾಜ್ಯಗಳಲ್ಲಿ ಕಾನೂನುಬದ್ಧಗೊಳಿಸಲಾಗಿದೆ.

> **ಬಳಕೆದಾರರು ಕಂಪ್ಯೂಟರ್ ಅಥವಾ ಮಧ್ಯವರ್ತಿಯೊಬ್ಬರ ಮೂಲಕ ಇಂಟರ್‌ನೆಟ್‌ನಲ್ಲಿ ಆಡುವ ಆಟವೇ ಆನ್‌ಲೈನ್ ಗೇಮ್**

ತೆಲಂಗಾಣ ರಾಜ್ಯ 2017ರಲ್ಲಿ ಮೊದಲ ಬಾರಿಗೆ ಆನ್‌ಲೈನ್ ಕಾರ್ಡ್ ಆಟ ಸೇರಿದಂತೆ ಆನ್‌ಲೈನ್ ಗೇಮಿಂಗ್‌ಗೆ ನಿರ್ಬಂಧ ವಿಧಿಸಿತ್ತು. ನಾಗಾಲ್ಯಾಂಡ್ ರಾಜ್ಯವು ಕೌಶಲ ಆಧಾರಿತ ಆನ್‌ಲೈನ್ ಗೇಮ್‌ಗೆ ಅವಕಾಶ ಕಲ್ಪಿಸಿದೆ. ಆದರೆ, ಆನ್‌ಲೈನ್ ಬೆಟ್ಟಿಂಗ್ ನಿರ್ಬಂಧಿಸಿದೆ. ಛತ್ತೀಸಗಢ ಸೇರಿದಂತೆ ಕೆಲವು ರಾಜ್ಯಗಳು ಈ ಮಾದರಿಯನ್ನು ಅನುಸರಿಸಿವೆ. ಸಿಕ್ಕಿಂ, ಗೋವಾಗಳಲ್ಲಿ ಆನ್‌ಲೈನ್ ಬೆಟ್ಟಿಂಗ್‌ಗೆ ಅನುಮತಿ ಇದೆ.

ಆನ್‌ಲೈನ್ ಆಟಗಳನ್ನು ಕೌಶಲ ಆಧಾರಿತ ಆಟ (ಸ್ಕಿಲ್ ಬೇಸ್ಡ್) ಮತ್ತು ಅದೃಷ್ಟ ಆಧಾರಿತ ಆಟ (ಚಾನ್ಸ್ ಬೇಸ್ಡ್) ಎಂದು ವಿಭಾಗಿಸಲಾಗಿದೆ. ಜೂಜಾಟದ ಉದ್ದೇಶದಿಂದ ನಡೆಯುತ್ತಿರುವ ರಿಯಲ್ ಮನಿ ಗೇಮ್‌ಗಳಿಗೆ (ಆರ್‌ಎಂಜಿ) ಮತ್ತು ಹಣವನ್ನು ಪಣಕ್ಕಿಟ್ಟು ಆಡುವ ಆನ್‌ಲೈನ್ ಗೇಮ್ಸ್‌ಗೆ ಅವಕಾಶವಿಲ್ಲ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ 2023ರಲ್ಲಿ ಜಾರಿಗೆ ತಂದಿರುವ ಮಾಹಿತಿ ತಂತ್ರಜ್ಞಾನ (ಮಧ್ಯಸ್ಥಿಕೆ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮೀಡಿಯಾ ಸಂಹಿತೆ) ನಿಯಮಗಳು ಹೇಳುತ್ತವೆ. ಇದರ ನಿರ್ವಹಣೆಗೆ ಸರ್ಕಾರವು ಸ್ವಯಂ ನಿಯಂತ್ರಣಾ ಸಂಸ್ಥೆಗಳನ್ನು (ಎಸ್‌ಆರ್‌ಬಿ) ರೂಪಿಸಬೇಕೆಂದು, ಅದರಲ್ಲಿ ಉದ್ಯಮ ರಂಗದ ತಜ್ಞರು, ಮಕ್ಕಳ ತಜ್ಞರು, ಮಾನಸಿಕ ತಜ್ಞರು ಇರಬೇಕು ಎಂದು ಅವು ಹೇಳುತ್ತವೆ. ಎಸ್‌ಆರ್‌ಬಿಗಳು ಯಾವ ಆರ್‌ಎಂಜಿಗಳಿಗೆ ಅನುಮತಿ ನೀಡಬೇಕು ಎಂದು ಶಿಫಾರಸು ಮಾಡುವ ಅಧಿಕಾರ ಹೊಂದಿರುತ್ತವೆ.

ಇಷ್ಟಾದರೂ ಯಾವುದು ಕೌಶಲ ಆಧಾರಿತ ಆಟ, ಯಾವುದು ಅದೃಷ್ಟ ಆಧಾರಿತ ಆಟ, ಯಾವುದು ಜೂಜು ಎನ್ನುವ ಬಗ್ಗೆ ಸ್ಪಷ್ಟತೆ ಇಲ್ಲ. ಪ್ರಕರಣವೊಂದರಲ್ಲಿ, ಪೋಕರ್, ರಮ್ಮಿ ಇವು ಕೌಶಲ ಆಧಾರಿತ ಆಟಗಳು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆನ್‌ಲೈನ್ ಗೇಮಿಂಗ್ ಮತ್ತು ಕ್ರಿಪ್ಟೊ ಕರೆನ್ಸಿಯಂಥ ವಿಚಾರಗಳಲ್ಲಿ ಕೇಂದ್ರ ಸರ್ಕಾರವು ಕಠಿಣ ನಿಲುವು ತಳೆಯಲು ಸುಪ್ರೀಂ ಕೋರ್ಟ್ ಅಡ್ಡಿಯಾಗಿದೆ ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಇತ್ತೀಚೆಗೆ ಹೇಳಿದ್ದರು.

ಇದರ ನಡುವೆಯೇ ಆನ್‌ಲೈನ್ ರಿಯಲ್ ಮನಿ ಗೇಮಿಂಗ್ ಕಂಪನಿಗಳು, ಆಲ್ ಇಂಡಿಯಾ ಗೇಮಿಂಗ್ ಫೆಡರೇಷನ್ (ಎಐಜಿಎಫ್), ದ ಫೆಡರೇಷನ್ ಆಫ್ ಫ್ಯಾಂಟಸಿ ಸ್ಪೋರ್ಟ್ಸ್ (ಎಫ್‌ಐಎಫ್‌ಎಸ್) ಮತ್ತು ಇ–ಗೇಮಿಂಗ್ ಫೆಡರೇಷನ್ (ಇಜಿಎಫ್) ಜಂಟಿಯಾಗಿ ನೀತಿಸಂಹಿತೆಗೆ (ಸಿಒಇ) ಸಹಿ ಹಾಕಿವೆ. ಈ ಮೂಲಕ ರಕ್ಷಣಾತ್ಮಕ ಗೇಮಿಂಗ್ ಪದ್ಧತಿಗಳು, ಆಟ ಆಡುವವರ ಸುರಕ್ಷತೆ ಮತ್ತು ಅವರ ಇ ಕೆವೈಸಿ ದೃಢೀಕರಣ, ಹಣ ತೊಡಗಿಸುವ ಮಿತಿ ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳಲು ತೀರ್ಮಾನಿಸಿವೆ.

ಭಾರತವು ಆನ್‌ಲೈನ್ ಗೇಮಿಂಗ್‌ನಲ್ಲಿ ವಿಶ್ವದ ಪ್ರಮುಖ ದೇಶಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದು, ವಿದೇಶಿ ಗೇಮಿಂಗ್ ಕಂಪನಿಗಳಿಗೆ ನೆಚ್ಚಿನ ಸ್ಥಳವಾಗಿದೆ. ಇದರ ಬೆನ್ನಲ್ಲೇ ಇದರಿಂದ ಮನೆ–ಮಠ, ಕೊನೆಗೆ ಪ್ರಾಣವನ್ನೂ ಕಳೆದುಕೊಳ್ಳುತ್ತಿರುವವರ ಬಗ್ಗೆಯೂ ಕಳವಳ ವ್ಯಕ್ತವಾಗಿದೆ.

ದಿಢೀರ್ ಹಣ ಗಳಿಕೆಯ ಆಸೆಯಿಂದ ಯುವಕರು ಆನ್‌ಲೈನ್ ಗೇಮಿಂಗ್ ಬಲೆಗೆ ಬೀಳುತ್ತಿದ್ದು, ಕ್ಷಿಪ್ರಗತಿಯಲ್ಲಿ ಹಣ ಕಳೆದುಕೊಳ್ಳುತ್ತಿರುವುದು ಹೆಚ್ಚಾಗುತ್ತಿದೆ. ಈ ದಿಸೆಯಲ್ಲಿ ತಮಿಳುನಾಡು ಸರ್ಕಾರ ಆರ್‌ಎಂಜಿ ಆನ್‌ಲೈನ್ ಗೇಮ್ಸ್ ಅನ್ನು ನಿಷೇಧಿಸಿದ್ದು, ಕಠಿಣ ನಿಯಮಗಳನ್ನು ಪ್ರಕಟಿಸಿದೆ. ಆನ್‌ಲೈನ್ ಬೆಟ್ಟಿಂಗ್ ಮತ್ತು ಗೇಮಿಂಗ್ ಆ್ಯಪ್‌ಗಳ ಬಗ್ಗೆ ತನಿಖೆಗಾಗಿ ವಿಶೇಷ ತನಿಖಾ ದಳ (ಎಸ್‌ಐಟಿ) ರಚನೆಗೆ ತೆಲಂಗಾಣ ಸರ್ಕಾರ ಮುಂದಾಗಿದೆ. ಆನ್‌ಲೈನ್ ಗೇಮಿಂಗ್ ವಿರುದ್ಧ ಇನ್ನಷ್ಟು ಕಠಿಣ ಕ್ರಮ ಜರುಗಿಸಬೇಕು ಎನ್ನುವ ಒತ್ತಾಯ ಕರ್ನಾಟಕವೂ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಕೇಳಿಬರುತ್ತಿದೆ.

ಆಧಾರ: ಪಿಟಿಐ, ಲುಮಿಕೈ ವರದಿ, ಮಾಹಿತಿ ತಂತ್ರಜ್ಞಾನ ಸಚಿವಾಲಯದ ನಿಯಮಗಳು, ಪಿಡಬ್ಲ್ಯುಸಿ ಇಂಡಿಯಾ

ಕ್ರಮ ಏಕಿಲ್ಲ?

ಆನ್‌ಲೈನ್ ಆಟಗಳ ಮೇಲೆ ಕೇಂದ್ರ ಸರ್ಕಾರವು ಶೇ 28ರಷ್ಟು ಜಿಎಸ್‌ಟಿ ವಿಧಿಸುತ್ತಿದೆ. ಜತೆಗೆ, ಅದರಿಂದ ಬರುವ ಆದಾಯದ ಮೇಲೆ ಶೇ 30ರಷ್ಟು ತೆರಿಗೆ ವಿಧಿಸುತ್ತಿದೆ. ಆನ್‌ಲೈನ್ ಗೇಮಿಂಗ್‌ನಿಂದಾಗಿ ಸರ್ಕಾರಗಳಿಗೆ (ಕೇಂದ್ರ ಮತ್ತು ರಾಜ್ಯ) ವಾರ್ಷಿಕವಾಗಿ ದೊಡ್ಡ ಮೊತ್ತದ ಆದಾಯ ಬರುತ್ತದೆ. ಈ ಕಾರಣಕ್ಕಾಗಿಯೇ ಕಠಿಣ ನಿಲುವು ತಳೆಯುತ್ತಿಲ್ಲ ಎನ್ನುವ ಆರೋಪವೂ ಇದೆ.

ರಾಜ್ಯದಲ್ಲೂ ನಿಷೇಧಕ್ಕೆ ಪ್ರಯತ್ನ

ಆನ್‌ಲೈನ್ ಬೆಟ್ಟಿಂಗ್, ಗೇಮಿಂಗ್‌ಗಳ ನಿಯಂತ್ರಣಕ್ಕೆ ಕರ್ನಾಟಕದಲ್ಲೂ ಸರ್ಕಾರ ಪ್ರಯತ್ನಿಸಿದೆ.

ಹಣವನ್ನು ಪಣವಾಗಿರಿಸಿ ಆನ್‌ಲೈನ್ ಮೂಲಕ ಆಡುವ ಎಲ್ಲ ಬಗೆಯ ಜೂಜುಗಳ ವಿರುದ್ಧ ಕ್ರಮ ಜರುಗಿಸಲು ಪೊಲೀಸರಿಗೆ ಅಧಿಕಾರ ನೀಡುವ ನಿಟ್ಟಿನಲ್ಲಿ ಕರ್ನಾಟಕ ಪೊಲೀಸ್ ಕಾಯ್ದೆಗೆ (1963) ತಿದ್ದುಪಡಿ ತಂದು 2021ರ ಅಕ್ಟೋಬರ್ 5ರಂದು ಹೊಸ ಕಾನೂನು ಜಾರಿಗೆ ತರಲಾಗಿತ್ತು.

ತಿದ್ದುಪಡಿ ರದ್ದು ಕೋರಿ ‘ಆಲ್ ಇಂಡಿಯಾ ಗೇಮಿಂಗ್ ಫೆಡರೇಷನ್ ಆಫ್ ಇಂಡಿಯಾ’ ಹಾಗೂ ‘ಗ್ಯಾಲಕ್ಟಸ್ ಫನ್‌ವೇರ್ ಟೆಕ್ನಾಲಜೀಸ್’ ಸೇರಿದಂತೆ ಹಲವು ಗೇಮಿಂಗ್ ಕಂಪನಿಗಳು ಹೈಕೋರ್ಟ್ ಮೆಟ್ಟಿಲೇರಿದ್ದವು. ಕಾಯ್ದೆಗೆ ತರಲಾಗಿದ್ದ ತಿದ್ದುಪಡಿಯನ್ನು ಹೈಕೋರ್ಟ್ 2022ರ ಫೆಬ್ರುವರಿಯಲ್ಲಿ ರದ್ದುಗೊಳಿಸಿತ್ತು.

ಹೈಕೋರ್ಟ್ ತೀರ್ಪಿನ ವಿರುದ್ಧ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಅದಿನ್ನೂ ಇತ್ಯರ್ಥಕ್ಕೆ ಬಾಕಿ ಇದೆ.

2024ರ ಫೆಬ್ರುವರಿಯಲ್ಲಿ ಆನ್‌ಲೈನ್ ಗೇಮಿಂಗ್, ಬೆಟ್ಟಿಂಗ್ ಬಗ್ಗೆ ಸದನದಲ್ಲಿ ಚರ್ಚೆಯಾಗಿತ್ತು. ಈ ಸಂದರ್ಭದಲ್ಲಿ ಇವುಗಳ ನಿಷೇಧಕ್ಕೆ ಹೊಸ ಕಾನೂನು ತರಲು ಸರ್ಕಾರ ಯೋಜಿಸಿದೆ ಎಂದು ಗೃಹ ಸಚಿವ ಪರಮೇಶ್ವರ ಮತ್ತು ಐಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದರು. ಇತ್ತೀಚೆಗೆ ನಡೆದ ಹೂಡಿಕೆದಾರರ ಸಮಾವೇಶದ ಸಂದರ್ಭದಲ್ಲೂ ಪ್ರಿಯಾಂಕ್ ಖರ್ಗೆ ಅವರು ಹೊಸ ಕಾನೂನು ಜಾರಿಗೆ ತರುವ ಬಗ್ಗೆ ಮಾತನಾಡಿದ್ದಾರೆ. ಛತ್ತೀಸಗಢದ ಮಾದರಿಯಲ್ಲಿ ಕೌಶಲ ಆಧಾರಿತ ಗೇಮಿಂಗ್‌ಗೆ ಅವಕಾಶ ಕೊಟ್ಟು, ಅದೃಷ್ಟ ಆಧಾರಿತ ಗೇಮಿಂಗ್‌ಗೆ ನಿರ್ಬಂಧ ಹೇರುವ ಬಗ್ಗೆ ಸರ್ಕಾರ ಚಿಂತನೆ ನಡೆಸುತ್ತಿದೆ.

ಭಾರತದ ಆನ್‌ಲೈನ್ ಗೇಮಿಂಗ್ ಮಾರುಕಟ್ಟೆ

₹32,000 ಕೋಟಿ	2024ರಲ್ಲಿ ಭಾರತದ ಆನ್‌ಲೈನ್ ಗೇಮಿಂಗ್ ಮಾರುಕಟ್ಟೆ ಗಾತ್ರ
85.7%	ಆನ್‌ಲೈನ್ ಗೇಮಿಂಗ್ ಮಾರುಕಟ್ಟೆಗೆ ಆರ್‌ಎಂಜಿ ನೀಡುತ್ತಿರುವ ಕೊಡುಗೆ ಪ್ರಮಾಣ
₹27,000 ಕೋಟಿ	2024ರಲ್ಲಿ ಆನ್‌ಲೈನ್ ಗೇಮಿಂಗ್ ಮಾರುಕಟ್ಟೆಯಲ್ಲಿ ಆರ್‌ಎಂಜಿ ಪಾಲು
₹78,000 ಕೋಟಿ	2029ರ ವೇಳೆಗೆ ಭಾರತದ ಆನ್‌ಲೈನ್ ಗೇಮಿಂಗ್ ಮಾರುಕಟ್ಟೆ ಗಾತ್ರ ತಲುಪಲಿರುವ ಅಂದಾಜು
₹25,700 ಕೋಟಿ	2024ರಲ್ಲಿ ಆನ್‌ಲೈನ್ ಗೇಮಿಂಗ್ ಕ್ಷೇತ್ರಕ್ಕೆ ಹರಿದು ಬಂದ ವಿದೇಶಿ ನೇರ ಹೂಡಿಕೆ
59.1 ಕೋಟಿ	ಭಾರತದಲ್ಲಿ ಆನ್‌ಲೈನ್‌ನಲ್ಲಿ ಆಟವಾಡುವವರ ಸಂಖ್ಯೆ
56%	ಆನ್‌ಲೈನ್ ಗೇಮ್ ಆಡುತ್ತಿರುವ ಪುರುಷರ ಪ್ರಮಾಣ
44%	ಆನ್‌ಲೈನ್ ಗೇಮ್ ಆಡುತ್ತಿರುವ ಮಹಿಳೆಯರ ಪ್ರಮಾಣ
2.3 ಕೋಟಿ	ಆನ್‌ಲೈನ್‌ನಲ್ಲಿ ಆಟವಾಡುವವರ ಪಟ್ಟಿಗೆ 2024ರಲ್ಲಿ ಸೇರ್ಪಡೆಗೊಂಡವರು
1.12 ಕೋಟಿ	ಕಳೆದ ವರ್ಷ ಜನರು ಮಾಡಿರುವ ಮೊಬೈಲ್ ಗೇಮ್ ಆ್ಯಪ್ ಡೌನ್‌ಲೋಡ್‌ಗಳ ಸಂಖ್ಯೆ
1,900	ದೇಶದಲ್ಲಿ ಸಕ್ರಿಯವಾಗಿರುವ ಗೇಮಿಂಗ್ ಕಂಪನಿಗಳು

ವೇಗವಾಗಿ ಬೆಳೆಯುತ್ತಿರುವ ಮಾರುಕಟ್ಟೆ

ಭಾರತದ ಆನ್‌ಲೈನ್ ಗೇಮಿಂಗ್ ಮಾರುಕಟ್ಟೆ ವರ್ಷದಿಂದ ವರ್ಷಕ್ಕೆ ಅತ್ಯಂತ ವೇಗವಾಗಿ ಬೆಳೆಯುತ್ತಿದೆ. 2024ರಲ್ಲಿ ಭಾರತದ ಆನ್‌ಲೈನ್ ಗೇಮಿಂಗ್ ಮಾರುಕಟ್ಟೆಯ ಮೌಲ್ಯ ₹32 ಸಾವಿರ ಕೋಟಿಗೆ ತಲುಪಿದೆ ಎಂದು ಎರಡು ಪ್ರತ್ಯೇಕ ಅಧ್ಯಯನ ವರದಿಗಳು ಹೇಳಿವೆ. ಜಿಎಸ್‌ಟಿ ಹೊರೆಯ ನಡುವೆಯೂ ಆನ್‌ಲೈನ್ ಗೇಮಿಂಗ್‌ನ ವಾರ್ಷಿಕ ಸಂಯುಕ್ತ ಬೆಳವಣಿಗೆ ದರ ಶೇ 23ರಷ್ಟಿದೆ.


ಗೇಮಿಂಗ್ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ಲುಮಿಕೈ ಸಂಸ್ಥೆಯು ಗೂಗಲ್‌ನ ಸಹಭಾಗಿತ್ವದಲ್ಲಿ ಸಿದ್ಧಪಡಿಸಿದ ವರದಿ ಪ್ರಕಾರ, 2024ರಲ್ಲಿ ಭಾರತದಲ್ಲಿ ಆನ್‌ಲೈನ್ ಗೇಮಿಂಗ್ ಮಾರುಕಟ್ಟೆ ಮೌಲ್ಯ ₹32,512 ಕೋಟಿ (380 ಕೋಟಿ ಡಾಲರ್). ರಿಯಲ್ ಮನಿ ಗೇಮಿಂಗ್ ವೇದಿಕೆಯಾದ ವಿನ್‌ಝೊ ಗೇಮ್ಸ್ ಮತ್ತು ಐಎಐಸಿ ಜಂಟಿ ವರದಿಯ ಪ್ರಕಾರ ಇದು ₹31,650 ಕೋಟಿ (370 ಕೋಟಿ ಡಾಲರ್). ಆನ್‌ಲೈನ್ ಗೇಮಿಂಗ್ ಮಾರುಕಟ್ಟೆಗೆ ರಿಯಲ್ ಮನಿ ಗೇಮಿಂಗ್ (ಆರ್‌ಎಂಜಿ) ಕೊಡುಗೆ ಶೇ 86ರಷ್ಟಿದೆ. 2029ರ ವೇಳೆಗೆ ಆನ್‌ಲೈನ್ ಗೇಮಿಂಗ್ ಮಾರುಕಟ್ಟೆ ಮೌಲ್ಯ ₹78 ಸಾವಿರ ಕೋಟಿಗೆ ತಲುಪಲಿದೆ ಎಂದು ಎರಡೂ ವರದಿಗಳು ಹೇಳಿವೆ. ಅಂದರೆ ವಾರ್ಷಿಕವಾಗಿ ಶೇ 20ರಷ್ಟು ಬೆಳವಣಿಗೆ ಹೊಂದಲಿದೆ. ದೇಶದಲ್ಲಿ 59 ಕೋಟಿಯಷ್ಟು ಮಂದಿ ಆನ್‌ಲೈನ್ ಗೇಮಿಂಗ್‌ನಲ್ಲಿ ತೊಡಗಿದ್ದಾರೆ.

ಇದು ಅಧಿಕೃತ ವಹಿವಾಟಿನ ಲೆಕ್ಕಾಚಾರ. ಆದರೆ, ಹಲವು ಗೇಮಿಂಗ್ ಕಂಪನಿಗಳು, ಗೇಮ್‌ಗಳೂ ಅನಧಿಕೃತವಾಗಿ ಕಾರ್ಯಾಚರಿಸುತ್ತಿವೆ. ಆನ್‌ಲೈನ್ ಗೇಮಿಂಗ್, ಬೆಟ್ಟಿಂಗ್‌ನಲ್ಲಿ ಕಪ್ಪು ಹಣದ ಚಲಾವಣೆಯೂ ದೊಡ್ಡ ಮಟ್ಟದಲ್ಲಿ ಆಗುತ್ತಿದೆ ಎಂದೂ ವಿಶ್ಲೇಷಿಸಲಾಗುತ್ತಿದೆ.

> **ಆರ್‌ಎಂಜಿ**
> ಬಳಕೆದಾರರೊಬ್ಬರು ನಗದು ಅಥವಾ ಇತರೆ ರೂಪದಲ್ಲಿ ಹಣವನ್ನು ಠೇವಣಿ ಇಟ್ಟು ಆ ಮೊತ್ತದಿಂದ ಲಾಭ ಗಳಿಸುವ ಉದ್ದೇಶದಿಂದ ಆನ್‌ಲೈನ್‌ನಲ್ಲಿ ಆಡುವ ಆಟ (ಇಲ್ಲಿ ಲಾಭ ಎಂದರೆ ಬಹುಮಾನ, ನಗದು ಅಥವಾ ಬೇರೆ ಯಾವುದಾದರು ವಸ್ತು)

ಸಿನಿ ಬಿಟ್ಸ್

‘ಸೆಟ್ ಆಗಲ್ಲ..’ ಎಂದ ಧ್ರುವ ಸರ್ಜಾ


ರೀಷ್ಮಾ, ಧ್ರುವ ಸರ್ಜಾ

2025ರ ನಿರೀಕ್ಷಿತ ಚಿತ್ರಗಳಲ್ಲಿ ಒಂದಾದ ಪ್ರೇಮ್ ನಿರ್ದೇಶನದ, ಧ್ರುವ ಸರ್ಜಾ ನಟನೆಯ ‘ಕೆಡಿ’ ಬಿಡುಗಡೆಗೆ ಸಜ್ಜಾಗುತ್ತಿದೆ. ‘ಶಿವ ಶಿವ..’ ಬಳಿಕ ಚಿತ್ರದ ಎರಡನೇ ಹಾಡು ‘ಸೆಟ್ ಆಗಲ್ಲ..’ ಇತ್ತೀಚೆಗೆ ಬಿಡುಗಡೆಯಾಗಿದ್ದು, ಈ ಮೂಲಕ ರೀಲ್ಸ್ ಮಾಡುವವರಿಗೆ ಹೊಸ ಅವಕಾಶವೊಂದನ್ನು ಚಿತ್ರತಂಡ ನೀಡಿದೆ.

ಕೆ.ವಿ.ಎನ್. ಪ್ರೊಡಕ್ಷನ್ಸ್ ನಿರ್ಮಾಣದ ಈ ಚಿತ್ರ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಬಿಡುಗಡೆಯಾಗಲಿದೆ. ‘ಸೆಟ್ ಆಗಲ್ಲ..’ ಹಾಡಿಗೆ ಪ್ರೇಮ್ ಅವರೇ ಸಾಹಿತ್ಯ ಬರೆದಿದ್ದು, ಮಿಖಾ ಸಿಂಗ್ ದನಿಯಾಗಿದ್ದಾರೆ. ‘ಈ ಹಾಡಿನ ಶೂಟಿಂಗ್ ಇನ್ನಷ್ಟೇ ಆಗಬೇಕಿದೆ. ಈ ಹಾಡಿಗೆ ಕೇಳುಗರೇ ಕೊರಿಯೊಗ್ರಾಫರ್. ಹಾಡಿಗೆ ಸೂಕ್ತವಾದ ಒಂದು ಹುಕ್‌ಸ್ಟೆಪ್ ಅನ್ನು ಪ್ರೇಕ್ಷಕರೇ ಹಾಕಿ ಅದನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಾಕಿ, ಚಿತ್ರತಂಡಕ್ಕೆ ಕಳುಹಿಸಿ. ಅದರಲ್ಲಿ ಅತ್ಯುತ್ತಮವಾದುದನ್ನು ಆಯ್ಕೆ ಮಾಡುತ್ತೇವೆ’ ಎಂದಿದ್ದಾರೆ ಪ್ರೇಮ್.

‘ಈ ಪ್ರಾಜೆಕ್ಟ್ ಅನ್ನು ಒಂದು ತಪಸ್ಸಿನ ರೀತಿ ಮಾಡಿದ್ದೇವೆ. ಭಾರತದ, ವಿದೇಶದ ನುರಿತ ತಂತ್ರಜ್ಞರ ಜೊತೆ ಕೆಲಸ ಮಾಡಿ ಹಾಡುಗಳನ್ನು ತಂದಿದ್ದೇವೆ. ಒಂದೊಂದು ರೆಕಾರ್ಡಿಂಗ್ ಸೆಷನ್‌ಗೂ ಲಕ್ಷಾಂತರ ರೂಪಾಯಿ ಖರ್ಚಾಗಿದೆ’ ಎಂದಿದ್ದಾರೆ ಅರ್ಜುನ್ ಜನ್ಯ.

ಶಶಾಂಕ್–ಡಾರ್ಲಿಂಗ್ ಕೃಷ್ಣ ಹೊಸ ಚಿತ್ರ ಬ್ರ್ಯಾಟ್



ಮಂಜುನಾಥ್ ಕಂದಕೂರ್, ಶಶಾಂಕ್, ಮನಿಶಾ, ಡಾರ್ಲಿಂಗ್ ಕೃಷ್ಣ

‘ಕೌಸಲ್ಯಾ ಸುಪ್ರಜಾ ರಾಮ’ ಚಿತ್ರದ ಬಳಿಕ ನಿರ್ದೇಶಕ ಶಶಾಂಕ್ ಹಾಗೂ ನಟ ಡಾರ್ಲಿಂಗ್ ಕೃಷ್ಣ ‘ಬ್ರ್ಯಾಟ್’ ಎಂಬ ಪ್ಯಾನ್ ಇಂಡಿಯಾ ಚಿತ್ರದ ಮೂಲಕ ಮತ್ತೆ ಜೊತೆಯಾಗುತ್ತಿದ್ದಾರೆ.


‘ಫಸ್ಟ್ ರ್‍ಯಾಂಕ್ ರಾಜು’ ಸಿನಿಮಾ ನಿರ್ಮಾಣ ಮಾಡಿದ್ದ ಮಂಜುನಾಥ್ ಕಂದಕೂರ್ ಅವರು ನಿರ್ಮಾಣ ಮಾಡುತ್ತಿರುವ ಈ ಸಿನಿಮಾದ ಶೀರ್ಷಿಕೆ ಅನಾವರಣ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು.

‘ಶಶಾಂಕ್ ಅವರು ಈವರೆಗೂ ನಿರ್ದೇಶಿಸದ ಹೊಸ ವಿಷಯ ಹಾಗೂ ನಾನು ಕೂಡ ಈವರೆಗೂ ನಿಭಾಯಿಸಿದ ಹೊಸ ಪಾತ್ರ ಈ ಚಿತ್ರದಲ್ಲಿದೆ. ಈಗಾಗಲೇ ಬಹುತೇಕ ಚಿತ್ರೀಕರಣ ಮುಕ್ತಾಯವಾಗಿದೆ. ಚಿತ್ರದ ನಾಯಕಿಯಾಗಿ ಮನಿಶಾ ನಟಿಸಿದ್ದಾರೆ’ ಎಂದರು ಡಾರ್ಲಿಂಗ್ ಕೃಷ್ಣ.

‘ಅತಿ ಹೆಚ್ಚು ತರಲೆ ಮಾಡುವ ಹುಡುಗರನ್ನು ‘ಬ್ರ್ಯಾಟ್’ ಎಂದು ಕರೆಯುತ್ತಾರೆ. ಕನ್ನಡದಲ್ಲಿ ಶೀರ್ಷಿಕೆ ಇಡೋಣ ಎಂದುಕೊಂಡು ನೋಡಿದಾಗ ಈಗಾಗಲೇ ಬಂದಿರುವ ಚಿತ್ರಗಳ ಟೈಟಲ್‌ಗಳೇ ದೊರೆತವು. ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ಈ ಸಿನಿಮಾ ಬರುತ್ತಿರುವ ಕಾರಣ ‘ಬ್ರ್ಯಾಟ್’ ಶೀರ್ಷಿಕೆಯೇ ಸರಿ ಎನಿಸಿತು. ಇದು ಅಪ್ಪ-ಮಗನ ಸಂಘರ್ಷ. ಅಪ್ಪನಿಗೆ ಮಗನೇ ‘ಬ್ರ್ಯಾಟ್’. ಅಪ್ಪನ ಪಾತ್ರದಲ್ಲಿ ಅಚ್ಯುತ್ ಕುಮಾರ್ ಅಭಿನಯಿಸಿದ್ದಾರೆ. ರಮೇಶ್ ಇಂದಿರಾ, ಡ್ರ್ಯಾಗನ್ ಮಂಜು ಮುಂತಾದವರು ತಾರಾಬಳಗದಲ್ಲಿದ್ದಾರೆ’ ಎಂದು ಮಾಹಿತಿ ನೀಡಿದರು ಶಶಾಂಕ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ನುಡಿ ಬೆಳಗು

ಸಂಗ್ರಹ ಸಂತೃಪ್ತಿಗೆ ಅನುಗುಣವಾಗಿರಬೇಕು



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

163

ರಾಮ ಸೀತೆಯನ್ನು ಮದುವೆ ಮಾಡಿಕೊಂಡು ಅಯೋಧ್ಯೆಗೆ ಬಂದ. ಆಗ ದಶರಥ ರಾಮನಿಗೆ ‘ನೀನು ಕಾಡಿಗೆ ಹೋಗು’ ಎಂದ. ಆಗ ರಾಮ ಸೀತೆಗೆ ‘ನೀನು ಕಾಡಿಗೆ ಬರುವುದು ಬೇಡ. ಇಲ್ಲಿಯೇ ಆರಾಂ ಇರು’ ಎಂದ. ಆದರೆ ಅದಕ್ಕೆ ಸೀತೆ ಒಪ್ಪಿಕೊಳ್ಳಲಿಲ್ಲ. ‘ರಾಮನಿಲ್ಲದ ಅಯೋಧ್ಯೆ ಕಾಡಿಗೆ ಸಮ. ರಾಮನಿರುವ ಕಾಡು ಕೂಡಾ ಅಯೋಧ್ಯೆಗೆ ಸಮ. ಅದಕ್ಕೆ ನಾನು ನಿನ್ನ ಜೊತೆ ಬರ್ತೀನಿ’ ಎಂದಳು. ಗಂಡ ಕಷ್ಟದಲ್ಲಿ ಇರುವಾಗ ಅವನ ಜೊತೆಗೆ ಇರಬೇಕು ಎನ್ನುವುದು ಕೇವಲ ಬಯಕೆಯಲ್ಲ. ಅದು ವಿವೇಕ. ಮುಂದೆ ಕಾಡಿನಲ್ಲಿ ಒಂದು ಬಂಗಾರದ ಜಿಂಕೆ ಕಂಡಾಗ ಅದು ಬೇಕು ಎಂದು ಸೀತೆ ಹಟ ಹಿಡಿದಳು. ಅಯೋಧ್ಯೆಯಲ್ಲಿಯೇ ಇದ್ದಿದ್ದರೆ ಆಕೆಗೆ ಬಂಗಾರದ ಜಿಂಕೆಯನ್ನೇ ಕೊಡಬಹುದಿತ್ತು. ಆದರೆ ಸೀತೆ ಕಾಡಿನಲ್ಲಿ ಬಂಗಾರದ ಬಣ್ಣದ ಜಿಂಕೆಯನ್ನು ಬಯಸಿದಳು. ಇದರಿಂದ ಆಕೆ ಕಷ್ಟಕ್ಕೆ ಸಿಲುಕಿದಳು. ಅಯೋಧ್ಯೆಯಲ್ಲಿ ಇರುವಾಗ ಬೇಕು ಅನ್ನುವುದು ಸತ್ತಿತ್ತು. ವಿವೇಕ ಎಚ್ಚರವಾಗಿತ್ತು. ಕಾಡಿನಲ್ಲಿ ವಿವೇಕ ಸತ್ತಿತ್ತು. ಬೇಕು ಎನ್ನುವುದು ಎಚ್ಚರವಾಗಿತ್ತು. ಯಾವಾಗ ವಿವೇಕ ಎನ್ನುವುದು ಮರೆಯಾಗಿ ಬೇಕು ಎನ್ನುವುದು ಜಾಗೃತವಾಗುತ್ತದಲ್ಲ ಆಗ ನಾವು ಕಷ್ಟಕ್ಕೆ ಸಿಲುಕುತ್ತೇವೆ. ಬೇಕು ಎನ್ನುವುದು ವಿವೇಕಯುಕ್ತವಾಗಿರಬೇಕು ಎನ್ನುವುದು ಬಹಳ ಮುಖ್ಯ. ಇದನ್ನು ಮನುಷ್ಯ ತಿಳಿದುಕೊಳ್ಳಬೇಕು.

ರತನ್ ಟಾಟಾ ಬಹುದೊಡ್ಡ ಶ್ರೀಮಂತರು. ಅವರು ತಮ್ಮ ಆಸ್ತಿಯನ್ನು ವಿಲ್ ಮಾಡಿಟ್ಟಿದ್ದರು. ಅವರ ಮನೆಯ ನಾಯಿಗೂ ಆಸ್ತಿ ಇಟ್ಟಿದ್ದಾರೆ. ಒಂದು ಸಲ ಕ್ರಿಕೆಟ್ ಮಾಂತ್ರಿಕ ಸಚಿನ್ ತೆಂಡೂಲ್ಕರ್ ಅವರು ರತನ್ ಟಾಟಾ ಅವರನ್ನು ಭೇಟಿಯಾಗಿದ್ದಾಗ ‘ಟಾಟಾ ಅವರೇ ನೀವು ಇಷ್ಟೊಂದು ಆಸ್ತಿ ಮಾಡಿದ್ದೀರಲ್ಲ. ಅದು ಮುಂದೆ ಏನಾಗುತ್ತದೆ’ ಎಂದು ಕೇಳಿದರಂತೆ. ಅದಕ್ಕೆ ರತನ್ ಟಾಟಾ ‘ಭಾರತದ ಆರ್ಥಿಕತೆಗೆ ಅನುಕೂಲವಾಗುವುದಾದರೆ ನನ್ನ ಎಲ್ಲ ಆಸ್ತಿಯನ್ನೂ ದೇಶಕ್ಕೆ ಬರೆದುಕೊಡುತ್ತೇನೆ’ ಎಂದು ಉತ್ತರಿಸಿದರಂತೆ. ಇದು ಟಾಟಾ ಹೇಳಿದ ಪಾಠ. ಟಾಟಾ ನಮಗೆ ಕಲಿಸಿದ ಪಾಠ ಏನು ಅಂದರೆ, ನಾವು ಗಳಿಸಿದ ಸಂಪತ್ತನ್ನು ಸಮಾಜಕ್ಕೂ ಬಳಸಬೇಕು ಅನ್ನೋದು. ಸಂಗ್ರಹ ಮಾಡೋದಲ್ಲ. ಇದ್ದಿದ್ದರಲ್ಲಿ ಸಂತೋಷದಿಂದ ಬದುಕೋದನ್ನು ಕಲಿಯಬೇಕು ಮನುಷ್ಯ.

ದೇವರು ನಮಗೆ ಏನು ಕೊಟ್ಟಿದ್ದಾನೋ ಅದರಲ್ಲಿ ಸಂತೋಷ ಪಡೋದನ್ನು ಕಲಿಯಬೇಕು. ಸಂಗ್ರಹ ಮಾಡಿ ಬದುಕೋದಲ್ಲ. ಸಂತೋಷದಿಂದ ಬದುಕಬೇಕು. ಎಷ್ಟು ಗಳಿಸಿದರೂ ಅದರಲ್ಲಿ ಉಳಿಯುವುದು ಎಷ್ಟು ಎಂದು ಆಲೋಚಿಸಬೇಕು. ಜೀವ ಹೋದಮೇಲೆ ದೇಹ ಮಣ್ಣಿನ ಪಾಲಾಗುತ್ತದೆ. ತುತ್ತು ಕಾಗೆ ಪಾಲು. ಅಸ್ಥಿ ಗಂಗೆಯ ಪಾಲು. ಜೀವ ಪರಲೋಕದ ಪಾಲು. ನಾವು ಗಳಿಸಿದ ಆಸ್ತಿ ಮುಂದೆ ಕುಳಿತ ಅಳುವವರ ಪಾಲು. ನಮ್ಮ ಹಿಂದೆ ಏನೂ ಬರೋದಿಲ್ಲ. ನಮ್ಮ ಜೊತೆ ಬರುವುದು ನಾವು ಜೀವನದಲ್ಲಿ ಗಳಿಸಿದ ಒಳ್ಳೆಯ ಕಾರ್ಯಗಳ ಫಲ ಮಾತ್ರ. ನಾವು ಗಳಿಸಿದ ಆಸ್ತಿಗೆ ಮಕ್ಕಳು ಪಾಲು ಕೇಳುತ್ತಾರೆಯೇ ವಿನಾ ನಮ್ಮ ಪಾಪ ಪುಣ್ಯಕ್ಕೆ ಯಾರೂ ಪಾಲು ಕೇಳುವುದಿಲ್ಲ. ಅದಕ್ಕೆ ನಮಗೆ ಗೊತ್ತಿರಬೇಕು ನಾವು ಏನು ಗಳಿಸುತ್ತೇವೆ, ಸಂಗ್ರಹಿಸುತ್ತಿದ್ದೇವೆ ಅದು ಯಾವುದೂ ಅನ್ಯಾಯದಿಂದ ಬಂದಿದ್ದು ಆಗಿರಬಾರದು. ಸಂಗ್ರಹ ಬೇಡ. ಸಂತೃಪ್ತಿ ಬೇಕು. ಸಂಗ್ರಹ ಸಂತೃಪ್ತಿಗೆ ಅನುಗುಣವಾಗಿರಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಮಂಗಳವಾರ ಏಪ್ರಿಲ್ 1, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುದ್ಧ ಚತುರ್ಥಿ ಗಂ. 26-33 **ನಕ್ಷತ್ರ:** ಭರಣಿ ಗಂ. 11-07 **ಯೋಗ:** ವಿಷ್ಕಂಭ ಗಂ. 09-48 **ಕರಣ:** ವಣಿಜ ಗಂ. 16-05, ಮೀನ ಮಾಸದ 18 ನೇ ದಿನ, **ಮಳೆನಕ್ಷತ್ರ:** ರೇವತಿ 1.
ರಾಹುಕಾಲ: ಮಧ್ಯಾಹ್ನ 03-00 – 04-30
ಸೂರ್ಯೋದಯ: 06-30 **ಸೂರ್ಯಾಸ್ತ:** 06-39
ಮುಸ್ಲಿಂ ದಿನಾಂಕ: 02 ಶವ್ವಾಲ್
ಅದೃಷ್ಟ ಸಂಖ್ಯೆ: 8, 3

ಮೇಷ: ಲೇವಾದೇವಿ ವ್ಯವಹಾರಗಳಿಂದ ಗಳಿಸಿದ ಹಣ ಒಳ್ಳೆಯ ಕಾರ್ಯಗಳಿಗೆ ವಿನಿಯೋಗವಾಗುವುದು. ರಂಗ ಕಲಾವಿದರಿಗೆ ಉತ್ತಮ ಅವಕಾಶಗಳು ಒದಗಿಬರಲಿವೆ. ಆಧ್ಯಾತ್ಮಿಕ ಬೆಳವಣಿಗೆಯಲ್ಲಿ ಹೊಸ ಮಜಲನ್ನು ತಲುಪುವಿರಿ.

ವೃಷಭ: ಕೆಲಸಗಳು ವಿಳಂಬವಾಗಿಯಾದರೂ ಪೂರ್ಣಗೊಳ್ಳಲಿವೆ. ಕಳೆದುಹೋಗಿದ್ದ ವಸ್ತುಗಳು ಆಶ್ಚರ್ಯಕರ ರೀತಿಯಲ್ಲಿ ಮರಳಿ ಕೈ ಸೇರಲಿವೆ. ಸಾಮಾಜಿಕ ಕಾರ್ಯಗಳಿಂದ ಖ್ಯಾತಿ ಗಳಿಸುವಿರಿ.

ಮಿಥುನ: ಇತಿಹಾಸದ ಅನ್ವೇಷಣೆಯ ಹಾದಿಯಲ್ಲಿ ನೀವು ಮತ್ತಷ್ಟು ದೂರ ಸಾಗಿದಲ್ಲಿ, ಯಶಸ್ಸು ಸಿಗಲಿದೆ. ಕೆಲಸ–ಕಾರ್ಯಗಳಲ್ಲಿ ಗಡಿಬಿಡಿ ಮಾಡಿಕೊಳ್ಳದೆ, ಸಾವಧಾನದಿಂದ ಮುಂದುವರೆಯಿರಿ.

ಕರ್ಕಾಟಕ: ಪ್ರಭಾವಿ ವ್ಯಕ್ತಿಗಳ ಮೋಸದ ಜಾಲವನ್ನು ಬಯಲು ಮಾಡಿದ್ದಕ್ಕಾಗಿ ಬೆದರಿಕೆಗಳನ್ನು ಎದುರಿಸಬೇಕಾಗುವುದು. ಕುಟುಂಬದವರು, ಅದರಲ್ಲೂ ಸಂಗಾತಿಯು ನಿರೀಕ್ಷೆಗೂ ಮೀರಿ ನಿಮ್ಮನ್ನು ಬೆಂಬಲಿಸುವರು.

ಸಿಂಹ: ಹೊಸತನ್ನು ಕಲಿಯುವ ಉತ್ಸಾಹ ನಿಮ್ಮಲ್ಲಿದ್ದು, ಅದರ ಜೊತೆಗೆ ಬದುಕಿನ ಅನುಭವಗಳು ಯಶಸ್ಸಿನತ್ತ ಕರೆದೊಯ್ಯಬಹುದು. ಗಣ್ಯರ ಭೇಟಿಯಿಂದ ಬದುಕಿನ ಮುಂದಿನ ದಾರಿ ಬದಲಾಗುವ ಸಾಧ್ಯತೆ ಇದೆ.

ಕನ್ಯಾ: ವಿದ್ಯಾರ್ಥಿಗಳು ಶಿಕ್ಷಣ ಮುಂದುವರಿಸಲು ಸರ್ಕಾರ ಅಥವಾ ಬಂಧುಗಳಿಂದ ನೆರವು ದೊರಕುವುದು. ರಾಜಕೀಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಅವಕಾಶಗಳು ಬರಲಿವೆ.

ತುಲಾ: ಅತಿಯಾದ ಮಾತುಗಳಿಂದ ಸಮಾಜದಲ್ಲಿ ಅವಮಾನಕ್ಕೆ ಒಳಗಾಗುವ ಪರಿಸ್ಥಿತಿ ಎದುರಾಗಬಹುದು ಅಥವಾ ಕುಟುಂಬ ವರ್ಗದಲ್ಲಿ ಭಿನ್ನಾಭಿಪ್ರಾಯ ಕಂಡುಬರಬಹುದು. ಶೀತಬಾಧೆ ಉಂಟಾಗಲಿದೆ.

ವೃಶ್ಚಿಕ: ಸಿಕ್ಕಿರುವ ಕೆಲಸದಲ್ಲಿಯೇ ಮುಂದುವರೆಯುವುದರಿಂದ ಮುಂದೆ ಉತ್ತಮ ಅವಕಾಶಗಳನ್ನು ಪಡೆಯುವಿರಿ. ಹಿತಶತ್ರುಗಳ, ಪ್ರತಿಸ್ಪರ್ಧಿಗಳ ಪಿತೂರಿ ಗಮನಕ್ಕೆ ಬರಲಿದೆ. ಆದಾಯದಲ್ಲಿ ಏರಿಳಿತ ಇರಲಿದೆ.

ಧನು: ಕಾರ್ಯಕ್ಷೇತ್ರದಲ್ಲಿ ಎಚ್ಚರ ವಹಿಸದೆ, ಅತಿಯಾದ ವಿಶ್ವಾಸದಿಂದ ಮುಂದುವರೆದರೆ ಹಿರಿಯ ಅಧಿಕಾರಿ ಅಥವಾ ಸಾರ್ವಜನಿಕರಿಂದ ಸಮಸ್ಯೆಗಳು ಎದುರಾಗಲಿವೆ. ನೀರಿನ ವ್ಯತ್ಯಾಸದಿಂದ ಅನಾರೋಗ್ಯ ಸಂಭವಿಸಬಹುದು.

ಮಕರ: ದಾಂಪತ್ಯದಲ್ಲಿ ಕಿರಿಕಿರಿ ಉಂಟಾಗಿ ಮನೆಯಲ್ಲಿ ಅಶಾಂತಿಯ ವಾತಾವರಣ ಉಂಟಾಗಲಿದೆ. ವೃತ್ತಿಗೆ ಸಂಬಂಧಿಸಿದ ಗುರಿಗಳನ್ನು ಈಡೇರಿಸಿಕೊಳ್ಳುವಲ್ಲಿ ಸಫಲರಾಗುವಿರಿ. ಸಾಧನೆ ಹಾಗೂ ಅಭಿವೃದ್ಧಿ ಸಾಧಿಸುವ ದಿನ.

ಕುಂಭ: ಹೆಚ್ಚುತ್ತಿರುವ ಕೌಟುಂಬಿಕ ಜವಾಬ್ದಾರಿಗಳನ್ನು ನಿಭಾಯಿಸಲು ಹೆಚ್ಚಿನ ತಯಾರಿ ಅಗತ್ಯ. ಇತರರಿಗೆ ಸಹಾಯ ಮಾಡುವ ನಿಮ್ಮ ಗುಣವು ದುರ್ಬಳಕೆ ಆಗದಂತೆ ಎಚ್ಚರ ವಹಿಸಿ. ಇಂದ್ರಿಯಾತೀತವಾದ ಅನುಭವ ಉಂಟಾಗಲಿದೆ.


ಮೀನ: ನಿಮ್ಮ ಸಿದ್ಧಾಂತಗಳನ್ನು ಇನ್ನೊಬ್ಬರ ಮೇಲೆ ಬಲವಂತವಾಗಿ ಹೇರುವ ಪ್ರಯತ್ನ ಮಾಡದಿರಿ. ತಂದೆ ತಾಯಿಯರು ನಿಮಗಾಗಿ ಮಾಡಿರುವ ತ್ಯಾಗವನ್ನು ಸ್ಮರಿಸಿಕೊಂಡು, ಅವರ ಸೇವೆ ಮಾಡುವುದು ಸೂಕ್ತ.

ಪದಬಂಧ 5998

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಪ್ಪುಗೆಯನ್ನು ಹೀಗೆನ್ನಿ (4)
3.ಭೇದಿಯಾಗಲು ಕೊಡುವ ಔಷಧಿ (4)
5.ಕೊನೆಗೆ ತಿರುಗಿದ ಮಗನಿಗೆ ಇದು ಸಲೀಸು! (3)
6.ನಡುವೆಯೇ ಪ್ರಾರಂಭವಾದ ಕಂಪನ! (3)
8.ಪಾಕದ ನಂತರ ತಯಾರಿಸಲಾದ ಷರಬತ್ತು (3)
10.ಕುರಿಯ ತುಪ್ಪಟದಿಂದ ಮಾಡಲಾದ ಬಟ್ಟೆ (3)
11.ಕರ ಕೊನೆಗಿದ್ದರೆ ಗಣಿ ಕಾಣುವುದೇ? (3)
13.ಪರಾಕ್ರಮವನ್ನು ಹೀಗೆ ತೋರಿಸಿ (3)
15.ಜೈನ ತೀರ್ಥಂಕರರಲ್ಲಿ ಕೊನೆಯವರು (4)
16.ಚಾರ ಹೇಳಿದ ಸುದ್ದಿ (4)

ಮೇಲಿಂದ ಕೆಳಕ್ಕೆ
1.ಊಟಕ್ಕೆ ಮೊದಲು ಮಂತ್ರಪೂರ್ವಕವಾಗಿ ಅಂಗೈಯಲ್ಲಿ ನೀರನ್ನು ಹೀರುವುದು (4)
2.ಕನಸು ಇಲ್ಲಿ ಸತ್ಯವಾಗಿದೆ (3)
3.ಸಮನಾಗಿಲ್ಲದಿರುವುದು (3)
4.ಬೆನ್ನೆಲುಬುಳ್ಳ ಪ್ರಾಣಿ (4)
7.ತಿರುಗಿದಾಗ ಪೊಳ್ಳು ಕಂಡಿದೆ (3)
9.ಈತ ನೃತ್ಯ ಮಾಡುವವನು (3)
10.ಸಿಂಹವನ್ನು ಹೀಗೂ ಕರೆವರು (4)
12.ಸಮುದ್ರ ಇಲ್ಲಿದೆ (4)
13.ಸಿದ್ಧಿಯನ್ನು ಪಡೆಯುವುದು (3)
14.ವಿರಸದ ವಿರುದ್ಧ ಪದ (3)



5997ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಗ್ರಗಾಮಿ 3.ಪರಿಪಾಕ 5.ಮಧುಕರಿ 7.ಜಟಿಲ 8.ಪಾರಿತೋಷಕ 11.ಉತ್ತರ 12.ತ್ರುಕಕೀಹ 15.ದುರಭ್ಯಾಸ 16.ಪುರುಸೊತ್ತು

ಮೇಲಿಂದ ಕೆಳಕ್ಕೆ:
1.ಉತ್ತಮಣ 2.ಗಾಯಕ 3.ಪನ್ನ 4.ಕಮಲ 6.ರಿಪೇರಿ 7.ಜನಕ 8.ಪಾಮರ 9.ಷರತ್ತು 10.ಮೆಹನತ್ತು 11.ಉಮೇದು 13.ಕದಿರು 14.ಕಂಪ

ಸುಡೊಕು 6383

				5		2		8
5		4	1		8		3	
		3		7			5	4
	6			3		1		2
2		5			7			
	3			8		5		6
		8			6		2	3
3		2	7	4			6	5
	5			2		4		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6382 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ದೇಶದ ಬಾಹ್ಯ ಸಾಲ ₹61 ಲಕ್ಷ ಕೋಟಿ



ನವದೆಹಲಿ (ಪಿಟಿಐ): 2024ರ ಡಿಸೆಂಬರ್ ಅಂತ್ಯದ ವೇಳೆಗೆ ದೇಶದ ಬಾಹ್ಯ ಸಾಲವು ₹61.42 ಲಕ್ಷ ಕೋಟಿಯಷ್ಟಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ತ್ರೈಮಾಸಿಕ ವರದಿ ಸೋಮವಾರ ತಿಳಿಸಿದೆ.

2023ರ ಡಿಸೆಂಬರ್‌ನಲ್ಲಿ ₹55.50 ಲಕ್ಷ ಕೋಟಿಯಷ್ಟಿತ್ತು. ಇದಕ್ಕೆ ಹೋಲಿಸಿದರೆ ಶೇ 10.7ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ. ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ₹60.97 ಲಕ್ಷ ಕೋಟಿಯಷ್ಟಿತ್ತು.

ಬಾಹ್ಯ ಸಾಲ ಮತ್ತು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಅನುಪಾತವು ಡಿಸೆಂಬರ್‌ನಲ್ಲಿ ಶೇ 19.1ರಷ್ಟಾಗಿದೆ. ಸೆಪ್ಟೆಂಬರ್‌ನಲ್ಲಿ ಶೇ 19ರಷ್ಟಿತ್ತು.

ರೂಪಾಯಿ ಮತ್ತು ಇತರ ಕರೆನ್ಸಿಗಳ ಎದುರು ಡಾಲರ್‌ನ ಮೌಲ್ಯ ಏರಿಕೆಯು ದೇಶದ ಸಾಲದ ಮೊತ್ತ ಏರಿಕೆಯಾಗಲು ಕಾರಣ.

ಒಟ್ಟು ಬಾಹ್ಯ ಸಾಲದಲ್ಲಿ ಹಣಕಾಸುಯೇತರ ನಿಗಮಗಳ ಸಾಲದ ಪಾಲು ಶೇ 36.5ರಷ್ಟಿದೆ. ಠೇವಣಿ ತೆಗೆದುಕೊಳ್ಳುವ ನಿಗಮಗಳು (ಶೇ 27.8), ಕೇಂದ್ರ ಸರ್ಕಾರ (ಶೇ 22.1) ಮತ್ತು ಇತರೆ ಹಣಕಾಸು ನಿಗಮಗಳ ಪಾಲು ಶೇ 8.7ರಷ್ಟಿದೆ ಎಂದು ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

31-03-2025

ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ(ಹೊಸ)	7500-7600
ದಪ್ಪ ಗುಜರಾತ್(ಹೊಸ)	7800-7900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1390 (1390)
ಒಂದು ವಾರದ ಡೆಲಿವರಿ	1385 (1385)
ಪಾಮ್ ವಾರದ ಡೆಲಿವರಿ	1353 (1348)
ಸೂರ್ಯಕಾಂತಿ ಎಣ್ಣೆ ಕಚ್ಚಾ	1355 (1355)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹89,850 (88,650)
ಬೆಳ್ಳಿ ಕೆ.ಜಿ ₹99,300 (1,00,600)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ಹೂಡಿಕೆ: ರಿಸ್ಕ್ ನಿಭಾಯಿಸೋದು ಹೇಗೆ?



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ನಾವೆಲ್ಲರೂ ಶ್ರೀಮಂತರಾಗಬೇಕೆಂದು ಬಯಸುತ್ತೇವೆ. ಆದರೆ ಕೇವಲ ತಿಂಗಳ ಸಂಬಳ ನೆಚ್ಚಿಕೊಂಡು ಆರ್ಥಿಕವಾಗಿ ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯವಿಲ್ಲ. ದುಡ್ಡನ್ನು ವೇಗವಾಗಿ ಬೆಳೆಸಬೇಕಾದರೆ ಗಳಿಸಿದ್ದನ್ನು ಉತ್ತಮ ರೀತಿಯಲ್ಲಿ ಹೂಡಿಕೆ ಮಾಡಿ ಪರ್ಯಾಯ ಆದಾಯ ಗಳಿಕೆಯ ಸಾಧ್ಯತೆಗಳನ್ನು ಹೆಚ್ಚಿಸಿಕೊಳ್ಳಬೇಕು. ಆದರೆ ಬಹುತೇಕರಿಗೆ ಅವರ ಆರ್ಥಿಕ ಸ್ಥಿತಿಗತಿಗೆ ಅನುಗುಣವಾಗಿ ಎಲ್ಲಿ ಹೂಡಿಕೆ ಮಾಡಬೇಕು? ಯಾವ ರೀತಿಯ ಹೂಡಿಕೆ ಉತ್ಪನ್ನಗಳನ್ನು ಆಯ್ಕೆ ಮಾಡಿಕೊಳ್ಳಬೇಕು? ಎಷ್ಟು ಹೂಡಿಕೆ ರಿಸ್ಕ್ ತೆಗೆದುಕೊಳ್ಳಬೇಕು? ಎನ್ನುವ ಪ್ರಶ್ನೆಗಳಿಗೆ ಸರಿಯಾದ ಉತ್ತರ ತಿಳಿದಿಲ್ಲ. ಯಾರೋ ಹೇಳಿದರು, ಪರಿಚಯಸ್ಥರು ಸಲಹೆ ಕೊಟ್ಟರು ಎಂಬ ಕಾರಣಕ್ಕೆ ಅನೇಕರು ಹೂಡಿಕೆ ಮಾಡಿ ಸಮಸ್ಯೆ ತಂದುಕೊಳ್ಳುತ್ತಾರೆ. ಬನ್ನಿ, ಈ ಲೇಖನದಲ್ಲಿ ಹೂಡಿಕೆಯ ರಿಸ್ಕ್ ನಿಭಾಯಿಸುವ ಜೊತೆಜೊತೆಗೆ ಸಂಪತ್ತನ್ನೂ ಗಳಿಸುವುದು ಹೇಗೆ ಎನ್ನುವ ಬಗ್ಗೆ ವಿವರವಾಗಿ ತಿಳಿಯೋಣ.

ನೀವು ಎಷ್ಟು ರಿಸ್ಕ್ ತೆಗೆದುಕೊಳ್ಳಬಹುದು ನೋಡಿಕೊಳ್ಳಿ: ಹೂಡಿಕೆ ಮಾಡಿರುವ ಬಂಡವಾಳದ ಮೊತ್ತವನ್ನು ಅಕಸ್ಮಾತಾಗಿ ಕಳೆದುಕೊಂಡರೆ ಅದನ್ನು ಎಷ್ಟರಮಟ್ಟಿಗೆ ಸಹಿಸಿಕೊಳ್ಳಬಹುದು ಎನ್ನುವುದೇ ರಿಸ್ಕ್ ಟಾಲರೆನ್ಸ್. ಯಾವ ವ್ಯಕ್ತಿ ಎಷ್ಟು ರಿಸ್ಕ್ ತೆಗೆದುಕೊಳ್ಳಬಹುದು ಎನ್ನುವುದು ಅವರವರ ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿದೆ. ಉದಾಹರಣೆಗೆ 21 ವರ್ಷದ ಅವಿವಾಹಿತ ಯುವಕನಿಗೆ ಹಣಕಾಸಿಗೆ ಸಂಬಂಧಿಸಿದಂತೆ ಹೆಚ್ಚಿನ ಜವಾಬ್ದಾರಿಗಳು ಇರುವುದಿಲ್ಲ. ಆದರೆ ವಿವಾಹಿತರಾಗಿರುವ 45 ವರ್ಷದ ವ್ಯಕ್ತಿಗೆ ಮಕ್ಕಳು, ಮನೆ ನಿರ್ವಹಣೆ, ಆರೋಗ್ಯ ವೆಚ್ಚಗಳು ಸೇರಿದಂತೆ ಹೆಚ್ಚಿನ ಹಣಕಾಸಿನ ಜವಾಬ್ದಾರಿಗಳಿರುತ್ತವೆ. ಹಾಗಾಗಿ ಸಾಮಾನ್ಯವಾಗಿ ಚಿಕ್ಕ ವಯಸ್ಸಿನ ಹೂಡಿಕೆದಾರರು ಹಿರಿಯ ವಯಸ್ಸಿನವರಿಗಿಂತ ಹೆಚ್ಚು ಹೂಡಿಕೆ ರಿಸ್ಕ್ ತೆಗೆದುಕೊಳ್ಳಬಹುದು ಎನ್ನುವುದು ಒಂದು ಲೆಕ್ಕಾಚಾರ. ವಯಸ್ಸು ಚಿಕ್ಕದಿದ್ದಾಗ ಷೇರು ಮಾರುಕಟ್ಟೆ ಆಧಾರಿತ ಹೂಡಿಕೆಗಳತ್ತ ಹೆಚ್ಚು ಗಮನ ಕೊಡಬೇಕು. ವೃತ್ತಿಯ ನಿವೃತ್ತಿಯ ಅಂಚಿಗೆ ಬರುವಾಗ ಫಿಕ್ಸೆಡ್ ಡೆಪಾಸಿಟ್, ಹಿರಿಯ ನಾಗರಿಕರ ಉಳಿತಾಯ ಯೋಜನೆ, ಅಂಚೆ ಕಚೇರಿ ಹೂಡಿಕೆಗಳು ಸೇರಿದಂತೆ ಇನ್ನಿತರ ಸುರಕ್ಷತೆಯ ಹೂಡಿಕೆಗಳನ್ನು ಪರಿಗಣಿಸಬೇಕು. ಹಾಗೆಂದ ಮಾತ್ರಕ್ಕೆ ಎಲ್ಲರಿಗೂ ಇದು ಹೀಗೆ ಎಂದಲ್ಲ. ಆಗಲೇ ಹೇಳಿದ ಹಾಗೆ ಎಷ್ಟು ರಿಸ್ಕ್ ತೆಗೆದುಕೊಳ್ಳಬಹುದು ಎನ್ನುವುದು ನಿಮ್ಮ ಹಣಕಾಸಿನ ಸ್ಥಿತಿಗತಿ ಮೇಲೆ ನಿಂತಿರುತ್ತದೆ. ಅದಕ್ಕೆ ತಕ್ಕಂತೆ ನಿಮ್ಮ ರಿಸ್ಕ್ ಹೊಂದಿಸಿಕೊಳ್ಳಬೇಕಾಗುತ್ತದೆ.

ಬೇಕಾದಾಗ ತೆಗೆದುಕೊಳ್ಳಬಹುದಾದ ಹಣ ನಿಮ್ಮ ಹೂಡಿಕೆಯ ಭಾಗವಾಗಿರಲಿ: ನಿಮ್ಮ ತಕ್ಷಣದ ಅಗತ್ಯಗಳಿಗೆ, ಅನಿರೀಕ್ಷಿತ ಖರ್ಚುಗಳಿಗೆ ಅಗತ್ಯವಿರುವ ಹಣವನ್ನು ಎಂದಿಗೂ ಷೇರು ಮಾರುಕಟ್ಟೆ ಮತ್ತು ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ತೊಡಗಿಸಬೇಡಿ. ತಕ್ಷಣಕ್ಕೆ ಅಗತ್ಯವಿರುವ ಹಣವನ್ನು ಅಲ್ಲಿ ತೊಡಗಿಸಿದರೆ ಮಾರುಕಟ್ಟೆ ತಾತ್ಕಾಲಿಕವಾಗಿ ಕುಸಿದ ಸಂದರ್ಭದಲ್ಲಿ ಹಣ ವಾಪಸ್ ಪಡೆದುಕೊಳ್ಳಬೇಕಾದರೆ ನಿಮಗೆ ನಷ್ಟ ಉಂಟಾಗುತ್ತದೆ. ಹಾಗಾಗಿ ತುರ್ತು ಅಗತ್ಯಗಳಿಗೆ ಬೇಕಾದ ಹಣವನ್ನು ಎಮರ್ಜೆನ್ಸಿ ಫಂಡ್‌ನಲ್ಲಿ ಇಟ್ಟುಕೊಳ್ಳಿ. ಓವರ್ ನೈಟ್ ಫಂಡ್ಸ್, ಲಿಕ್ವಿಡ್ ಫಂಡ್ಸ್, ಉಳಿತಾಯ ಖಾತೆಯಲ್ಲಿ 3 ರಿಂದ 6 ತಿಂಗಳ ಖರ್ಚಿಗೆ ಬೇಕಾಗುವ ಹಣ ಇಟ್ಟುಕೊಂಡಾಗ ನಿರುಮ್ಮಳವಾಗಿ ಹೂಡಿಕೆ ಮುಂದುವರಿಸಬಹುದು.

ವಿವಿಧ ಹೂಡಿಕೆಗಳ ಮಿಶ್ರಣವಿರಲಿ: ಹೂಡಿಕೆ ಮಾಡುವಾಗ ಷೇರು, ಮ್ಯೂಚುವಲ್ ಫಂಡ್, ಚಿನ್ನ, ಸರ್ಕಾರಿ ಬಾಂಡ್‌ಗಳು, ಎನ್‌ಪಿಎಸ್, ಅಂಚೆ ಕಚೇರಿ ಹೂಡಿಕೆಗಳು, ರಿಯಲ್ ಎಸ್ಟೇಟ್ ಹೀಗೆ ಒಂದು ಹದವಾದ ಮಿಶ್ರಣವಿರಬೇಕು. ಮಾರುಕಟ್ಟೆ ಏರಿಳಿತಗಳಿಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ಹೂಡಿಕೆ ಮಾಡಬೇಕಾದರೆ ಹೈ ರಿಸ್ಕ್ ಮತ್ತು ಲೋ ರಿಸ್ಕ್ ಹೂಡಿಕೆಗಳ ಜೊತೆಯಾಟವಿರಬೇಕು. ಯಾವ ರೀತಿಯ ಹೂಡಿಕೆಗೆ ಎಷ್ಟು ಹಣ ತೊಡಗಿಸಬೇಕು ಎನ್ನುವುದನ್ನು ನಿಮ್ಮ ರಿಸ್ಕ್ ತೆಗೆದುಕೊಳ್ಳುವ ಸಾಮರ್ಥ್ಯದ ಮೇಲೆ ಅಳೆಯಬೇಕು. ಹೀಗೆ ಮಾಡಿದಾಗ ದೀರ್ಘಾವಧಿಯಲ್ಲಿ ದೊಡ್ಡ ಮೊತ್ತದ ಗಳಿಕೆ ಸಾಧ್ಯ.

ಕಾಲ ಕಾಲಕ್ಕೆ ಹೂಡಿಕೆಗಳ ಪರಾಮರ್ಶೆ ನಡೆಸಿ: ನಮ್ಮ ದೇಹದ ಆರೋಗ್ಯ ಸ್ಥಿತಿಯನ್ನು ಕಾಲಕಾಲಕ್ಕೆ ಪರೀಕ್ಷಿಸುವ ಹಾಗೆ ವಿವಿಧ ಹೂಡಿಕೆಗಳ ಆರೋಗ್ಯವನ್ನು ನೀವು ಆಗಾಗ ವಿಶ್ಲೇಷಣೆಗೆ ಒಳಪಡಿಸಬೇಕು. ಹಾಗೆಂದ ಮಾತ್ರಕ್ಕೆ ಪ್ರತಿ ದಿನ ಬೆಳಗ್ಗೆ ಎದ್ದ ಕೂಡಲೇ ಹೂಡಿಕೆಗಳನ್ನು ಗಮನಿಸುತ್ತಿರಬೇಕು ಎಂದಲ್ಲ. ವರ್ಷಕ್ಕೊಮ್ಮೆ ಹೂಡಿಕೆಗಳ ಪರಾಮರ್ಶೆಗೆ ಇಳಿಯಬೇಕು. ಅರ್ಥ ವ್ಯವಸ್ಥೆಯ ಸ್ಥಿತಿಗತಿಗೆ ಅನುಗುಣವಾಗಿ ಹೂಡಿಕೆ ವಿಧಾನದಲ್ಲಿ ಏನಾದರೂ ಬದಲಾವಣೆ ಮಾಡಿಕೊಳ್ಳಬೇಕೇ ನೋಡಬೇಕು. ಷೇರು ಮಾರುಕಟ್ಟೆ ಆಧಾರಿತ ಹೂಡಿಕೆಗಳಲ್ಲಿ ಹಣ ಹಾಕಿದಾಗ ಅದರ ಬೆಳವಣಿಗೆಗೆ ಸಮಯ ಕೊಡಬೇಕು. ಇವತ್ತು ಹೂಡಿಕೆ ಮಾಡಿ, ನಾಳೆ ಹೆಚ್ಚು ಹಣ ಗಳಿಸಬೇಕು ಎನ್ನುವ ಲೆಕ್ಕಾಚಾರದಲ್ಲಿ ಷೇರು ಮಾರುಕಟ್ಟೆ ಪ್ರವೇಶಿಸಬಾರದು.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಷೇರುಪೇಟೆ

ಅಲ್ಪ ಗಳಿಕೆ ದಾಖಲಿಸಿದ ಷೇರು ಸೂಚ್ಯಂಕಗಳು

ಮಾರ್ಚ್ 28ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಅತ್ಯಲ್ಪ ಗಳಿಕೆ ದಾಖಲಿಸಿವೆ. 77,414 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.66ರಷ್ಟು ಗಳಿಸಿಕೊಂಡಿದೆ. 23,519 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.72ರಷ್ಟು ಜಿಗಿದಿದೆ. ಆದರೆ, ನಿಫ್ಟಿ ಮಿಡ್ ಕ್ಯಾಪ್ ಸೂಚ್ಯಂಕ ಶೇ 0.32ರಷ್ಟು ಕುಸಿತ ಕಂಡಿದ್ದರೆ, ಸ್ಮಾಲ್ ಕ್ಯಾಪ್ ಶೇ 0.15ರಷ್ಟು ಇಳಿದಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಮಂದಗತಿಯ ವಹಿವಾಟು ನಡೆದರೂ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ದೇಶಿಯ ಮಾರುಕಟ್ಟೆಯಲ್ಲಿ ಷೇರುಗಳ ಖರೀದಿ ಮಾಡುತ್ತಿರುವುದು ಸೂಚ್ಯಂಕಗಳು ಕೊಂಚ ಸಕಾರಾತ್ಮಕವಾಗಿ ಕಂಡುಬರಲು ಕಾರಣವಾಗಿದೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 2.16, ಫೈನಾನ್ಸ್ ಶೇ 2.06, ಬ್ಯಾಂಕ್ ನಿಫ್ಟಿ ಶೇ 1.92, ಎಫ್‌ಎಂಸಿಜಿ ಶೇ 1.14, ಸರ್ವಿಸ್ ಶೇ 1.06, ಎನರ್ಜಿ ಶೇ 0.29ರಷ್ಟು ಗಳಿಸಿಕೊಂಡಿವೆ. ನಿಫ್ಟಿ ಮಾಧ್ಯಮ ಶೇ 4.68, ಫಾರ್ಮಾ ಶೇ 2.26 ಆಟೊ ಶೇ 2.12, ರಿಯಲ್ ಎಸ್ಟೇಟ್ ಶೇ 1.33, ಮತ್ತು ಲೋಹ ಶೇ 1.21ರಷ್ಟು ಕುಸಿದಿವೆ.

ಇಳಿಕೆ – ಗಳಿಕೆ: ವಾರದ ಲೆಕ್ಕಾಚಾರದಲ್ಲಿ ನಿಫ್ಟಿಯಲ್ಲಿ ಸಿಪ್ಲಾ ಶೇ 5.36, ಇಂಡಸ್‌ಇಂಡ್ ಬ್ಯಾಂಕ್ ಶೇ 5.28, ಡಾ. ರೆಡ್ಡೀಸ್ ಲ್ಯಾಬ್ಸ್ ಶೇ 4.75, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 4.75, ಟಾಟಾ ಮೋಟರ್ಸ್ ಶೇ 4.1, ಟೈಟನ್ ಕಂಪನಿ ಶೇ 3.15, ಸನ್ ಫಾರ್ಮಾ ಶೇ 2.89, ಶ್ರೀರಾಮ್ ಫೈನಾನ್ಸ್ ಶೇ 2.84, ಬಜಾಜ್ ಆಟೊ ಶೇ 2.59, ಮಾರುತಿ ಸುಜುಕಿ ಶೇ 2.25, ಹಿಂಡಾಲ್ಕೋ ಇಂಡಸ್ಟ್ರೀಸ್ ಶೇ 1.93, ಮತ್ತು ಟಾಟಾ ಸ್ಟೀಲ್ ಶೇ 1.91ರಷ್ಟು ಕುಸಿದಿವೆ.

ಬಜಾಜ್ ಫಿನ್‌ಸರ್ವ್ ಶೇ 9.04, ಟಾಟಾ ಕನ್ಸ್ಯೂಮರ್ ಶೇ 4.62, ಗ್ರಾಸಿಮ್ ಇಂಡಸ್ಟ್ರೀಸ್ ಶೇ 4.5, ಅಲ್ಟ್ರಾಟೆಕ್ ಸಿಮೆಂಟ್ ಶೇ 4.43, ಕೋಟಕ್ ಮಹೀಂದ್ರ ಬ್ಯಾಂಕ್ ಶೇ 4.17, ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 3.31, ಟ್ರೆಂಟ್ ಶೇ 3.17, ಬ್ರಿಟಾನಿಯಾ ಶೇ 2.57, ಹಿರೋ ಮೋಟೋ ಕಾರ್ಪ್ ಶೇ 2.49, ಎಸ್‌ಬಿಐ ಶೇ 2.47, ಎಕ್ಸಿಸ್ ಬ್ಯಾಂಕ್ ಶೇ 2.42 ಮತ್ತು ಪವರ್ ಗ್ರಿಡ್ ಕಾರ್ಪೊರೇಷನ್ ಶೇ 2.31ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಸದ್ಯದ ಸ್ಥಿತಿಯಲ್ಲಿ ಮಾರುಕಟ್ಟೆಯಲ್ಲಿ ಏರಿಳಿತದ ಪರಿಸ್ಥಿತಿ ಮುಂದುವರಿಯಲಿದೆ. ಏಪ್ರಿಲ್ 7ರಿಂದ 9ರ ವರೆಗೆ ಆರ್‌ಬಿಐನ ಹಣಕಾಸು ನೀತಿ ಸಮಿತಿ ಸಭೆ ನಡೆಯಲಿದ್ದು, ಬಡ್ಡಿ ದರದ ಬಗ್ಗೆ ಯಾವ ನಿರ್ಣಯ ಹೊರಬೀಳಲಿದೆ ಎಂಬ ಕುತೂಹಲ ಹೂಡಿಕೆದಾರರಿಗಿದೆ. ಇನ್ನು ಏಪ್ರಿಲ್ 15ರಿಂದ ಕಂಪನಿಗಳ ನಾಲ್ಕನೇ ತ್ರೈಮಾಸಿಕ ಫಲಿತಾಂಶಗಳ ಪರ್ವ ಶುರುವಾಗಲಿದೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶಿಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

‘ನೀತಿ–ಎನ್‌ಸಿಎಇಆರ್’ ಪೋರ್ಟಲ್‌ಗೆ ಇಂದು ಚಾಲನೆ



ನಿರ್ಮಲಾ ಸೀತಾರಾಮನ್

ನವದೆಹಲಿ (ಪಿಟಿಐ): ‘ನೀತಿ–ಎನ್‌ಸಿಎಇಆರ್ ರಾಜ್ಯಗಳ ಆರ್ಥಿಕ ವೇದಿಕೆ’ ಪೋರ್ಟಲ್‌ಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಗಳವಾರ ಚಾಲನೆ ನೀಡಲಿದ್ದಾರೆ.

ಕಳೆದ ಮೂರು ದಶಕಗಳಿಂದ 2022–23ರ ಆರ್ಥಿಕ ವರ್ಷದವರೆಗಿನ ರಾಜ್ಯಗಳ ಸಾಮಾಜಿಕ, ಆರ್ಥಿಕತೆಯ ಸಮಗ್ರ ಮಾಹಿತಿಯನ್ನು ಈ ಪೋರ್ಟಲ್ ಒದಗಿಸಲಿದೆ. ರಾಷ್ಟ್ರೀಯ ಅನ್ವಯಿಕ ಅರ್ಥಶಾಸ್ತ್ರ ಸಂಶೋಧನಾ ಮಂಡಳಿ (ಎನ್‌ಸಿಎಇಆರ್) ಸಹಯೋಗದೊಂದಿಗೆ ನೀತಿ ಆಯೋಗ ಈ ಪೋರ್ಟಲ್ ಅನ್ನು ಸಿದ್ಧಪಡಿಸಿದೆ.

ಜನಸಂಖ್ಯಾಶಾಸ್ತ್ರ, ಆರ್ಥಿಕ ರಚನೆ, ಹಣಕಾಸು, ಆರೋಗ್ಯ ಮತ್ತು ಶಿಕ್ಷಣ ಎನ್ನುವ 5 ಭಾಗವಾಗಿ ವರ್ಗೀಕರಿಸಲಾಗಿದೆ. ಜೊತೆಗೆ ಈ ಪೋರ್ಟಲ್ ದೇಶದ 28 ರಾಜ್ಯಗಳ ಜನಸಂಖ್ಯಾಶಾಸ್ತ್ರ, ಆರ್ಥಿಕ ರಚನೆ, ಸಾಮಾಜಿಕ–ಆರ್ಥಿಕ ಮತ್ತು ಹಣಕಾಸಿನ ಸೂಚ್ಯಂಕಗಳ ಬಗ್ಗೆ ಸಮಗ್ರ ಮಾಹಿತಿ ಒಳಗೊಂಡಿದ್ದು, ಕಳೆದ 30 ವರ್ಷಗಳ ಪ್ರತಿ ರಾಜ್ಯದ ದತ್ತಾಂಶವನ್ನು ಒದಗಿಸುತ್ತದೆ ಎಂದು ನೀತಿ ಆಯೋಗ ತಿಳಿಸಿದೆ.

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹202
ಆರ್‌ಎಸ್‌ಎಸ್-5	₹197
ಗುಡ್ ಲಾಟ್	₹188

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹289-528
ದ್ವಿತಳಿ (ಬಿ.ವಿ)	₹339-633

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹510
12 ಕ್ಕೆ	₹68
ಮೈಸೂರು	
100ಕ್ಕೆ	₹510

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ನೆನ್ನೆಯ ದರ)

ಶೇಂಗಾ (ರಿಫೈನ್ಡ್)	₹1380 (1390)
ಸೋಯಾ (ರಿಫೈನ್ಡ್)	₹1305 (1300)
ಸೂರ್ಯಕಾಂತಿ (ರಿಫೈನ್ಡ್)	₹1410 (1410)
ಪಾಮೋಲಿನ್	₹1355 (1350)

30 ವರ್ಷಗಳಿಗೆ ಖಾಸಗಿ ಸಂಸ್ಥೆಗೆ ನೀಡಲು ಕೇಂದ್ರ ಸರ್ಕಾರ ನಿರ್ಧಾರ

ಹುಬ್ಬಳ್ಳಿ ವಿಮಾನ ನಿಲ್ದಾಣ ಖಾಸಗಿಗೆ?

• ಸತೀಶ ಬಿ.

ಹುಬ್ಬಳ್ಳಿ: ಇಲ್ಲಿನ ವಿಮಾನ ನಿಲ್ದಾಣದ ಅಭಿವೃದ್ಧಿ ಮತ್ತು ನಿರ್ವಹಣೆ ಗುತ್ತಿಗೆಯನ್ನು ಒಟ್ಟು 30 ವರ್ಷಗಳಿಗೆ ಖಾಸಗಿ ಸಂಸ್ಥೆಗೆ ನೀಡಲು ಕೇಂದ್ರ ಸರ್ಕಾರ ಮುಂದಾಗಿದೆ. ನಿರೀಕ್ಷಿತ ಮಟ್ಟದಲ್ಲಿ ಆದಾಯ ತಂದುಕೊಡದ ಈ ನಿಲ್ದಾಣವು ಈಗಾಗಲೇ ಭುವನೇಶ್ವರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಜೊತೆ ವಿಲೀನಗೊಂಡಿದೆ.

ಮಂಗಳೂರು ವಿಮಾನ ನಿಲ್ದಾಣದ ನಿರ್ವಹಣೆ ಜವಾಬ್ದಾರಿಯನ್ನು ಅದಾನಿ ಸಮೂಹ ಸಂಸ್ಥೆಗೆ ವಹಿಸಿದ ಸಂದರ್ಭದಲ್ಲಿ ಇದನ್ನು ಖಂಡಿಸಿ ಕಾಂಗ್ರೆಸ್ ಸೇರಿ ವಿವಿಧ ಸಂಸ್ಥೆಗಳಿಂದ ಪ್ರತಿಭಟನೆ ವ್ಯಕ್ತವಾಗಿತ್ತು.

ಆದಾಯ ಹಂಚಿಕೆ ಆಧಾರದ ಮೇಲೆ ದೆಹಲಿ ಮತ್ತು ಮುಂಬೈ ವಿಮಾನ ನಿಲ್ದಾಣಗಳ ನಿರ್ವಹಣೆ ಹೊಣೆ ಖಾಸಗಿ ಸಂಸ್ಥೆಗೆ ನೀಡಲಾಗಿದೆ. ವಾರ್ಷಿಕ ಆದಾಯದಲ್ಲಿ ಶೇಕಡ ಅರ್ಧದಷ್ಟು ಭಾರತ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ (ಎಎಐ) ಹೋಗುತ್ತದೆ. ಮಂಗಳೂರು ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ಸಂಖ್ಯೆ ಆಧರಿಸಿ, ಎಎಐ ಪ್ರಾಧಿಕಾರಕ್ಕೆ ಹಣ ಪಾವತಿ ಆಗುತ್ತದೆ. ಹುಬ್ಬಳ್ಳಿ ವಿಮಾನ ನಿಲ್ದಾಣದ ಖಾಸಗಿ ಹೊಣೆ ಯಾವ ಸ್ವರೂಪದ್ದು ಎಂಬುದು ಇನ್ನೂ ಅಸ್ಪಷ್ಟವಾಗಿದೆ.



ಹುಬ್ಬಳ್ಳಿ ವಿಮಾನ ನಿಲ್ದಾಣ

ವರ್ಷ	ಪ್ರಯಾಣಿಕರ ಸಂಖ್ಯೆ
2021-22	1,88,272
2022-23	3,18,130
2023-24	3,58,754

> ಹುಬ್ಬಳ್ಳಿ ವಿಮಾನ ನಿಲ್ದಾಣದ ಜೊತೆ ದೇಶದ ಇತರೆ 11 ನಿಲ್ದಾಣಗಳು ಖಾಸಗೀಕರಣಗೊಳ್ಳಲಿವೆ. 6 ತಿಂಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳ್ಳುವ ಸಾಧ್ಯತೆ ಇದೆ
> **ರೂಪೇಶಕುಮಾರ್,** ನಿರ್ದೇಶಕ, ಹುಬ್ಬಳ್ಳಿ ವಿಮಾನ ನಿಲ್ದಾಣ

> ಖಾಸಗೀಕರಣ ನೀತಿಯಿಂದ ಅದಾನಿ ಕಂಪನಿ 2019ರಲ್ಲಿ 6 ವಿಮಾನ ನಿಲ್ದಾಣಗಳ ನಿರ್ವಹಣೆ ಗುತ್ತಿಗೆ ಪಡೆದಿತ್ತು. ಈ ನಿಲ್ದಾಣವು ಯಾರ ಪಾಲಾಗುತ್ತೋ, ನೋಡಬೇಕು
> **ಗುರುನಾಥ ಉಳ್ಳಿಕಾಶಿ,** ಹೋರಾಟಗಾರ

ಹೆಚ್ಚು ಮೊತ್ತಕ್ಕೆ ಬಿಡ್ಡಿಂಗ್ ಸಲ್ಲಿಸುವ ಕಂಪನಿಗೆ ಟೆಂಡರ್ ನೀಡಲಾಗುತ್ತದೆ. ಸದ್ಯ ನಿಲ್ದಾಣದಲ್ಲಿ ಎಎಐ ಪ್ರಾಧಿಕಾರದಡಿ 70 ಸಿಬ್ಬಂದಿ ಇದ್ದಾರೆ. ಉಳಿದ 250ಕ್ಕೂ ಹೆಚ್ಚು ಸಿಬ್ಬಂದಿ ವಿವಿಧ ಏಜೆನ್ಸಿಗಳಿಂದ ನೇಮಕವಾಗಿದ್ದಾರೆ. ಟೆಂಡರ್ ಪಡೆದ ಕಂಪನಿ ತಮಗೆ ಬೇಕಾದ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುತ್ತದೆ.

‘ವಿಮಾನ ನಿಲ್ದಾಣದಲ್ಲಿ ₹320 ಕೋಟಿ ವೆಚ್ಚದಲ್ಲಿ ನೂತನ ಟರ್ಮಿನಲ್ ಕಟ್ಟಡ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಮುಂದಿನ ವರ್ಷ ಮಾರ್ಚ್ ವೇಳೆಗೆ ಕಾಮಗಾರಿ ಪೂರ್ಣಗೊಳ್ಳಲಿದೆ. ನಿಲ್ದಾಣದ ನಿರ್ವಹಣೆ, ಅಭಿವೃದ್ಧಿ ಹೊಣೆ ಮಾತ್ರ ಖಾಸಗಿ ಸಂಸ್ಥೆ ವಹಿಸಿಕೊಳ್ಳಲಿದೆ. ವಾಯು ಸಂಚಾರ ದಟ್ಟಣೆ ನಿಯಂತ್ರಣ (ಎಟಿಸಿ) ಮತ್ತು ಸಂವಹನ, ನ್ಯಾವಿಗೇಷನ್ ಮತ್ತು ಕಣ್ಗಾವಲು ವ್ಯವಸ್ಥೆ (ಸಿಎನ್‌ಎಸ್) ಎಲ್ಲವನ್ನೂ ಎಎಐ ನಿರ್ವಹಿಸಲಿದೆ’ ಎಂದು ಮೂಲಗಳು ತಿಳಿಸಿವೆ.

‘ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ಸದ್ಯಕ್ಕೆ ಒಂದು ಕೆಫೆ, ವಿಐಪಿ ಲಾಂಜ್ ಬಿಟ್ಟರೆ ಬೇರೆ ಸೌಲಭ್ಯಗಳಿಲ್ಲ. ನಿಲ್ದಾಣವನ್ನು ಖಾಸಗಿಗೆ ನೀಡಿದರೆ, ಉತ್ತಮ ನಿರ್ವಹಣೆ ಮತ್ತು ಅಭಿವೃದ್ಧಿ ಜೊತೆಗೆ ಹೆಚ್ಚಿನ ಸೌಲಭ್ಯ ಸಿಗುತ್ತವೆ. ಓಲಾ, ಉಬರ್ ಸೇವೆ ಲಭ್ಯವಾಗಲಿದೆ. ಪ್ರಯಾಣಿಕರ ಸಂಖ್ಯೆಯೂ ಹೆಚ್ಚುತ್ತದೆ’ ಎಂದು ಹುಬ್ಬಳ್ಳಿ ವಿಮಾನ ನಿಲ್ದಾಣ ಬಳಕೆದಾರರ ಸಲಹಾ ಸಮಿತಿ ಸದಸ್ಯ ಕೌಸ್ತುಭ ಸಂಶೀಕರ ‘ಪ್ರಜಾವಾಣಿ’ಗೆ ತಿಳಿಸಿದರು.

ಈ ನಿಲ್ದಾಣದ ಮೂಲಕ ಪ್ರತಿ ವಾರ ಇಂಡಿಗೊ ಸಂಸ್ಥೆಯ 78 ವಿಮಾನಗಳು ಕಾರ್ಯಾಚರಣೆ ನಡೆಸುತ್ತವೆ. ಬೆಂಗಳೂರು, ದೆಹಲಿ, ಮುಂಬೈ, ಹೈದರಾಬಾದ್ ಮತ್ತು ಪುಣೆಗೆ ವಿಮಾನಯಾನ ಸೌಲಭ್ಯ ಇದೆ.

‘ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ಟರ್ಮಿನಲ್ ಕಾಮಗಾರಿ ಪ್ರಗತಿಯಲ್ಲಿದೆ. ಇನ್ನಷ್ಟು ಸೌಲಭ್ಯ ಕಲ್ಪಿಸಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವನ್ನಾಗಿ ಮೇಲ್ದರ್ಜೆಗೇರಿಸಬೇಕು. ಖಾಸಗೀಕರಣದಿಂದ ಸಾಕಷ್ಟು ಜನ ಉದ್ಯೋಗ ಕಳೆದುಕೊಳ್ಳಬಹುದು. ಖಾಸಗೀಕರಣ ಪ್ರಕ್ರಿಯೆಯನ್ನು ಕೈಬಿಡಬೇಕು’ ಎಂದು ಹೋರಾಟಗಾರ ಗುರುನಾಥ ಉಳ್ಳಿಕಾಶಿ ತಿಳಿಸಿದರು.

ಬಾಷ್‌ಗೆ ಆದಾಯ ತೆರಿಗೆ ಇಲಾಖೆ ನೋಟಿಸ್

ನವದೆಹಲಿ (ಪಿಟಿಐ): 2022–23ನೇ ಮೌಲ್ಯಮಾಪನ ವರ್ಷದಲ್ಲಿನ ₹20 ಕೋಟಿ ತೆರಿಗೆ ಬಾಕಿಗೆ ಸಂಬಂಧಿಸಿದಂತೆ ತಂತ್ರಜ್ಞಾನ ಮತ್ತು ಸೇವಾ ಪೂರೈಕೆದಾರ ಬಾಷ್ ಇಂಡಿಯಾ ಕಂಪನಿಗೆ ಆದಾಯ ತೆರಿಗೆ ಇಲಾಖೆಯು ನೋಟಿಸ್ ನೀಡಿದೆ.

ಆದಾಯ ತೆರಿಗೆ ಇಲಾಖೆಯ ಮೌಲ್ಯಮಾಪನ ವಿಭಾಗವು ಈ ನೋಟಿಸ್ ನೀಡಿದ್ದು, ಮಾರ್ಚ್ 28ರಂದು ನೋಟಿಸ್ ಸ್ವೀಕರಿಸಲಾಗಿದೆ. ಇದು ₹1.80 ಕೋಟಿ ಬಡ್ಡಿ ಸಹ ಒಳಗೊಂಡಿದೆ. ಈ ಕುರಿತು ಮೇಲ್ಮನವಿ ಸಲ್ಲಿಸಲಾಗುವುದು ಎಂದು ಕಂಪನಿ ಸೋಮವಾರ ತಿಳಿಸಿದೆ.



ಭೂಕಂಪದಿಂದ ಬ್ಯಾಂಕಾಕ್‌ನಲ್ಲಿ ನೆಲಕ್ಕುರುಳಿದ ನಿರ್ಮಾಣ ಹಂತದ ಕಟ್ಟಡದ ಅವಶೇಷಗಳ ತೆರವು ಕಾರ್ಯಾಚರಣೆಯನ್ನು ಜನರು ಸೋಮವಾರ ಚಿತ್ರೀಕರಿಸಿಕೊಂಡರು ಎಎಫ್‌ಪಿ ಚಿತ್ರ

ಭೂಕಂಪ: 2,065ಕ್ಕೆ ಏರಿದ ಮೃತರ ಸಂಖ್ಯೆ

ಬ್ಯಾಂಕಾಕ್ (ಎಪಿ): ಮ್ಯಾನ್ಮಾರ್‌ನಲ್ಲಿ ಇತ್ತೀಚೆಗೆ ಸಂಭವಿಸಿದ ಭೂಕಂಪದಲ್ಲಿ ಮೃತಪಟ್ಟವರ ಸಂಖ್ಯೆ 2,065ಕ್ಕೆ ಏರಿದ್ದು, ಅವಶೇಷಗಳಡಿ ಸಿಲುಕಿದ ಮೃತದೇಹಗಳನ್ನು ಹೊರತೆಗೆಯುವ ಕಾರ್ಯಾಚರಣೆ ಮುಂದುವರಿದಿದೆ ಎಂದು ಸೇನೆ ಸೋಮವಾರ ತಿಳಿಸಿದೆ.

ಈ ಕುರಿತು ಸರ್ಕಾರಿ ಸ್ವಾಮ್ಯದ ಎಂಆರ್‌ಟಿವಿ ವಾಹಿನಿಗೆ ಪ್ರತಿಕ್ರಿಯಿಸಿದ ಸರ್ಕಾರದ ವಕ್ತಾರ ಮೇಜರ್ ಜನರಲ್ ಜಾವ್ ಮಿನ್ ಟುನ್, ‘ಭೂಕಂಪದಲ್ಲಿ 3,900ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, 270 ಮಂದಿ ನಾಪತ್ತೆಯಾಗಿದ್ದಾರೆ’ ಎಂದು ಹೇಳಿದರು.

ಶುಕ್ರವಾರ ಸಂಭವಿಸಿದ ಭೂಕಂಪ ದಿಂದ 60 ಮಸೀದಿಗಳು ನೆಲಸಮವಾ ಗಿದ್ದು, ರಂಜಾನ್ ಪವಿತ್ರ ಮಾಸದ ಪ್ರಾರ್ಥನೆ ಸಲ್ಲಿಸುತ್ತಿದ್ದ 700 ಮಂದಿ ಮೃತಪಟ್ಟಿದ್ದಾರೆ ಎಂದು ಮ್ಯಾನ್ಮಾರ್ ಮುಸ್ಲಿಂ ನೆಟ್‌ವರ್ಕ್‌ ಸದಸ್ಯ ಟುನ್ ಕೀ ಹೇಳಿದ್ದಾರೆ.

ಈ ಅವಘಡದಲ್ಲಿ ಸಿಲುಕಿದ್ದವರ ಪೈಕಿ 70 ಮಂದಿಯನ್ನು ರಕ್ಷಿಸಲಾಗಿದೆ. ಆದರೆ, 50 ಮಂದಿ ಮೃತಪಟ್ಟಿದ್ದು, 150 ಮಂದಿಯ ಲೆಕ್ಕ ಈವರೆಗೆ ಸಿಕ್ಕಿಲ್ಲ ಎಂದು ರಕ್ಷಣಾ ಕಾರ್ಯಾಚರಣೆ ಕೈಗೊಂಡ ಸಿಬ್ಬಂದಿ ಹೇಳಿದರು.

ರಫಾ ತೊರೆಯಿರಿ: ಇಸ್ರೇಲ್ ಆದೇಶ

ದೀರ್ ಅಲ್-ಬಲಾಹ್ (ಎಪಿ): ರಫಾದಲ್ಲಿನ ನಾಗರಿಕರು ಸ್ಥಳಾಂತರಗೊಳ್ಳುವಂತೆ ಇಸ್ರೇಲ್ ಸೇನೆ ಸೋಮವಾರ ಆದೇಶಿಸಿದ್ದು, ಗಾಜಾಪಟ್ಟಿಯ ದಕ್ಷಿಣ ಭಾಗದ ನಗರದಲ್ಲಿ ಮತ್ತೊಂದು ಬೃಹತ್ ಕಾರ್ಯಾಚರಣೆ ನಡೆಸುವ ಮುನ್ಸೂಚನೆ ಇದಾಗಿದೆ.

ಹಮಾಸ್‌ನೊಂದಿಗಿನ ಕದನ ವಿರಾಮವನ್ನು ಕೊನೆಗೊಳಿಸಿರುವ ಇಸ್ರೇಲ್, ಗಾಜಾಪಟ್ಟಿ ಮೇಲಿನ ದಾಳಿಯನ್ನು ಮಾರ್ಚ್ ಆರಂಭದಿಂದ ತೀವ್ರಗೊಳಿಸಿದೆ. ಇದೀಗ ಮುಸ್ಲಿಮರ ಪವಿತ್ರ ಹಬ್ಬವಾದ ಈದ್ ಉಲ್ ಫಿತ್ರ್ ದಿನದಂದು ಸ್ಥಳಾಂತರಕ್ಕೆ ಆದೇಶಿಸಿದೆ.

ಇಸ್ರೇಲ್‌ನ 59 ಒತ್ತೆಯಾಳುಗಳನ್ನು ಹಮಾಸ್ ಬಿಡುಗಡೆಗೊಳಿಸುವವರೆಗೆ ಸೇನಾ ಕಾರ್ಯಾಚರಣೆಯನ್ನು ನಡೆಸುವುದಾಗಿ ಇಸ್ರೇಲ್ ಹೇಳಿದೆ. ಹಮಾಸ್ ಬಂಡುಕೋರರು ನಿಶಸ್ತ್ರರಾಗಿ ಆ ಪ್ರದೇಶವನ್ನು ತೊರೆಯಬೇಕೆಂದು ಇಸ್ರೇಲ್ ಆಗ್ರಹಿಸಿದೆ.

‘ಯುದ್ಧದ ಬಳಿಕ ಗಾಜಾದ ಭದ್ರತೆಯ ಜವಾಬ್ದಾರಿಯನ್ನು ಇಸ್ರೇಲ್ ವಹಿಸಿಕೊಳ್ಳುತ್ತದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸಲಹೆಯಂತೆ ಗಾಜಾ ನಾಗರಿಕರನ್ನು ನೆರೆಯ ದೇಶಗಳಿಗೆ ಕಳುಹಿಸಲಾಗುತ್ತದೆ’ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.


ಇಂದಿನಿಂದ ಏನೆಲ್ಲಾ ಬದಲಾವಣೆ?

ಒಂದನೇ ಪುಟದಿಂದ...

ಐಟಿಆರ್–ಯು ಸಲ್ಲಿಕೆ ಅವಧಿ ವಿಸ್ತರಣೆ

ಆದಾಯ ತೆರಿಗೆಯ ಪರಿಷ್ಕೃತ ವಿವರ ಸಲ್ಲಿಕೆ (ಐಟಿಆರ್–ಯು) ಅವಧಿಯನ್ನು ವಿಸ್ತರಿಸಲಾಗಿದೆ. ಈ ಮೊದಲು ಮೌಲ್ಯಮಾಪನ ವರ್ಷದ ಹಿಂದಿನ 24 ತಿಂಗಳುಗಳಿಗೆ ಸೀಮಿತಗೊಂಡಿತ್ತು. ಇದನ್ನು 48 ತಿಂಗಳಿಗೆ ವಿಸ್ತರಿಸಲಾಗಿದೆ. ತೆರಿಗೆದಾರರು ತೆರಿಗೆ ಬಾಧ್ಯತೆ ಪೂರೈಸಿಕೊಳ್ಳಲು ಇದು ನೆರವಾಗಲಿದೆ.

ಮನೆ ಮಾಲೀಕರಿಗೆ ಅನುಕೂಲ



ಈ ಮೊದಲು ಒಂದು ಸ್ವಂತ ಮನೆ ಇದ್ದವರಿಗೆ ತೆರಿಗೆ ವಿನಾಯಿತಿ ಲಭಿಸುತ್ತಿತ್ತು. ಇದನ್ನು ಈಗ ಎರಡು ಮನೆಗಳಿಗೆ ವಿಸ್ತರಿಸಲಾಗಿದೆ. ಮನೆಯ ವಾರ್ಷಿಕ ಮೌಲ್ಯವನ್ನು ಶೂನ್ಯ ಎಂದು ಪರಿಗಣಿಸಲಾಗುತ್ತದೆ. ಬಾಡಿಗೆ ಮೇಲಿನ ಟಿಡಿಎಸ್ ಮಿತಿಯು ಈ ಮೊದಲು ₹2.40 ಲಕ್ಷ ಇತ್ತು. ಇದನ್ನು ₹6 ಲಕ್ಷಕ್ಕೆ ಪರಿಷ್ಕರಿಸಲಾಗಿದೆ. ಇದರಿಂದ ಮನೆ ಮಾಲೀಕರಿಗೆ ಅನುಕೂಲವಾಗಲಿದೆ.

ನವೋದ್ಯಮಕ್ಕೆ ಬಲ



2030ರ ಏಪ್ರಿಲ್ 1ಕ್ಕಿಂತ ಮೊದಲು ನೋಂದಣಿಯಾದ ನವೋದ್ಯಮಗಳಿಗೆ ಶೇ 100ರಷ್ಟು ತೆರಿಗೆ ರಿಯಾಯಿತಿ ಘೋಷಿಸಲಾಗಿದೆ. ಅಂದರೆ ಹತ್ತು ವರ್ಷಗಳಲ್ಲಿ ಮೂರು ವರ್ಷದ ಆದಾಯಕ್ಕೆ ತೆರಿಗೆ ವಿನಾಯಿತಿ ಸಿಗಲಿದೆ. ನವೋದ್ಯಮ ವಲಯಕ್ಕೆ ಉತ್ತೇಜನ ನೀಡುವುದು ಇದರ ಉದ್ದೇಶ.

ಜಿಎಸ್‌ಟಿ ಬದಲಾವಣೆ



ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆಯಲ್ಲಿಯೂ ಹಲವು ಬದಲಾವಣೆ ಮಾಡಲಾಗಿದೆ. ಇ-ವೇ ಬಿಲ್, ಇ-ಇನ್‌ವಾಯ್ಸ್, ರಿಟರ್ನ್ಸ್ ಸಲ್ಲಿಕೆ ಪ್ರಕ್ರಿಯೆ ಮತ್ತು ವ್ಯಾಜ್ಯ ಇತ್ಯರ್ಥ ಪ್ರಕ್ರಿಯೆಗಳನ್ನು ಸರಳೀಕರಣ ಮಾಡಲಾಗಿದೆ.

ವಿಮಾ ಏಜೆಂಟ್‌ಗೆ ಸೌಲಭ್ಯ



ವಿಮಾ ಏಜೆಂಟ್‌ಗಳಿಗೆ ಈ ಮೊದಲು ₹15 ಸಾವಿರದವರೆಗಿನ ವಿಮಾ ಕಮಿಷನ್‌ಗೆ ಟಿಡಿಎಸ್ ವಿನಾಯಿತಿ ಇತ್ತು. ಸದ್ಯ ಇದನ್ನು ₹20 ಸಾವಿರಕ್ಕೆ ಹೆಚ್ಚಿಸಲಾಗಿದೆ. ಮ್ಯೂಚುವಲ್ ಫಂಡ್ ಮತ್ತು ಷೇರುಗಳಲ್ಲಿನ ಲಾಭಾಂಶ ಹಾಗೂ ಆದಾಯದ ಮೇಲಿನ ಟಿಡಿಎಸ್ ಮಿತಿಯನ್ನು ₹5 ಸಾವಿರದಿಂದ ₹10 ಸಾವಿರಕ್ಕೆ ಹೆಚ್ಚಿಸಲಾಗಿದೆ.

ಯುಲಿಪ್ ತೆರಿಗೆ

ಯೂನಿಟ್ ಲಿಂಕ್ಡ್ ಇನ್ಶೂರೆನ್ಸ್‌ನ (ಯುಲಿಪ್) ವಾರ್ಷಿಕ ಪ್ರೀಮಿಯಂ ಮಿತಿಯು ₹2.5 ಲಕ್ಷ ದಾಟಿದರೆ ಅದನ್ನು ಬಂಡವಾಳ ಲಾಭವೆಂದು ಪರಿಗಣಿಸಲಾಗುತ್ತದೆ. ಇದಕ್ಕೆ ಆದಾಯ ತೆರಿಗೆ ಕಾಯ್ದೆ ಸೆಕ್ಷನ್ 112ಎ ಅಡಿ ತೆರಿಗೆ ಅನ್ವಯವಾಗಲಿದೆ.

ಎನ್‌ಪಿಎಸ್ ವಾತ್ಸಲ್ಯ



ಮಕ್ಕಳ ಭವಿಷ್ಯಕ್ಕಾಗಿ ಹೆತ್ತವರೇ ಪಿಂಚಣಿ ಖಾತೆ ತೆರೆದು ಹಣ ಉಳಿತಾಯ ಮಾಡುವ ಯೋಜನೆ ಇದಾಗಿದೆ. ಬಜೆಟ್ ಅಧಿವೇಶನದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಇದರಡಿ ಹೂಡಿಕೆ ಮಾಡುವ ಹಣಕ್ಕೆ ತೆರಿಗೆ ಕಡಿತದ ಪ್ರಯೋಜನ ಕುರಿತು ಪ್ರಸ್ತಾಪಿಸಿದ್ದಾರೆ. ಸಂಬಳ ಪಡೆಯುವ ನೌಕರರು ಮತ್ತು ಇತರೆ ತೆರಿಗೆದಾರರಿಗೆ ₹50 ಸಾವಿರದವರೆಗೆ ಹೆಚ್ಚುವರಿ ತೆರಿಗೆ ಕಡಿತ ಪ್ರಯೋಜನ ಲಭಿಸಲಿದೆ.

ಕಾರಿನ ಬೆಲೆ ಏರಿಕೆ



ಮಾರುತಿ ಸುಜುಕಿ ಇಂಡಿಯಾ (ಶೇ 4), ಹುಂಡೈ ಮೋಟರ್ ಇಂಡಿಯಾ (ಶೇ 3), ಬಿಎಂಡಬ್ಲ್ಯು (ಶೇ 3), ರೆನೊ ಇಂಡಿಯಾ (ಶೇ 2) ಟಾಟಾ ಮೋಟರ್ಸ್ (ಶೇ 2) ಕಾರುಗಳ ಬೆಲೆಯು ಹೆಚ್ಚಳವಾಗಲಿದೆ. ಕಿಯಾ ಇಂಡಿಯಾ ಮತ್ತು ಹೋಂಡಾ ಕಾರ್ಸ್ ಇಂಡಿಯಾ ಕೂಡ ದರ ಹೆಚ್ಚಳಕ್ಕೆ ನಿರ್ಧರಿಸಿವೆ.

ರಿವಾರ್ಡ್ ಪಾಯಿಂಟ್



ಎಸ್‌ಬಿಐ ಕಾರ್ಡ್ ತನ್ನ ರಿವಾರ್ಡ್ ಪಾಯಿಂಟ್‌ಗಳಲ್ಲಿ ಹಲವು ಬದಲಾವಣೆ ಮಾಡಿದೆ. ಎಸ್‌ಬಿಐ ಪ್ಲಾಟಿನಂ ಕ್ರೆಡಿಟ್ ಕಾರ್ಡ್ ಮೂಲಕ ಖರ್ಚು ಮಾಡುವ ಪ್ರತಿ ₹100ಕ್ಕೆ 15ರಿಂದ 5ಕ್ಕೆ ರಿವಾರ್ಡ್ ಪಾಯಿಂಟ್ ತಗ್ಗಿಸಿದೆ. ಏರ್ ಇಂಡಿಯಾ ಎಸ್‌ಬಿಐ ಸಿಗ್ನೇಚರ್ ಕ್ರೆಡಿಟ್ ಕಾರ್ಡ್ ಬಳಸಿ ಖರ್ಚು ಮಾಡುವ ಪ್ರತಿ ₹100ಕ್ಕೆ ಲಭಿಸುತ್ತಿದ್ದ ರಿವಾರ್ಡ್ ಪಾಯಿಂಟ್‌ಗಳನ್ನು 30ರಿಂದ 10ಕ್ಕೆ ಇಳಿಸಿದೆ.

ಐಡಿಎಫ್‌ಸಿ ಫಸ್ಟ್ ಬ್ಯಾಂಕ್, ಎಸ್‌ಬಿಐನ ಕ್ಲಬ್ ವಿಸ್ತಾರಾ ಕ್ರೆಡಿಟ್ ಕಾರ್ಡ್, ಕ್ಲಬ್ ವಿಸ್ತಾರಾ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಕಾರ್ಡ್‌ನ ಪ್ರಯೋಜನಗಳು ಸ್ಥಗಿತಗೊಳ್ಳಲಿವೆ. ಆದರೂ, ಈ ಕಾರ್ಡ್ ಬಳಸುವ ಗ್ರಾಹಕರಿಗೆ 2026ರ ಮಾರ್ಚ್ 31ರ ವರೆಗೆ ಮಹಾರಾಜ ಪಾಯಿಂಟ್ ದೊರೆಯಲಿದೆ.

ಯುಪಿಐ ನಿಯಮ ಬದಲು

ಏಕೀಕೃತ ಪಾವತಿ ವ್ಯವಸ್ಥೆಯ (ಯುಪಿಐ) ಭದ್ರತೆಯನ್ನು ಇನ್ನಷ್ಟು ಹೆಚ್ಚಿಸುವುದಕ್ಕಾಗಿ ರಾಷ್ಟ್ರೀಯ ಪಾವತಿ ನಿಗಮವು (ಎನ್‌ಪಿಸಿಐ) ಹೊಸ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಮಂಗಳವಾರದಿಂದ ಜಾರಿಗೆ ಬರಲಿವೆ.

UPI UNIFIED PAYMENTS INTERFACE

ಅದರ ಪ್ರಕಾರ, ನಿಷ್ಕ್ರಿಯವಾಗಿರುವ ಮೊಬೈಲ್ ಸಂಖ್ಯೆಯಿಂದ ಯುಪಿಐ ಪಾವತಿ ಇನ್ನು ಮುಂದೆ ಸಾಧ್ಯವಿಲ್ಲ. ಯುಪಿಐ ಖಾತೆಗೆ ಜೋಡಿಸಿರುವ ಮೊಬೈಲ್ ಸಂಖ್ಯೆ ದೀರ್ಘ ಸಮಯದಿಂದ ನಿಷ್ಕ್ರಿಯವಾಗಿರುವುದು ಹಣಕಾಸು ಭದ್ರತೆಗೆ ಅಪಾಯಕಾರಿಯಾಗಬಹುದು. ಹೀಗಾಗಿ, ಅಂತಹ ಮೊಬೈಲ್ ಸಂಖ್ಯೆಗಳನ್ನು ಜೋಡಿಸಿರುವ ಯುಪಿಐ ಪಾವತಿಗೆ ಅವಕಾಶ ನೀಡದಂತೆ ಎನ್‌ಪಿಸಿಐ ಬ್ಯಾಂಕುಗಳು ಸೇರಿದಂತೆ ಫೋನ್‌ಪೇ, ಗೂಗಲ್‌ಪೇನಂತಹ ಯುಪಿಐ ಪಾವತಿ ಒದಗಿಸುವ ಸಂಸ್ಥೆಗಳಿಗೆ ಸೂಚಿಸಿದೆ.

ಮಹಿಳೆಯ ಮೂಲಭೂತ ಹಕ್ಕುಗಳಿಗೆ, ಸಹಜನ್ಯಾಯದ ಮೂಲತತ್ವಗಳಿಗೆ ವಿರುದ್ಧ: ಹೈಕೋರ್ಟ್

‘ಕನ್ಯತ್ವ ಪರೀಕ್ಷೆಗೆ ಒತ್ತಾಯ ಅಸಾಂವಿಧಾನಿಕ’

ಬಿಲಾಸಪುರ (ಪಿಟಿಐ): ದೇಶದ ಸಂವಿಧಾನದ 21ನೇಯ ವಿಧಿಯು ಘನತೆಯ ಜೀವನವನ್ನು ಮೂಲಭೂತ ಹಕ್ಕನ್ನಾಗಿ ನೀಡಿದೆ. ಹೀಗಾಗಿ, ಮಹಿಳೆಯು ಕನ್ಯತ್ವ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ಒತ್ತಾಯ ಮಾಡುವಂತಿಲ್ಲ ಎಂದು ಛತ್ತೀಸಗಢ ಹೈಕೋರ್ಟ್ ಹೇಳಿದೆ.

ಸಂವಿಧಾನದ 21ನೇಯ ವಿಧಿಯು ಮೂಲಭೂತ ಹಕ್ಕುಗಳ ಹೃದಯ ಇದ್ದಂತೆ ಎಂದು ಹೇಳಿರುವ ಹೈಕೋರ್ಟ್, ಕನ್ಯತ್ವ ಪರೀಕ್ಷೆಗೆ ಅನುಮತಿ ನೀಡುವುದು ಮಹಿಳೆಯ ‘ಮೂಲಭೂತ ಹಕ್ಕುಗಳಿಗೆ, ಸಹಜ ನ್ಯಾಯದ ಮೂಲಭೂತ ತತ್ವಗಳಿಗೆ’ ವಿರುದ್ಧ ಎಂದು ಸ್ಪಷ್ಟಪಡಿಸಿದೆ.

ತನ್ನ ಪತ್ನಿಯು ಬೇರೊಬ್ಬನ ಜೊತೆ ಅಕ್ರಮ ಸಂಬಂಧ ಹೊಂದಿದ್ದಾಳೆ, ಆಕೆಯ ಕನ್ಯತ್ವ ಪರೀಕ್ಷೆಗೆ ಆದೇಶಿಸಬೇಕು ಎಂದು ಪತಿಯೊಬ್ಬ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅರವಿಂದ ಕುಮಾರ್ ವರ್ಮಾ ತಮ್ಮ ಆದೇಶದಲ್ಲಿ ಈ ಮಾತುಗಳನ್ನು ಹೇಳಿದ್ದಾರೆ.

ಪತಿಯು ನಪುಂಸಕ ಎಂದು ದೂರಿದ್ದ ಪತ್ನಿ, ಆತನ ಜೊತೆ ವೈವಾಹಿಕ ಜೀವನ ನಡೆಸಲು ನಿರಾಕರಿಸಿದ್ದಳು. ನಪುಂಸಕ ಎಂಬ ಆರೋಪವನ್ನು ಅಲ್ಲಗಳೆಯಬೇಕು ಎಂದಾದರೆ ಅರ್ಜಿದಾರ ಪತಿಯು ಸಂಬಂಧಪಟ್ಟ ವೈದ್ಯಕೀಯ ಪರೀಕ್ಷೆಗೆ ಗುರಿಯಾಗಬಹುದು ಅಥವಾ ಬೇರೆ ಯಾವುದಾದರೂ ಸಾಕ್ಷ್ಯ ಸಲ್ಲಿಸಬಹುದು ಎಂದು ಕೋರ್ಟ್ ಹೇಳಿದೆ. ಆದೇಶವನ್ನು ಜನವರಿ 9ರಂದು ನೀಡಲಾಗಿತ್ತು, ಈಚೆಗೆ ಅದನ್ನು ಸಾರ್ವಜನಿಕರಿಗೆ ಲಭ್ಯವಾಗಿಸಲಾಗಿದೆ.

ಪತ್ನಿಯನ್ನು ಕನ್ಯತ್ವ ಪರೀಕ್ಷೆಗೆ ಒಳಪಡಿಸಬೇಕು ಎಂದು ಪತಿ ಕೋರಿರುವುದು ಅಸಾಂವಿಧಾನಿಕ ಎಂದು ಕೋರ್ಟ್ ಹೇಳಿದೆ.

‘ಸಂವಿಧಾನದ 21ನೇಯ ವಿಧಿಯು ಬದುಕಿನ ಸ್ವಾತಂತ್ರ್ಯವನ್ನು ಮಾತ್ರವೇ ನೀಡುವುದಿಲ್ಲ. ಅದು ಘನತೆಯೊಂದಿಗೆ ಬದುಕುವ ಹಕ್ಕನ್ನೂ ನೀಡುತ್ತದೆ. ಇದು ಮಹಿಳೆಯರ ಪಾಲಿಗೆ ಬಹಳ ಮಹತ್ವದ್ದು’ ಎಂದು ಆದೇಶದಲ್ಲಿ ಹೇಳಲಾಗಿದೆ.

26 ವಾರದ ಭ್ರೂಣ ತೆಗೆಸಿಕೊಳ್ಳಲು ಅನುಮತಿ

ಮುಂಬೈ (ಪಿಟಿಐ): ಎಲುಬುಗಳಿಗೆ ಸಂಬಂಧಿಸಿದ ತೊಂದರೆ ಇದ್ದ 26 ವಾರದ ಭ್ರೂಣವನ್ನು ತೆಗೆಸಿಕೊಳ್ಳಲು 32 ವರ್ಷದ ಮಹಿಳೆಯೊಬ್ಬರಿಗೆ ಬಾಂಬೆ ಹೈಕೋರ್ಟ್ ಅನುಮತಿ ನೀಡಿದೆ. ‘ಇದು ಮಹಿಳೆಯೊಬ್ಬರ ಸಂತಾನೋತ್ಪತ್ತಿ ಸ್ವಾತಂತ್ರ್ಯ ಮತ್ತು ದೇಹದ ಮೇಲಿನ ಮಹಿಳೆಯ ಹಕ್ಕು’ ಎಂದು ಕೋರ್ಟ್ ತೀರ್ಪು ನೀಡಿದೆ.

ಮಹಿಳೆ ತನ್ನಿಚ್ಛೆಯ ಆಸ್ಪತ್ರೆ ಆಯ್ಕೆ ಮಾಡಿಕೊಳ್ಳಲು ಅನುಮತಿ ನೀಡಿದೆ. ಆ ಆಸ್ಪತ್ರೆಯು ವೈದ್ಯಕೀಯ ಗರ್ಭಪಾತ ಕಾಯ್ದೆ ಅನ್ವಯ ತೆಗೆದುಕೊಳ್ಳಬೇಕಾದ ಎಲ್ಲ ಕ್ರಮಗಳನ್ನು ತೆಗೆದುಕೊಂಡಿರುವ ಬಗ್ಗೆ ಪ್ರಮಾಣಪತ್ರ ಸಲ್ಲಿಸಬೇಕು ಎಂದೂ ನ್ಯಾಯಾಲಯ ಹೇಳಿದೆ. ನ್ಯಾಯಮೂರ್ತಿಗಳಾದ ರೇವತಿ ಮೋಹಿತೆ ಡೆರೆ ಹಾಗೂ ನೀಲಾ ಗೋಖಲೆ ಅವರು ಈ ತೀರ್ಪು ನೀಡಿದ್ದಾರೆ.

‘ಸೋಂಕಿತರಿಗೆ ಬಡ್ತಿ ನಿರಾಕರಿಸುವಂತಿಲ್ಲ’

ನವದೆಹಲಿ (ಪಿಟಿಐ): ‘ಎಚ್‌ಐವಿ ಸೋಂಕಿತರಿಗೆ ಉದ್ಯೋಗದಲ್ಲಿ ಬಡ್ತಿ ನೀಡದೇ ಅಥವಾ ಕೆಲಸಕ್ಕೆ ನೇಮಕ ಮಾಡಿಕೊಳ್ಳದೇ ಇರುವಂತಿಲ್ಲ. ಎಚ್‌ಐವಿ ಸೋಂಕಿತರನ್ನೂ ಉದ್ಯೋಗದಲ್ಲಿ ಅದ್ಯತೆ ನೀಡಬೇಕು’ ಎಂದು ದೆಹಲಿ ಹೈಕೋರ್ಟ್ ತೀರ್ಪು ನೀಡಿದೆ.

ಬಿಎಸ್‌ಎಫ್ ಮತ್ತು ಕೇಂದ್ರ ಮೀಸಲು ಪಡೆಗಳಲ್ಲಿ ಇಬ್ಬರು ಕಾನ್‌ಸ್ಟೆಬಲ್‌ಗಳಿಗೆ ಬಡ್ತಿ ನಿರಾಕರಿಸಲಾಗಿತ್ತು. ಎಚ್‌ಐವಿ ಸೋಂಕಿತನನ್ನು ಬಿಎಸ್‌ಎಫ್‌ನಲ್ಲಿ ಪ್ರೊಬೆಷನರಿ ಕಾನ್‌ಸ್ಟೆಬಲ್ ಆಗಿದ್ದ ಎಚ್‌ಐವಿ ಸೋಂಕಿತ ವ್ಯಕ್ತಿಗೆ 2023ರಲ್ಲಿ ನೇಮಕಾತಿ ನಿರಾಕರಿಸಲಾಗಿತ್ತು. ಈ ಮೂವರು ಕೋರ್ಟ್ ಮೆಟ್ಟಿಲೇರಿದ್ದರು. ಈ ಅರ್ಜಿಗಳ ಸಂಬಂಧ ನ್ಯಾಯಾಲಯವು ಮಾರ್ಚ್ 28ರಂದು ತೀರ್ಪು ನೀಡಿದೆ.

‘ಎಚ್‌ಐವಿ ಸೋಂಕಿತರ ಕಾರಣಕ್ಕೆ ಬಡ್ತಿ ಹಾಗೂ ನೇಮಕವನ್ನು ನಿರಾಕರಿಸಿದ್ದು, ಎಚ್‌ಐವಿ ಮತ್ತು ಏಡ್ಸ್ (ತಡೆ ಮತ್ತು ನಿಯಂತ್ರಣ) ಕಾಯ್ದೆಗೆ (ಎಚ್‌ಐವಿ ಇರುವ ಕಾರಣಕ್ಕೆ ವ್ಯಕ್ತಿಯ ಕುರಿತು ತಾರತಮ್ಯ ಧೋರಣೆ ಇರಬಾರದು ಎಂದು ಕಾಯ್ದೆ ಹೇಳುತ್ತದೆ) ವಿರುದ್ಧವಾಗಿದೆ’ ಎಂದು ನ್ಯಾಯಮೂರ್ತಿಗಳಾದ ನವೀನ್ ಚಾವ್ಲಾ ಹಾಗೂ ಶೈಲಿಂದರ್ ಕೌರ್ ಸೂಚಿಸಿದರು.

ನಿತ್ರಾಣಗೊಂಡ ಟೆಕಿಗಳು

ಹೈದರಾಬಾದ್: ಭಾರತದ ಐಟಿ ಕ್ಷೇತ್ರವು ನಿತ್ರಾಣ ಎಂಬ ಸಾಂಕ್ರಾಮಿಕ ರೋಗದಿಂದ ಬಳಲುತ್ತಿದೆ. ಯಾವಾಗಲೂ ಆನ್‌ಲೈನ್‌ನಲ್ಲಿಯೇ ಇರಬೇಕು ಎಂದು ಕೋವಿಡ್ ಸಾಂಕ್ರಾಮಿಕದ ಬಳಿಕ ಎಲ್ಲ ಕಂಪನಿಗಳು ತಮ್ಮ ಉದ್ಯೋಗಿಗಳಿಂದ ನಿರೀಕ್ಷಿಸುತ್ತಿವೆ. ಕಾನೂನು ಹೇಳುವುದಕ್ಕಿಂತಲೂ ಹೆಚ್ಚಿನ ಕೆಲಸದ ಅವಧಿಯಲ್ಲಿ ಐಟಿ ಉದ್ಯೋಗಿಗಳು ದುಡಿಯುತ್ತಿದ್ದಾರೆ. ಇದು ಅವರಲ್ಲಿ ಒತ್ತಡವನ್ನು ಹೆಚ್ಚಿಸಿದೆ, ಅವರನ್ನು ನಿತ್ರಾಣಗೊಳಿಸಿದೆ. ಇನ್ಫೊಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಹಾಗೂ ಎಲ್ ಆ್ಯಂಡ್ ಟಿ ಮುಖ್ಯಸ್ಥ ಎಸ್.ಎನ್. ಸುಬ್ರಹ್ಮಣ್ಯಂ ಅವರನ್ನು ಬಹಿರಂಗವಾಗಿಯೇ ಟೆಕಿಗಳು ಬೈಯುತ್ತಿದ್ದಾರೆ. ‘ಬ್ಲೈಂಡ್’ ಎನ್ನುವ ಆ್ಯಪ್‌ವೊಂದು ‘ಕೆಲಸದ ಒತ್ತಡವನ್ನು ಅನುಭವಿಸುತ್ತಿದ್ದೀರಾ’ ಎಂಬ ಪ್ರಶ್ನೆಯನ್ನಿಟ್ಟುಕೊಂಡು ಈ ಸಮೀಕ್ಷೆ ನಡೆಸಿದೆ.

25%	72%	83%	68%	75%
ವಾರದಲ್ಲಿ 70 ಗಂಟೆಗಿಂತ ಅಧಿಕ ಅವಧಿಯಲ್ಲಿ ಕೆಲಸ ಮಾಡುತ್ತಿರುವವರು	ವಾರದಲ್ಲಿ 48 ಗಂಟೆ ಕೆಲಸ ಎಂಬ ನಿಯಮವನ್ನು ಮೀರಿ ಹೆಚ್ಚಿನ ಅವಧಿಗೆ ನಿರಂತರವಾಗಿ ಕೆಲಸ ಮಾಡುತ್ತಿರುವವರು	ಅಧಿಕ ಕೆಲಸದ ಅವಧಿಯಿಂದಾಗಿ ನಿತ್ರಾಣಗೊಂಡವರು	ಕೆಲಸದ ಅವಧಿ ಮುಗಿದ ಬಳಿಕವೂ ಹೆಚ್ಚುವರಿ ಕೆಲಸ ಮಾಡಲೇಬೇಕು ಎಂಬ ಹೊಣೆಗಾರಿಕೆ ತಮ್ಮ ಮೇಲಿದೆ ಎಂದು ಭಾವಿಸಿದವರು	ಅಧಿಕ ಅವಧಿಗೆ ಕೆಲಸ ಮಾಡಲು ಬಹಳ ಒತ್ತಡ ಎನಿಸುತ್ತದೆ ಎನ್ನುವವರು

1,450
ಸಮೀಕ್ಷೆಯಲ್ಲಿ ಪಾಲ್ಗೊಂಡ ಟೆಕಿಗಳು
ಸಮೀಕ್ಷೆ ನಡೆಸಿದ್ದು ಯಾವಾಗ: ಮಾರ್ಚ್ 12ರಿಂದ 19



ಕೆಲಸದ ಅವಧಿ ಬಗ್ಗೆ ಅವರಿಗೆ (ನಾರಾಯಣಮೂರ್ತಿ ಮತ್ತು ಸುಬ್ರಹ್ಮಣ್ಯಂ) ಅಂದೆಂಥಾ ಗೀಳು ಎಂದು ತಿಳಿಯದು. ಎಂಥ ಮೂರ್ಖರು ಅವರು
ಎನ್‌ವಿಐಡಿಐಎ ಕಂಪನಿಯ ಉದ್ಯೋಗಿ

ಅಧಿಕ ಕೆಲಸದ ಅವಧಿಯು ಉತ್ಪಾದಕತೆಯನ್ನು ಹೆಚ್ಚಿಸುವುದಿಲ್ಲ. ಕಠಿಣ ಪರಿಶ್ರಮದಿಂದ ಕೆಲಸ ಮಾಡುತ್ತಿದ್ದೇವೆ ಎನ್ನುವ ಭ್ರಮೆಯನ್ನು ಸೃಷ್ಟಿಸುತ್ತದೆಯಷ್ಟೇ
ಒರಾಕಲ್ ಕಂಪನಿ ಉದ್ಯೋಗಿ

ಏನಿದು ಬ್ಲೈಂಡ್ ಆ್ಯಪ್?

ಜಗತ್ತಿನಾದ್ಯಂತ ಇರುವ ವಿವಿಧ ಕಂಪನಿ ಉದ್ಯೋಗಿಗಳು ಮತ್ತು ಕೈಗಾರಿಕೆಗಳಲ್ಲಿ ಕೆಲಸ ಮಾಡುವವರು ಅಭಿಪ್ರಾಯಗಳನ್ನು ಹಂಚಿಕೊಳ್ಳಲು, ಸಮಸ್ಯೆಗಳನ್ನು ಚರ್ಚಿಸಲು ಇರುವ ವೇದಿಕೆಯೇ ‘ಬ್ಲೈಂಡ್’ ಆ್ಯಪ್. ಮೆಟಾ, ಯೂಬರ್, ಪೇ ಪಾಲ್, ಕ್ಯಾಪಿಕಲ್ ಒನ್, ಮೈಕ್ರೊಸಾಫ್ಟ್ ಕಂಪನಿಗಳಲ್ಲಿ ಕೆಲಸ ಮಾಡುವ ಸುಮಾರು 1.2 ಕೋಟಿ ಉದ್ಯೋಗಿಗಳು ಈ ಆ್ಯಪ್‌ನಲ್ಲಿ ಕ್ರಿಯಾಶೀಲರಾಗಿದ್ದಾರೆ. ಮೈಕ್ರೊಸಾಫ್ಟ್‌ನಲ್ಲಿ ಕೆಲಸ ಮಾಡುತ್ತಿರುವ ಭಾರತದ ಶೇ 70ರಷ್ಟು ಉದ್ಯೋಗಿಗಳು ಈ ಆ್ಯಪ್‌ನಲ್ಲಿದ್ದಾರೆ. ಅಮೆರಿಕದಲ್ಲಿ ಈ ಆ್ಯಪ್‌ನ ಕೇಂದ್ರ ಕಚೇರಿ ಇದೆ. ಮಾಹಿತಿ ಹಂಚಿಕೊಳ್ಳುವವರ ಗುರುತನ್ನು ಈ ಆ್ಯಪ್ ಬಹಿರಂಗಪಡಿಸುವುದಿಲ್ಲ.

‘ಮೆಡಿಕ್ಲೇಮ್ ಮೊತ್ತ ವೈದ್ಯಕೀಯ ವೆಚ್ಚದಿಂದ ಕಡಿತ ಮಾಡುವಂತಿಲ್ಲ’

ಮುಂಬೈ (ಪಿಟಿಐ): ಮೆಡಿಕ್ಲೇಮ್ ಪಾಲಿಸಿ ಅಡಿಯಲ್ಲಿ ವ್ಯಕ್ತಿಯೊಬ್ಬ ಪಡೆಯುವ ಹಣವನ್ನು, ಮೋಟಾರು ವಾಹನ ಕಾಯ್ದೆಯ ಅಡಿಯಲ್ಲಿ ವೈದ್ಯಕೀಯ ವೆಚ್ಚಗಳಿಗಾಗಿ ನೀಡುವ ಪರಿಹಾರ ಮೊತ್ತದಿಂದ ಕಡಿತ ಮಾಡಿಕೊಳ್ಳಲು ಅವಕಾಶ ಇಲ್ಲ ಎಂದು ಬಾಂಬೆ ಹೈಕೋರ್ಟ್ ಹೇಳಿದೆ.

ಹಕ್ಕುದಾರ ಹಾಗೂ ವಿಮಾ ಕಂಪನಿಯ ನಡುವಿನ ಗುತ್ತಿಗೆ ಒಪ್ಪಂದಕ್ಕೆ ಅನುಗುಣವಾಗಿ ಮೆಡಿಕ್ಲೇಮ್ ಪಾಲಿಸಿಯ ಅಡಿಯಲ್ಲಿ ಹಣ ನೀಡಲಾಗುತ್ತದೆ ಎಂದು ನ್ಯಾಯಮೂರ್ತಿಗಳಾದ ಎ.ಎಸ್. ಚಂದುರ್ಕರ್, ಮಿಲಿಂದ್ ಜಾಧವ್ ಮತ್ತು ಗೌರಿ ಗೋಡ್ಸೆ ಅವರು ಇರುವ ಪೂರ್ಣಪೀಠ ಹೇಳಿದೆ.

ಏಕಸದಸ್ಯ ಪೀಠಗಳು ಹಾಗೂ ವಿಭಾಗೀಯ ಪೀಠಗಳು ಈ ವಿಚಾರವಾಗಿ ಭಿನ್ನ ನಿಲುವು ತಾಳಿದ್ದ ಕಾರಣಕ್ಕೆ ವಿಷಯವನ್ನು ಪೂರ್ಣ ಪೀಠದ ಪರಿಶೀಲನೆಗೆ ಒಪ್ಪಿಸಲಾಗಿತ್ತು.

ಸುಪ್ರೀಂ ಕೋರ್ಟ್ ನೀಡಿರುವ ತೀರ್ಪುಗಳನ್ನು ಉಲ್ಲೇಖಿಸಿರುವ ಪೂರ್ಣ ಪೀಠವು, ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಮಂಡಳಿ ನ್ಯಾಯಸಮ್ಮತವಾಗಿ ಪರಿಹಾರ ವನ್ನು ಘೋಷಿಸುವ ಅಧಿಕಾರ ಹೊಂದಿದೆ ಹಾಗೂ ಆ ರೀತಿ ಘೋಷಿಸುವ ಹೊಣೆ ಹೊತ್ತಿದೆ ಎಂದು ವಿವರಿಸಿದೆ.

ವೈದ್ಯಕೀಯ ವೆಚ್ಚಗಳಿಗೆ ನೀಡಿದ್ದ ಹಣ ಮಾತ್ರವೇ ಅಲ್ಲದೆ, ಹೆಚ್ಚುವರಿಯಾಗಿ ಹಣಕಾಸಿನ ಪರಿಹಾರವನ್ನು ನೀಡಬೇಕು ಎಂದು ನ್ಯಾಯಮಂಡಳಿ ನೀಡಿದ್ದ ಆದೇಶವನ್ನು ಪ್ರಶ್ನಿಸಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂ.ಲಿ. ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆಯನ್ನು ಪೂರ್ಣ ಪೀಠ ನಡೆಸಿತ್ತು.

ಮೆಡಿಕ್ಲೇಮ್ ಪಾಲಿಸಿಯ ಭಾಗವಾಗಿ ಪಡೆಯುವ ವಿಮಾ ಹಣದಲ್ಲಿ ವೈದ್ಯಕೀಯ ವೆಚ್ಚಗಳು ಕೂಡ ಸೇರಿರುತ್ತವೆ ಎಂದು ಕಂಪನಿಯು ಹೇಳಿತ್ತು. ಇದರಿಂದಾಗಿ ಪರಿಹಾರವನ್ನು ಎರಡು ಬಾರಿ ನೀಡಿದಂತೆ ಆಗುತ್ತದೆ ಎಂದು ಅದು ವಾದಿಸಿತ್ತು.



ನೃತ್ಯ... ಗಣಗೌರ್ ಹಬ್ಬದ ಪ್ರಯುಕ್ತ ಜೈಪುರದಲ್ಲಿ ಸೋಮವಾರ ನಡೆದ ಸಾಂಪ್ರದಾಯಿಕ ಮೆರವಣಿಗೆಯಲ್ಲಿ ಕಲಾವಿದರು ಆಕರ್ಷಕ ನೃತ್ಯ ಪ್ರದರ್ಶನ ನೀಡಿದರು ಪಿಟಿಐ ಚಿತ್ರ

‘ರಷ್ಯಾಕ್ಕೆ ತಂತ್ರಜ್ಞಾನ ಮಾರಿದ ಎಚ್‌ಎಎಲ್’

ನವದೆಹಲಿ (ಪಿಟಿಐ): ಬ್ರಿಟನ್‌ನ ಎಚ್.ಆರ್. ಸ್ಮಿತ್ ಎಂಬ ಕಂಪನಿಯು ಟ್ರಾನ್ಸ್‌ಮಿಟರ್ಸ್, ಕಾಕ್‌ಪಿಟ್ ಸಲಕರಣೆ, ಆ್ಯಂಟೆನಾಗಳು ಸೇರಿದಂತೆ ಸೇನೆಗೆ ಸಂಬಂಧಿಸಿದ ಕೆಲವು ಸೂಕ್ಷ್ಮ ತಂತ್ರಜ್ಞಾನಗಳನ್ನು ಭಾರತದ ಸರ್ಕಾರಿ ಸ್ವಾಮ್ಯದ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ಗೆ (ಎಚ್‌ಎಎಲ್) ಮಾರಿದೆ. ಈ ತಂತ್ರಜ್ಞಾನ ಹಾಗೂ ಕೆಲವು ಸಲಕರಣೆಗಳ ಭಾಗಗಳನ್ನು ಎಚ್‌ಎಎಲ್ ಕಂಪನಿಯು ರಷ್ಯಾದ ಸರ್ಕಾರಿ ಸ್ವಾಮ್ಯದ ‘ರೊಸೋಬೊರೋನ್‌ಎಕ್ಸ್‌ಪೋರ್ಟ್’ ಕಂಪನಿಗೆ ಮಾರಾಟ ಮಾಡಿದೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ. ಈ ವರದಿಯನ್ನು ಭಾರತ ತಳ್ಳಿ ಹಾಕಿದೆ.

‘ಉಕ್ರೇನ್ ವಿರುದ್ಧ ಯುದ್ಧಕ್ಕೆ ಬಳಕೆ’

‘2023ರಿಂದ 2024ರವರೆಗೆ 20 ಲಕ್ಷ ಡಾಲರ್ (ಸುಮಾರು ₹17.11 ಕೋಟಿ) ಮೌಲ್ಯದ 118 ತಂತ್ರಜ್ಞಾನ ಹಾಗೂ ಸಲಕರಣೆಗಳನ್ನು ಸ್ಮಿತ್ ಕಂಪನಿಯು ಎಚ್‌ಎಎಲ್‌ಗೆ ನೀಡಿದೆ. ಈ ಕುರಿತ ತಾಂತ್ರಿಕ ವಿವರಗಳು ನೇರವಾಗಿ ರಷ್ಯಾಕ್ಕೆ ಹೋಗಿವೆ ಎನ್ನಲಾಗದು. ಆದರೆ, ಸ್ಮಿತ್ ಕಂಪನಿ ಎಚ್‌ಎಎಲ್‌ಗೆ ಸಲಕರಣೆ ನೀಡಿದ ಕೆಲವೇ ದಿನಗಳಲ್ಲಿ ಅದೇ ಸಲಕರಣೆ ಹೋಲುವ ಕೆಲವು ಭಾಗಗಳನ್ನು ರಷ್ಯಾಕ್ಕೆ ರವಾನಿಸಿರುವುದಕ್ಕೆ ಸಾಕ್ಷ್ಯ ದೊರೆತಿದೆ’ ಎಂದು ಪತ್ರಿಕೆ ವರದಿ ಮಾಡಿದೆ.

‘ಇವನ್ನು ರಷ್ಯಾವು ಉಕ್ರೇನ್ ವಿರುದ್ಧದ ಯುದ್ಧದಲ್ಲಿ ಬಳಸಿಕೊಳ್ಳುತ್ತಿದೆ ಎಂದು ಹೇಳಲಾಗುತ್ತಿದೆ. ಯುದ್ಧ ಆರಂಭವಾದ ಬಳಿಕ ಬ್ರಿಟನ್ ಹಾಗೂ ಅಮೆರಿಕವು ರಷ್ಯಾದ ಮೇಲೆ ಹಲವು ನಿರ್ಬಂಧಗಳನ್ನು ಹೇರಿದ್ದವು. ಕೆಲವೇ ದಿನಗಳಲ್ಲಿ 13 ತಂತ್ರಜ್ಞಾನಗಳನ್ನು ಎಚ್‌ಎಎಲ್ ರಷ್ಯಾಕ್ಕೆ ನೀಡಿದೆ. ಇದಕ್ಕೆ ರಷ್ಯಾವು 1.4 ಕೋಟಿ ಡಾಲರ್‌ಗೂ (ಸುಮಾರು ₹119.8 ಕೋಟಿ) ಅಧಿಕ ಹಣ ಪಾವತಿಸಿದೆ. ‘ತಾವು ಕಾನೂನು ರೀತಿಯೇ ವ್ಯಾಪಾರ ಮಾಡಿದ್ದೇವೆ’ ಎಂದು ಕಂಪನಿ ಹೇಳಿದೆ’ ಎಂದಿದೆ.

ತಪ್ಪು ಮಾಹಿತಿ: ಭಾರತ

‘ರಷ್ಯಾದ ಸೇನಾ ಸಂಸ್ಥೆಯೊಂದಿಗೆ ಎಚ್‌ಎಎಲ್ ಒಪ್ಪಂದ ಮಾಡಿಕೊಂಡಿದೆ ಎನ್ನುವುದು ತಪ್ಪು ಮಾಹಿತಿಯಾಗಿದೆ. ಇದು ದಾರಿತಪ್ಪಿಸುವ ವರದಿ, ರಾಜಕೀಯ ಸಂಕಥನವೊಂದಕ್ಕೆ ಒಗ್ಗಿಸಲಾಗಿದೆ. ವ್ಯಾಪಾರ ಕುರಿತು ಇರುವ ಎಲ್ಲ ಅಂತರರಾಷ್ಟ್ರೀಯ ನಿಯಮಗಳನ್ನು ಎಚ್‌ಎಎಲ್ ಪಾಲಿಸಿದೆ. ಪ್ರತಿಷ್ಠಿತ ಪತ್ರಿಕೆಯು ಇಂಥ ವರದಿ ಮಾಡುವಾಗ ಲಭ್ಯ ದಾಖಲೆಗಳನ್ನು ಪರಿಶೀಲಿಸಬೇಕಾಗುತ್ತದೆ’ ಎಂದು ಭಾರತದ ವಿದೇಶಾಂಗ ಸಚಿವಾಲಯವು ಸೋಮವಾರ ಹೇಳಿಕೆ ಬಿಡುಗಡೆ ಮಾಡಿದೆ.

‘ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಕಗ್ಗೊಲೆ ನಿಲ್ಲಿಸಿ’

ರಾಜ್ಯಸಭೆ ಸಂಸದೆ ಸೋನಿಯಾ ಗಾಂಧಿ ಆಗ್ರಹ • ಎನ್‌ಇಪಿ ಕುರಿತು ಟೀಕೆ

ನವದೆಹಲಿ (ಪಿಟಿಐ): ‘ಅಧಿಕಾರವನ್ನು ತನ್ನ ಹಿಡಿತದಲ್ಲಿಯೇ ಇಟ್ಟುಕೊಳ್ಳುವ ಕೇಂದ್ರ ಸರ್ಕಾರದ ‘ಕೇಂದ್ರೀಕರಣ’ದ ಕಾರ್ಯವೈಖರಿ ಎಗ್ಗಿಲ್ಲದೆ ನಡೆಯುತ್ತಲೇ ಇದೆ. ಇದರಿಂದ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಪೆಟ್ಟು ಬಿದ್ದಿದೆ. ಮೋದಿ ಸರ್ಕಾರದ ಎನ್‌ಇಪಿಯು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಕಗ್ಗೊಲೆ ಮಾಡುತ್ತಿದೆ. ಇದು ನಿಲ್ಲಲೇ ಬೇಕು’ ಎಂದು ಸಂಸದೆ ಸೋನಿಯಾ ಗಾಂಧಿ ಅಭಿಪ್ರಾಯ ಪಟ್ಟಿದ್ದಾರೆ.



ಸೋನಿಯಾ ಗಾಂಧಿ

ಕೇಂದ್ರ ಸರ್ಕಾರದ ಶಿಕ್ಷಣ ನೀತಿ ಬಗ್ಗೆ ಸೋನಿಯಾ ಗಾಂಧಿ ಪತ್ರಿಕೆಯೊಂದಕ್ಕೆ ಬರೆದಿರುವ ಲೇಖನದಲ್ಲಿ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದು, ‘ಸಂವಿಧಾನದ ‘ಸಮವರ್ತಿ ಪಟ್ಟಿ’ಯಲ್ಲಿರುವ ವಿಷಯದ ಬಗ್ಗೆ ರಾಜ್ಯ ಸರ್ಕಾರಗಳ ಜೊತೆಗೆ ಚರ್ಚಿಸಬೇಕು ಎಂದು ಕೇಂದ್ರ ಸರ್ಕಾರ ಯೋಚಿಸಲಿಲ್ಲ. ಚರ್ಚೆಯನ್ನೂ ಮಾಡಲಿಲ್ಲ, ಈಗ ‘ಬೆದರಿಸುವ ತಂತ್ರ’ವನ್ನು ಮಾಡುತ್ತಿದೆ’ ಎಂದಿದ್ದಾರೆ.

‘ಕೇಂದ್ರೀಕರಣ’ (ಸೆಂಟ್ರಲೈಸೇಷನ್), ಶಿಕ್ಷಣ ಕ್ಷೇತ್ರಕ್ಕೆ ಖಾಸಗಿಯವರ ಹೂಡಿಕೆಗೆ ಅವಕಾಶ ಹೆಚ್ಚಿಸಿ ಆ ಮೂಲಕ ಶಿಕ್ಷಣವನ್ನು ‘ವಾಣಿಜ್ಯೀಕರಣ’ (ಕಮರ್ಷಿಯಲೈಸೇಷನ್) ಮಾಡಿದ್ದು, ಪಠ್ಯಪುಸ್ತಕ, ಪಠ್ಯಕ್ರಮ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಕೋಮುವಾದ (ಕಮುನಲೈಸೇಷನ್) ತುಂಬಿದೆ... ಕೇಂದ್ರ ಸರ್ಕಾರವು ಈ 11 ವರ್ಷಗಳಲ್ಲಿ ಈ ಮೂರು ‘ಸಿ’ಗಳನ್ನು ಶಿಕ್ಷಣ ಕ್ಷೇತ್ರದಲ್ಲಿ ಬಹಳ ಯಶಸ್ವಿಯಾಗಿ ತೂರಿಸಿದೆ’ ಎಂದಿದ್ದಾರೆ.

‘ಕೇಂದ್ರೀಕರಣ, ಕೋಮುವಾದೀಕರಣ’

- 2025ರ ಯುಜಿಸಿ ಮಾರ್ಗಸೂಚಿಯ ಕರಡು ಬಹಳ ಕ್ರೂರವಾಗಿದೆ. ಕೇಂದ್ರ ಸರ್ಕಾರ ನೇಮಕ ಮಾಡುವ ರಾಜ್ಯಪಾಲರೇ ವಿಶ್ವವಿದ್ಯಾಲಯಗಳ ಕುಲಾಧಿಪತಿಯೂ ಆಗಿರುತ್ತಾರೆ. ಈಗ ಕುಲಪತಿಗಳನ್ನು ಕೇಂದ್ರವೇ ನೇಮಕ ಮಾಡುವ ಕರಡು ಸಿದ್ಧವಾಗಿದೆ. ಸಮವರ್ತಿ ಪಟ್ಟಿಯಲ್ಲಿರುವ ವಿಷಯವನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವ ಹಿಂಬಾಗಿಲಿನ ವ್ಯವಸ್ಥಿತ ಯತ್ನವಿದು
- ಶಿಕ್ಷಣವನ್ನು ಭಾರಿ ದುಬಾರಿ ಮಾಡಿ ಬಡವರನ್ನು ಶಿಕ್ಷಣದಿಂದ ಒತ್ತಾಯಪೂರ್ವಕವಾಗಿ ದೂರ ಇಡುವ ಮತ್ತು ಖಾಸಗಿ ಶಿಕ್ಷಣ ವ್ಯವಸ್ಥೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳದೇ ಇರುವ ಸ್ಥಿತಿ ನಿರ್ಮಾಣ ಮಾಡಲಾಗಿದೆ
- ಶಿಕ್ಷಣದಲ್ಲಿ ಕೋಮುವಾದ ತುಂಬಬೇಕು ಎನ್ನುವ ಆರ್‌ಎಸ್‌ಎಸ್ ಹಾಗೂ ಬಿಜೆಪಿಯ ಸಿದ್ಧಾಂತವನ್ನು ತೂರಿಸುವ ಬಹುಕಾಲದ ಯೋಜನೆಯನ್ನು ಜಾರಿ ಮಾಡಲು ಕೇಂದ್ರ ಸರ್ಕಾರ ಯತ್ನಿಸುತ್ತಿದೆ
- ಭಾರತದ ಇತಿಹಾಸವನ್ನು ತಿರುಚಿ ತಮಗೆ ಬೇಕಾದಂತೆ ಪಠ್ಯಕ್ರಮವನ್ನು ಕೇಂದ್ರ ಪರಿಷ್ಕರಿಸುತ್ತಿದೆ. ಬೋಧನಾ ಸಾಮರ್ಥ್ಯವನ್ನೂ ನೋಡದೆ ತಮ್ಮ ಸಿದ್ಧಾಂತವನ್ನೇ ಹೇಳುವ ಪ್ರೊಫೆಸರ್‌ಗಳನ್ನು ದೊಡ್ಡ ಪ್ರಮಾಣದಲ್ಲಿ ನೇಮಿಸಲಾಗುತ್ತಿದೆ

ಖಾಸಗಿ ಶಿಕ್ಷಣ ಸಂಸ್ಥೆ ಮೀಸಲಿಗೆ ಒತ್ತಾಯ

ನವದೆಹಲಿ: ದೇಶದಲ್ಲಿರುವ ಅಲ್ಪಸಂಖ್ಯಾತ ಸಮುದಾಯಕ್ಕೆ ಹೊರತಾದ ಎಲ್ಲ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ, ಪಂಗಡ ಮತ್ತು ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಮೀಸಲಾತಿ ಕಲ್ಪಿಸಲು ಕಾನೂನು ಜಾರಿಗೆ ತರಬೇಕು ಎಂದು ಕಾಂಗ್ರೆಸ್ ಪಕ್ಷವು, ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಸಂಸದೀಯ ಸ್ಥಾಯಿ ಸಮಿತಿಯ ಶಿಫಾರಸನ್ನು ಉಲ್ಲೇಖಿಸಿದ್ದಾರೆ.

ವಕ್ಫ್ ತಿದ್ದುಪಡಿ ಮಸೂದೆ ನಾಳೆ ಮಂಡನೆ ಸಾಧ್ಯತೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ (ಪಿಟಿಐ): ಜಂಟಿ ಸಂಸದೀಯ ಸಮಿತಿ ಪರಿಶೀಲನೆಗೆ ಒಳಪಟ್ಟಿರುವ ವಕ್ಫ್ ತಿದ್ದುಪಡಿ ಮಸೂದೆಯನ್ನು ಕೇಂದ್ರ ಸರ್ಕಾರವು ಬುಧವಾರ ಲೋಕಸಭೆಯಲ್ಲಿ ಮಂಡಿಸುವ ಸಾಧ್ಯತೆ ಇದೆ.

ಇದರ ನಡುವೆಯೇ, ಪ್ರಸ್ತಾಪಿತ ಮಸೂದೆ ಬಗ್ಗೆ ಸುಳ್ಳು ಮತ್ತು ತಪ್ಪು ಮಾಹಿತಿಗಳು ಎಲ್ಲ ದಾಖಲೆಗಳನ್ನು ಮೀರಿ ವ್ಯಾಪಿಸುತ್ತಿದ್ದು, ಈ ಬಗ್ಗೆ ಸಂಸತ್ತಿನ ಕಲಾಪದಲ್ಲಿ ಚರ್ಚೆಯಾಗಬೇಕು ಎಂದು ಕೇಂದ್ರ ಸಚಿವ ಕಿರಣ್ ರಿಜಿಜು ಸೋಮವಾರ ಒತ್ತಾಯಿಸಿದ್ದಾರೆ.

‘ಜಂಟಿ ಸಂಸದೀಯ ಸಮಿತಿಯಿಂದ ಪರಿಶೀಲನೆಗೆ ಒಳಪಟ್ಟ ವಕ್ಫ್ ತಿದ್ದುಪಡಿ ಮಸೂದೆ ಮಂಡನೆಗೆ ಸರ್ಕಾರವು ಸಿದ್ಧವಾಗಿದೆ. ಆದರೆ, ಸಂಸತ್ತಿನಲ್ಲಿ ರಾಜಕೀಯ ಪಕ್ಷಗಳೊಂದಿಗಿನ ಚರ್ಚೆಯ ಪ್ರಕ್ರಿಯೆಗಳನ್ನು ಮುಗಿಸಿದ ಬಳಿಕ ಮಸೂದೆ ಮಂಡನೆಗೆ ನಿರ್ಧರಿಸಲಾಗುವುದು. ಮಂಗಳವಾರ ಮಸೂದೆಯ ಅಂಗೀಕಾರ ಸಮಯದ ಬಗ್ಗೆ ಮಾತ್ರ ಮಾತನಾಡುವುದಾಗಿ’ ರಿಜಿಜು ತಿಳಿಸಿದರು.

ಈ ಮೂಲಕ ಮಸೂದೆ ಮಂಡನೆ ಬಗ್ಗೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರ ಜೊತೆ ಮಂಗಳವಾರ ಚರ್ಚಿಸುವಸುಳಿವನ್ನು ಸರ್ಕಾರನೀಡಿದೆ.

ಸಂಸತ್ತಿನ ಬಜೆಟ್ ಅಧಿವೇಶನವು ಏ.4ರಂದು ಮುಕ್ತಾಯವಾಗಲಿದೆ. ವಕ್ಫ್ ತಿದ್ದುಪಡಿ ಮಸೂದೆ ಕಾಯ್ದೆಯಾಗಲು ಸಂಸತ್ತಿನ ಉಭಯ ಸದನಗಳಲ್ಲಿ ಅಂಗೀಕಾರ ಪಡೆಯಬೇಕು. ಹೀಗಾಗಿ, ಲೋಕಸಭೆಯಲ್ಲಿ ಮಸೂದೆ ಅಂಗೀಕಾರವಾದರೂ, ಸಮಯದ ಕೊರತೆ ಕಾರಣ ರಾಜ್ಯಸಭೆಯಲ್ಲಿ ಮಸೂದೆಗೆ ಅನುಮೋದನೆ ಸಿಗುವ ಸಾಧ್ಯತೆ ಇಲ್ಲ ಎಂದು ಮೂಲಗಳು ತಿಳಿಸಿವೆ.

ಆರ್‌ಎಸ್‌ಎಸ್ ‘ಆಲದ ಮರ’: ಮೋದಿ

ಪ್ರಧಾನಿಯಾದ 11 ವರ್ಷದ ತರುವಾಯ ಸಂಘದ ಕೇಂದ್ರ ಕಚೇರಿಗೆ ಭೇಟಿ

ನಾಗ್ಪುರ (ಪಿಟಿಐ): ‘ರಾಷ್ಟ್ರೀಯ ಸ್ವಯಂ ಸೇವಕ ಸಂಘವು (ಆರ್‌ಎಸ್‌ಎಸ್) ಭಾರತದ ಅಮರ ಸಂಸ್ಕೃತಿಯ ‘ಆಲದ ಮರ’ವಾಗಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ.

ಪ್ರಧಾನಿಯಾಗಿ 11 ವರ್ಷದ ತರುವಾಯ ಇಲ್ಲಿರುವ ಆರ್‌ಎಸ್‌ಎಸ್‌ನ ಕೇಂದ್ರ ಕಚೇರಿಗೆ ಭಾನುವಾರ ಭೇಟಿ ನೀಡಿದ್ದ ಸಂದರ್ಭದಲ್ಲಿ ಅವರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಅಧಿಕಾರದಲ್ಲಿ ಇದ್ದಾಗಲೇ ಸಂಘದ ಕೇಂದ್ರ ಕಚೇರಿಗೆ ಭೇಟಿ ನೀಡಿದ್ದ ಎರಡನೇ ಪ್ರಧಾನಿ ಎಂದೂ ಮೋದಿ ಗುರುತಿಸಿಕೊಂಡರು. ಈ ಹಿಂದೆ ಎ.ಬಿ. ವಾಜಪೇಯಿ ಅವರು 2000ರಲ್ಲಿ ಭೇಟಿ ನೀಡಿದ್ದರು. ಕಾಕತಾಳೀಯವೆಂದರೆ ಇಬ್ಬರೂ ಮೂರನೇ ಅವಧಿಗೆ ಪ್ರಧಾನಿ ಸ್ಥಾನಕ್ಕೆ ಏರಿದಾಗ ಭೇಟಿ ನೀಡಿದ್ದರು.

ಕೇಂದ್ರ ಕಚೇರಿಯಲ್ಲಿ ಮೋದಿ ಅವರು ಡಾ.ಹೆಡಗೇವಾರ್ ಸ್ಮೃತಿ ಮಂದಿರಕ್ಕೆ ಭೇಟಿ ನೀಡಿ, ಆರ್‌ಎಸ್‌ಎಸ್‌ನ ಸ್ಥಾಪಕರಿಗೆ ನಮನ ಸಲ್ಲಿಸಿದರು. ಬಳಿಕ ಡಾ.ಬಿ.ಆರ್. ಅಂಬೇಡ್ಕರ್ ಅವರು 1956ರಲ್ಲಿ ಬೌದ್ಧಧರ್ಮ ಸ್ವೀಕರಿಸಿದ್ದ ನೆನಪಿನ ದೀಕ್ಷಾಭೂಮಿಗೂ ಭೇಟಿ ನೀಡಿ ಗೌರವ ಸಲ್ಲಿಸಿದರು.

ಆರ್‌ಎಸ್‌ಎಸ್ ಮುಖ್ಯಸ್ಥರಾಗಿದ್ದ ಮಾಧವರಾವ್ ಗೋಲ್ವಾಲ್ಕರ್ ಅವರ ಹೆಸರಿನ ನೇತ್ರಾಲಯ ಕಣ್ಣಿನ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದ ವಿಸ್ತೃತ ಕಟ್ಟಡ ನಿರ್ಮಾಣಕ್ಕೆ ಅಡಿಗಲ್ಲು ನೆರವೇರಿಸಿದರು.

ಈ ಸಮಾರಂಭದಲ್ಲಿ ಅವರು, ‘ಸಂಘದ ಕಾರ್ಯಕರ್ತರದು ಸ್ವಾರ್ಥ ರಹಿತ ಸೇವೆ. ರಾಷ್ಟ್ರೀಯ ಪ್ರಜ್ಞೆ ರಕ್ಷಿಸಲು, ಬೆಳೆಸಲು 100 ವರ್ಷದ ಹಿಂದೆ ಬಿತ್ತಿದ್ದ ಬೀಜ ಇಂದು ಹೆಮ್ಮರವಾಗಿದೆ’ ಎಂದರು.

‘ಆ ಮರದ ಕೊಂಬೆಗಳಾಗಿ ಲಕ್ಷಾಂತರ ಕಾರ್ಯಕರ್ತರಿದ್ದಾರೆ. ಆರ್‌ಎಸ್‌ಎಸ್ ಎಂಬುದು ಭಾರತೀಯ ಸಂಸ್ಕೃತಿಯ ಆಧುನಿಕ ಆಲದಮರ. ಇದು, ದೇಶದ ಸಂಸ್ಕೃತಿ, ಪರಂಪರೆಯನ್ನು ಬೆಳಗುತ್ತಿದೆ’ ಎಂದರು.

100 ವರ್ಷಗಳಲ್ಲಿ ಸಂಘದ ಸೇವೆಯನ್ನು ಉಲ್ಲೇಖಿಸಿದ ಅವರು, ‘ನಾನಲ್ಲ, ನೀವು’, ‘ನನಗಲ್ಲ, ದೇಶಕ್ಕಾಗಿ’ ಎಂಬುದು ಸ್ವಾರ್ಥರಹಿತ ಸೇವೆಯ ಮಂತ್ರ. ‘ನಾನು’ ಎಂಬುದರ ಬದಲಿಗೆ ‘ನಾವು’ ಎಂಬುದೇ ಆದ್ಯತೆಯಾಗಬೇಕು ಎಂದು ಅವರು ಕಿವಿಮಾತು ಹೇಳಿದರು.



ಭಾನುವಾರ ನಾಗ್ಪುರದಲ್ಲಿ ನಡೆದ ‘ಮಾಧವ ನೇತ್ರಾಲಯ’ದ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಮತ್ತು ಪ್ರಧಾನಿ ನರೇಂದ್ರ ಮೋದಿ ಪರಸ್ಪರ ನಮಸ್ಕರಿಸಿದರು ಪಿಟಿಐ ಚಿತ್ರ

ವಿವಾದ ಅನಗತ್ಯ ಆರ್‌ಎಸ್‌ಎಸ್

ಒಂದನೇ ಪುಟದಿಂದ...

‘ಯಾರೋ ಒಬ್ಬ ವ್ಯಕ್ತಿಗೆ ಇಷ್ಟವಾಗಲಿ, ಆಗದೆ ಇರಲಿ. ಔರಂಗಜೇಬ್‌ನ ಸಮಾಧಿಯು ಎಎಸ್‌ಐ (ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ) ವ್ಯಾಪ್ತಿಯಲ್ಲಿ ಸಂರಕ್ಷಿತ ಸ್ಮಾರಕ. ಆದರೆ ನಾವು ಔರಂಗಜೇಬನ ವೈಭವೀಕರಣಕ್ಕೆ ಯಾವುದೇ ಕಾರಣಕ್ಕೂ ಅವಕಾಶ ಕೊಡುವುದಿಲ್ಲ’ ಎಂದು ಫಡಣವೀಸ್ ಅವರು ನಾಗ್ಪುರದಲ್ಲಿ ಹೇಳಿದರು.

ಔರಂಗಜೇಬ್ ಸಮಾಧಿ ವಿಚಾರದಲ್ಲಿ ಕೋಮು ದ್ವೇಷ ಹಬ್ಬಿಸಲು ಯತ್ನಿಸುತ್ತಿರುವವರ ಬಗ್ಗೆ ಭಾನುವಾರ ಆಕ್ಷೇಪ ವ್ಯಕ್ತಪಡಿಸಿದ್ದ ಮಹಾರಾಷ್ಟ್ರ ನವನಿರ್ಮಾಣ ಸೇನಾ ಮುಖ್ಯಸ್ಥ ರಾಜ್ ಠಾಕ್ರೆ ಅವರು, ‘ಜಾತಿ ಮತ್ತು ಧರ್ಮದ ಆಧಾರದಲ್ಲಿ ಇತಿಹಾಸವನ್ನು ನೋಡಬಾರದು. ಇತಿಹಾಸದ ಬಗ್ಗೆ ವಾಟ್ಸ್‌ಆ್ಯಪ್‌ನಲ್ಲಿ ಬರುವ ಮಾಹಿತಿಗಳನ್ನು ಜನರು ನಂಬಬಾರದು’ ಎಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಎನ್‌ಕೌಂಟರ್ ನಕ್ಸಲ್ ರೇಣುಕಾ ಸಾವು

ದಂತೇವಾಡ (ಪಿಟಿಐ): ಛತ್ತೀಸಗಢದ ಬಸ್ತರ್‌ನಲ್ಲಿ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ನಕ್ಸಲ್ ಗುಮುಡವೆಲ್ಲಿ ರೇಣುಕಾ ಸೋಮವಾರ ಮೃತಪಟ್ಟಿದ್ದಾರೆ.

ತೆಲಂಗಾಣದ ವರಂಗಲ್ ನಿವಾಸಿಯಾದ ರೇಣುಕಾ ಅಲಿಯಾಸ್ ಸರಸ್ವತಿಯ ಸುಳಿವು ನೀಡಿದವರಿಗೆ ₹45 ಲಕ್ಷ ಬಹುಮಾನ ಘೋಷಿಸಲಾಗಿತ್ತು. ಛತ್ತೀಸಗಢ ರಾಜ್ಯ ಸರ್ಕಾರ ₹25 ಲಕ್ಷ ಘೋಷಿಸಿದ್ದರೆ, ತೆಲಂಗಾಣ ರಾಜ್ಯ ಸರ್ಕಾರ ₹20 ಲಕ್ಷ ಘೋಷಿಸಿತ್ತು.

ಕಾನೂನು ಪದವೀಧರೆಯಾಗಿರುವ ಈಕೆ 1996ರಿಂದ ನಕ್ಸಲ್ ಚಟುವಟಿಕೆಗಳಲ್ಲಿದ್ದರು. ಈಕೆಯ ಪತಿ ಶಂಕಮುರಿ ಅಪ್ಪಾರಾವ್ ನಕ್ಸಲ್ ಹೋರಾಟದಲ್ಲಿ ಮೃತಪಟ್ಟಿದ್ದರೆ, ಸಹೋದರ ಗುಡ್ಸಾ ಉಸೆಂಡಿ ಸಹ ಸಂಘಟನೆಯಲ್ಲಿ ಸಕ್ರಿಯವಾಗಿದ್ದರು. 2014ರಲ್ಲಿ ಶರಣಾಗಿದ್ದಾರೆ.

ಭೈರಮಗಢ (ಬಿಜಾಪುರ)–ಗೀದಮ (ದಂತೇವಾಡ) ಕಾಡಿನಲ್ಲಿ ಬೆಳಿಗ್ಗೆ 9 ಗಂಟೆ ಆಸುಪಾಸಿನಲ್ಲಿ ಭದ್ರತಾ ಸಿಬ್ಬಂದಿ ಹಾಗೂ ನಕ್ಸಲರ ನಡುವೆ ಗುಂಡಿನ ಚಕಮಕಿ ನಡೆದಿದೆ. ನಂತರ ಶೋಧ ನಡೆಸಿದಾಗ ಮಹಿಳಾ ನಕ್ಸಲ್ ಮೃತದೇಹ ಪತ್ತೆಯಾಗಿದೆ ಎಂದು ದಂತೇವಾಡ ಪೊಲೀಸ್ ವರಿಷ್ಠಾಧಿಕಾರಿ ಗೌರವ್ ರಾಯ್ ತಿಳಿಸಿದ್ದಾರೆ.

ರೈಫಲ್ ಸೇರಿದಂತೆ ಶಸ್ತ್ರಾಸ್ತ್ರ ಹಾಗೂ ಸ್ಫೋಟಕಗಳನ್ನು ವಶಪಡಿಸಿಕೊಂಡಿದೆ.

ನಕ್ಸಲರ ವಿಶೇಷ ವಲಯ ಸಮಿತಿ ಸದಸ್ಯರಾಗಿದ್ದ ಈಕೆ, ದಂಡಕಾರಣ್ಯ ವಿಶೇಷ ವಲಯ ಸಮಿತಿಯ ಪತ್ರಿಕಾ ತಂಡದ ಉಸ್ತುವಾರಿಯನ್ನು ವಹಿಸಿಕೊಂಡಿದ್ದರು.

ಪ್ರಾರ್ಥನೆಗೆ ಖಾಜಿಯನ್ನು ಮಸೀದಿಗೆ ಕರೆದೊಯ್ದ ಹಿಂದೂ ಕುಟುಂಬ

ಇಂದೋರ್ (ಪಿಟಿಐ): 50 ವರ್ಷಗಳ ಹಿಂದಿನ ಸಂಪ್ರದಾಯದಂತೆ ಹಿಂದೂ ಕುಟುಂಬವೊಂದು ಈದ್ ಉಲ್ ಫಿತ್ರ್ ಪ್ರಾರ್ಥನೆಗಾಗಿ ಖಾಜಿಯೊಬ್ಬರನ್ನು ಕುದುರೆ ಗಾಡಿಯಲ್ಲಿ ಮಸೀದಿಗೆ ಕರೆದೊಯ್ಯುವ ಮೂಲಕ ಕೋಮು-ಸೌಹಾರ್ದವನ್ನು ಸಾರಿತು.



ಮಧ್ಯಪ್ರದೇಶದ ಇಂದೋರ್ ನಗರದ ನಿವಾಸಿ ಸತ್ಯನಾರಾಯಣ ಸಲ್ವಾಡಿಯಾ ಅವರು ನಗರದ ಖಾಜಿ ಮೊಹಮ್ಮದ್ ಇಶ್ರತ್ ಆಲಿ ಅವರನ್ನು ಅವರ ರಾಜ್‌ಮೊಹಲ್ಲಾ ನಿವಾಸದಿಂದ ಸದಾರ್ ಬಜಾರ್ ನಲ್ಲಿರುವ ಪ್ರಮುಖ ಮಸೀದಿಗೆ ಕುದುರೆ ಗಾಡಿಯಲ್ಲಿ ಕರೆದೊಯ್ದರು. ಪ್ರಾರ್ಥನೆ ಮುಗಿದ ಬಳಿಕ ಮನೆಗೆ ಮರಳಿಸಿದರು.

‘ನನ್ನ ತಂದೆ ರಾಮಚಂದ್ರ ಸಲ್ವಾಡಿಯಾ ಅವರು 50 ವರ್ಷಗಳ ಹಿಂದೆ ಈ ಪದ್ಧತಿಯನ್ನು ಆರಂಭಿಸಿದರು. 2017ರಲ್ಲಿ ಅವರು ತೀರಿಕೊಂಡ ಬಳಿಕ ನಾನು ಮುಂದುವರಿಸಿದ್ದೇನೆ. ಈ ಪದ್ಧತಿಯ ಮೂಲಕ ನಾವು ನಗರದ ಜನರಿಗೆ ಸಹೋದರತ್ವದ ಸಂದೇಶವನ್ನು ಸಾರಲು ಬಯಸುತ್ತೇವೆ’ ಎಂದು ಸತ್ಯನಾರಾಯಣ ಅವರು ಹೇಳಿದರು.

‘ಖಾಜಿಯೊಬ್ಬರನ್ನು ಹಿಂದೂ ಕುಟುಂಬ ಗೌರವಯುತವಾಗಿ ಮಸೀದಿಗೆ ಕರೆದೊಯ್ಯುವುದು ಇಂದೋರ್‌ನಲ್ಲಿ ಮಾತ್ರ, ದೇಶದ ಬೇರೆ ಯಾವುದೇ ಭಾಗದಲ್ಲಿ ಈ ಸಂಪ್ರದಾಯ ಇಲ್ಲ’ ಎಂದು ಖಾಜಿ ಇಶ್ರತ್ ಹೇಳಿದರು.

ಯೂಟ್ಯೂಬರ್ ಸೆರೆ

ತ್ರಿಶ್ಶೂರ್ (ಕೇರಳ), (ಪಿಟಿಐ): ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಬೆಂಗಾವಲು ಪಡೆಯ ವಾಹನ ತಡೆದ ಆರೋಪದ ಮೇಲೆ ಯೂಟ್ಯೂಬರ್‌ನನ್ನು ಬಂಧಿಸಿ, ಬಳಿಕ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಎಳನಾಡು ನಿವಾಸಿ ಅನೀಶ್ ಅಬ್ರಹಾಂ ಅವರನ್ನು ವಶಕ್ಕೆ ಪಡೆದ ಮನ್ನುತಿ ಪೊಲೀಸ್ ಠಾಣೆಯ ಪೊಲೀಸರು, ಠಾಣಾ ಜಾಮೀನಿನ ಮೇಲೆ ಅವರನ್ನು ಬಿಡುಗಡೆ ಮಾಡಿದ್ದು, ಅವರ ಕಾರನ್ನು ವಶಪಡಿಸಿಕೊಂಡಿದ್ದಾರೆ.

50 ದಿನಕ್ಕೆ ಕಾಲಿಟ್ಟ ಮುಷ್ಕರ; ಹೋರಾಟ ತೀವ್ರಗೊಳಿಸಲು ನಿರ್ಧಾರ

ತಲೆ ಬೋಳಿಸಿಕೊಂಡು ‘ಆಶಾ’ ಪ್ರತಿಭಟನೆ

ತಿರುವನಂತಪುರ (ಪಿಟಿಐ): ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ, ಕೇರಳದ ಸಚಿವಾಲಯದ ಮುಂಭಾಗದಲ್ಲಿ ಪ್ರತಿಭಟಿಸುತ್ತಿರುವ ಆಶಾ ಕಾರ್ಯಕರ್ತೆಯರು ತಮ್ಮ ಹೋರಾಟವನ್ನು ತೀವ್ರಗೊಳಿಸಿದ್ದಾರೆ. ಸರ್ಕಾರ ನಿರ್ಲಕ್ಷ್ಯ ವಹಿಸಿದೆ ಎಂದು ದೂರಿ ಹಲವರು ತಲೆಕೂದಲು ಕತ್ತರಿಸಿಕೊಂಡರೆ, ಕೆಲವರು ತಲೆ ಬೋಳಿಸಿಕೊಂಡರು.

ಪ್ರತಿಭಟನೆ ಸೋಮವಾರ 50ನೇ ದಿನಕ್ಕೆ ಕಾಲಿಟ್ಟಿತು. ಕಾರ್ಯಕರ್ತೆಯರು ಹೋರಾಟವನ್ನು ಮತ್ತೊಂದು ಸ್ವರೂಪಕ್ಕೆ ಕೊಂಡೊಯ್ದರು. ರಾಜ್ಯದ ವಿವಿಧೆಡೆಯಿಂದ ಬಂದಿದ್ದ ನೂರಾರು ಮಂದಿ ಕೂದಲು ಕತ್ತರಿಸಿಕೊಳ್ಳುವಾಗ ಪರಸ್ಪರ ಕಣ್ಣೀರಿಟ್ಟು ಸಂತೈಸಿಕೊಂಡರು.

ಹತಾಶೆಗೊಳಗಾದ ಕಾರ್ಯಕರ್ತೆಯೊಬ್ಬರು ತಲೆ ಬೋಳಿಸಿಕೊಂಡರು. ನಂತರ, ಕೆಲವರು ಕೂಡ ಇದೇ ರೀತಿ ಪ್ರತಿಭಟನೆ ದಾಖಲಿಸಿದರು.



ಗೌರವಧನ ಹೆಚ್ಚಿಸುವಂತೆ ಒತ್ತಾಯಿಸಿ ತಿರುವನಂತಪುರದಲ್ಲಿ ಸೋಮವಾರ ಆಶಾ ಕಾರ್ಯಕರ್ತೆಯರು ತಮ್ಮ ಕೂದಲು ಕತ್ತರಿಸಿ ಪ್ರತಿಭಟನೆ ನಡೆಸಿದರು ಪಿಟಿಐ ಚಿತ್ರ

‘ನಮ್ಮ ಜೀವನವೇ ಕತ್ತರಿಸಲ್ಪಟ್ಟಿದೆ. ಕಾರ್ಯಕರ್ತೆಯರ ನೋವು ಹಾಗೂ ಸಮಸ್ಯೆಗಳನ್ನು ಕಂಡು ಸಚಿವರು ಕುರುಡರಂತೆ ವರ್ತಿಸುತ್ತಿದ್ದು, ಅವರ ವರ್ತನೆ ಖಂಡಿಸಿ ಈ ರೀತಿ ಮಾಡಿದ್ದೇವೆ. ದಿನಕ್ಕೆ ₹232 ಗೌರವಧನದಲ್ಲಿ ಹೇಗೆ ಜೀವನ ನಡೆಸಲು ಸಾಧ್ಯ’? ಎಂದು ಕಾರ್ಯಕರ್ತೆಯೊಬ್ಬರು ಅಳಲು ತೋಡಿಕೊಂಡರು.

ಮಹಿಳೆಯರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿ ಕೆಲವು ಪುರುಷರು ಕೂಡ ತಲೆ ಬೋಳಿಸಿಕೊಂಡರು.

ಬೇಡಿಕೆ ಈಡೇರಿಕೆಗೆ ಹಿಂದೇಟು: ‘ಗೌರವಧನ ಏರಿಕೆ ಮಾಡುವುದು ಪ್ರಾಯೋಗಿಕವಾಗಿ ಸಾಧ್ಯವಿಲ್ಲ, ಆಶಾ ಕಾರ್ಯಕರ್ತೆಯರ ಬೇಡಿಕೆ ಈಡೇರಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಜವಾಬ್ದಾರಿಯೂ ಇದೆ’ ಎಂದು ಕೇರಳ ಸರ್ಕಾರ ಸ್ಪಷ್ಟಪಡಿಸಿದೆ.

‘ಆಶಾ ಕಾರ್ಯಕರ್ತೆಯರ ಗೌರವಧನ ಏರಿಕೆ ಮಾಡಲು ಎನ್‌ಎಚ್‌ಎಂನ ಸಂಚಾಲನ ಸಮಿತಿಯು ನಿರ್ಧರಿಸಿದೆ’ ಎಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಸಂಸತ್‌ನಲ್ಲಿಯೇ ಇತ್ತೀಚೆಗೆ ಘೋಷಿಸಿದ್ದರು.

‘ಆಶಾ’ ವಿರುದ್ಧ ಸಚಿವರ ಆಕ್ರೋಶ

ತಲೆ ಕೂದಲನ್ನು ಕತ್ತರಿಸಿಕೊಂಡು ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿರುವ ಆಶಾ ಕಾರ್ಯಕರ್ತೆಯರ ವಿರುದ್ಧ ಕಾರ್ಮಿಕ ಸಚಿವ ವಿ. ಶಿವನ್‌ಕುಟ್ಟಿ ತೀವ್ರ ಆಕ್ರೋಶ ಹೊರಹಾಕಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಆಶಾ ಕಾರ್ಯಕರ್ತೆಯರು ತಾವು ಕತ್ತರಿಸಿರುವ ತಲೆ ಕೂದಲನ್ನು ಸಚಿವರ ಮೂಲಕ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕೆಂದು ಒತ್ತಾಯಿಸುತ್ತೇನೆ’ ಎಂದು ವ್ಯಂಗ್ಯವಾಡಿದ್ದಾರೆ.

ನಮ್ಮ ಯಾವುದೇ ಬೇಡಿಕೆ ಕುರಿತು ಸರ್ಕಾರ ಸಹಾನುಭೂತಿಯಿಂದ ನೋಡುತ್ತಿಲ್ಲ. ಇದು ನಮ್ಮ ಬಲವಾದ ಪ್ರತಿಭಟನೆ
ಮಿನಿ.ಎಸ್, ಆಶಾ ಕಾರ್ಯಕರ್ತೆ



ಅಶ್ವಿನಿಕುಮಾರ್ ದಾಳಿಗೆ ನೆಲಕಚ್ಚಿದ ಕೋಲ್ಕತ್ತ ನೈಟ್ ರೈಡರ್ಸ್ • ರಿಯಾನ್ ಅರ್ಧಶತಕ

ಮುಂಬೈಗೆ ಮೊದಲ ಜಯದ ಸಂಭ್ರಮ

ಮುಂಬೈ (ಪಿಟಿಐ): ಎಡಗೈ ವೇಗಿ ಅಶ್ವಿನಿಕುಮಾರ್ ದಾಳಿಯ ಮುಂದೆ ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಬ್ಯಾಟಿಂಗ್ ಪಡೆ ನೆಲಕಚ್ಚಿತು. ಈ ಬಾರಿಯ ಐಪಿಎಲ್ ಟೂರ್ನಿಯಲ್ಲಿ ಮುಂಬೈ ಇಂಡಿಯನ್ಸ್ ತಂಡವು ಮೊದಲ ಜಯದ ರುಚಿ ಉಂಡಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಆತಿಥೇಯ ಮುಂಬೈ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಪದಾರ್ಪಣೆ ಪಂದ್ಯವಾಡಿದ ಅಶ್ವಿನಿಕುಮಾರ್ (24ಕ್ಕೆ4) ಅವರ ಅಮೋಘ ಬೌಲಿಂಗ್ ರಂಗೇರಿತು. ಕೋಲ್ಕತ್ತ ತಂಡವು 16.2 ಓವರ್‌ಗಳಲ್ಲಿ ಕೇವಲ 116 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಪ್ರಸಕ್ತ ಟೂರ್ನಿಯಲ್ಲಿ ದಾಖಲಾದ ಅತ್ಯಂತ ಕನಿಷ್ಠ ಮೊತ್ತ ಇದಾಗಿದೆ. ಈ ಗುರಿಯನ್ನು ಬೆನ್ನಟ್ಟಿದ ಮುಂಬೈ ತಂಡವು 8 ವಿಕೆಟ್‌ಗಳಿಂದ ಗೆದ್ದಿತು. ರಿಯಾನ್ ರಿಕೆಲ್ಟನ್ (ಔಟಾಗದೇ 62; 41ಎ, 4X4, 6X5) ಮತ್ತು ಸೂರ್ಯಕುಮಾರ್ ಯಾದವ್ (ಔಟಾಗದೇ 27; 9ಎಸೆತ, 4X3, 6X2) ಅವರ ಬ್ಯಾಟಿಂಗ್ ಬಲದಿಂದ 12.5 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 121 ರನ್ ಗಳಿಸಿತು. ಮುಂಬೈ ತನ್ನ ಮೊದಲೆರಡೂ ಪಂದ್ಯಗಳಲ್ಲಿ ಸೋತಿತ್ತು.

ಮೊದಲ ಓವರ್‌ನ ನಾಲ್ಕನೇ ಎಸೆತದಲ್ಲಿಯೇ ವೇಗಿ ಟ್ರೆಂಟ್ ಬೌಲ್ಟ್ ಹಾಕಿದ ನೇರ ಎಸೆತಕ್ಕೆ ಸುನಿಲ್ ನಾರಾಯಣ್ ಕ್ಲೀನ್‌ಬೌಲ್ಡ್ ಆದರು. ನಂತರದ ಓವರ್‌ನಲ್ಲಿ ದೀಪಕ್ ಚಾಹರ್ ಎಸೆತವನ್ನು ಹೊಡೆಯುವ ಯತ್ನದಲ್ಲಿ ಕ್ವಿಂಟನ್ ಡಿಕಾಕ್ ಅವರು ಫೀಲ್ಡಿಂಗ್ ಮಾಡುತ್ತಿದ್ದ ಅಶ್ವಿನಿಕುಮಾರ್‌ಗೆ ಕ್ಯಾಚ್ ಆದರು. ಇನಿಂಗ್ಸ್‌ಗೆ ಸ್ಥಿರತೆ ಒದಗಿಸುವ ಪ್ರಯತ್ನ ಮಾಡಿದ ಕೋಲ್ಕತ್ತ ತಂಡದ ನಾಯಕ ಅಜಿಂಕ್ಯ ರಹಾನೆ (11; 7ಎ, 4X1, 6X1) ಅವರ ವಿಕೆಟ್ ಗಳಿಸಿದ ಅಶ್ವಿನಿಕುಮಾರ್ ಖಾತೆ ತೆರೆದರು. ತಮ್ಮ ಚೊಚ್ಚಲ ಐಪಿಎಲ್ ಪಂದ್ಯದ ಮೊದಲ ಎಸೆತದಲ್ಲಿಯೇ ವಿಕೆಟ್ ಗಳಿಸಿದ ಹೆಗ್ಗಳಿಕೆ ಕುಮಾರ್ ಅವರದ್ದಾಯಿತು.ರಿಂಕು ಸಿಂಗ್ (17; 14ಎ), 'ಇಂಪ್ಯಾಕ್ಟ್ ಪ್ಲೇಯರ್' ಆಗಿ ಕ್ರೀಸ್‌ಗೆ ಬಂದ ಮನೀಷ್ ಪಾಂಡೆ (19; 14ಎ, 4X2, 6X1) ಮತ್ತು ಸ್ಫೋಟಕಶೈಲಿಯ ಬ್ಯಾಟರ್ ಆ್ಯಂಡ್ರೆ ರಸೆಲ್ (5, 11ಎ) ಅವರ ವಿಕೆಟ್‌ಗಳನ್ನೂ ಕಬಳಿಸಿದ 23 ವರ್ಷದ ಅಶ್ವಿನಿಕುಮಾರ್ ಮಧ್ಯಮ ಕ್ರಮಾಂಕಕ್ಕೆ ಬಲವಾದ ಪೆಟ್ಟುಕೊಟ್ಟರು.

ತುಸು ಹೋರಾಟ ತೋರಿದ ಅಂಗಕ್ರಿಷ್ ರಘುವಂಶಿ (26; 16ಎ) ಅವರ ವಿಕೆಟ್ ಗಳಿಸುವಲ್ಲಿ ಹಾರ್ದಿಕ್ ಯಶಸ್ವಿಯಾದರು. ಕೇರಳದ ಭರವಸೆಯ ಸ್ಪಿನ್ನರ್ ವಿಘ್ನೇಶ್ ಪುತ್ತೂರ್ ಅವರೂ ಒಂದು ವಿಕೆಟ್ ಗಳಿಸಿದರು.



ನಾಲ್ಕು ವಿಕೆಟ್ ಪಡೆದ ಅಶ್ವಿನಿಕುಮಾರ್ –ಎಎಫ್‌ಪಿ ಚಿತ್ರ

ಪಾಯಿಂಟ್ಸ್ ಪಟ್ಟಿ

	ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
1	ಆರ್‌ಸಿಬಿ	2	2	0	4	2.266
2	ಡಿಸಿ	2	2	0	4	1.320
3	ಎಲ್‌ಎಸ್‌ಜಿ	2	1	1	2	0.963
4	ಜಿಟಿ	2	1	1	2	0.625
5	ಪಿಬಿಕೆಎಸ್	1	1	0	2	0.550
6	ಎಂಐ	3	1	2	2	0.309
7	ಸಿಎಸ್‌ಕೆ	3	1	2	2	-0.771
8	ಎಸ್‌ಆರ್‌ಎಚ್	3	1	2	2	-0.871
9	ಆರ್‌ಆರ್	3	1	2	2	-1.112
10	ಕೆಕೆಆರ್	3	1	2	2	-1.428

ಆರೇಂಜ್ ಕ್ಯಾಪ್
ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 145 ರನ್

ಪರ್ಪಲ್ ಕ್ಯಾಪ್
ನೂರ್ ಅಹ್ಮದ್ (ಸಿಎಸ್‌ಕೆ) 9 ವಿಕೆಟ್

ಸಂಕ್ಷಿಪ್ತ ಸ್ಕೋರು; ಕೋಲ್ಕತ್ತ ನೈಟ್ ರೈಡರ್ಸ್: 16.2 ಓವರ್‌ಗಳಲ್ಲಿ 116 (ಅಜಿಂಕ್ಯ ರಹಾನೆ 11, ಅಂಗಕ್ರಿಷ್ ರಘುವಂಶಿ 26, ರಿಂಕು ಸಿಂಗ್ 17, ಮನೀಷ್ ಪಾಂಡೆ 19, ರಮಣದೀಪ್ ಸಿಂಗ್ 22, ದೀಪಕ್ ಚಾಹರ್ 19ಕ್ಕೆ2, ಅಶ್ವಿನಿಕುಮಾರ್ 24ಕ್ಕೆ4, ವಿಘ್ನೇಶ್ ಪುತ್ತೂರು 21ಕ್ಕೆ1, ಮಿಚೆಲ್ ಸ್ಯಾಂಟನರ್ 17ಕ್ಕೆ1, ಹಾರ್ದಿಕ್ ಪಾಂಡ್ಯ 10ಕ್ಕೆ1, ಟ್ರೆಂಟ್ ಬೌಲ್ಟ್ 23ಕ್ಕೆ1) ಮುಂಬೈ ಇಂಡಿಯನ್ಸ್: 12.5 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 121 (ರೋಹಿತ್ ಸರ್ಮಾ 13, ರಿಯಾನ್ ರಿಕೆಲ್ಟನ್ ಔಟಾಗದೇ 62, ವಿಲ್ ಜ್ಯಾಕ್ಸ್ 16, ಸೂರ್ಯಕುಮಾರ್ ಯಾದವ್ ಅಜೇಯ 27) **ಫಲಿತಾಂಶ:**ಮುಂಬೈ ಇಂಡಿಯನ್ಸ್‌ಗೆ 8 ವಿಕೆಟ್‌ಗಳ ಜಯ. **ಪಂದ್ಯದ ಆಟಗಾರ:** ಅಶ್ವಿನಿಕುಮಾರ್



ರಿಯಾನ್ ರಿಕೆಲ್ಟನ್

ಲಖನೌ ತಂಡಕ್ಕೆ ಪಂಜಾಬ್ ಕಿಂಗ್ಸ್ ಸವಾಲು ಇಂದು

'ದುಬಾರಿ' ಆಟಗಾರರ ಸೆಣಸಾಟ

ಲಖನೌ (ಪಿಟಿಐ): ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಅಮೋಘ ಗೆಲುವು ಸಾಧಿಸಿ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿರುವ ರಿಷಭ್ ಪಂತ್ ಸಾರಥ್ಯದ ಲಖನೌ ಸೂಪರ್ ಜೈಂಟ್ಸ್ ತಂಡವು ಮಂಗಳವಾರ ತವರಿನಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿದೆ.

ಐಪಿಎಲ್ ಇತಿಹಾಸದಲ್ಲಿ ಅತ್ಯಂತ ದುಬಾರಿ ಮತ್ತು ಎರಡನೇ ಅತ್ಯಂತ ದುಬಾರಿ ಆಟಗಾರರ ನಡುವಿನ ಹಣಾಹಣಿಗೆ ಇಲ್ಲಿನ ಏಕನಾ ಕ್ರಿಕೆಟ್ ಕ್ರೀಡಾಂಗಣ ಸಜ್ಜಾಗಿದೆ. ದಾಖಲೆಯ ₹27 ಕೋಟಿ ಪಡೆದ ಪಂತ್ ಲಖನೌ ತಂಡವನ್ನು, ₹26.75 ಕೋಟಿ ಪಡೆದ ಶ್ರೇಯಸ್ ಅಯ್ಯರ್ ಪಂಜಾಬ್ ತಂಡವನ್ನು ಮುನ್ನಡೆಸಲಿದ್ದಾರೆ.

ಆರಂಭಿಕ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಒಂದು ವಿಕೆಟ್‌ನಿಂದ ಸೋಲು ಅನುಭವಿಸಿದ ಲಖನೌ ತಂಡ, ಎರಡನೇ ಪಂದ್ಯದಲ್ಲಿ ಬಲಿಷ್ಠ ಸನ್‌ರೈಸರ್ಸ್ ತಂಡವನ್ನು ಅವರ ತವರಿನಲ್ಲೇ ಐದು ವಿಕೆಟ್‌ಗಳಿಂದ ಮಣಿಸಿತ್ತು. ನಿಕೋಲಸ್ ಪೂರನ್ 70 ರನ್ (23 ಎಸೆತ) ಮತ್ತು ಮಿಚೆಲ್ ಮಾರ್ಷ್ 52 ರನ್ (31 ಎಸೆತ) ಬ್ಯಾಟಿಂಗ್‌ನಲ್ಲಿ ಮಿಂಚಿದರೆ, ಶಾರ್ದೂಲ್ ಠಾಕೂರ್ ನಾಲ್ಕು ವಿಕೆಟ್ ಪಡೆದು ಎದುರಾಳಿ ಬ್ಯಾಟರ್‌ಗಳನ್ನು ಕಟ್ಟಿ ಹಾಕಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಮೊದಲೆರಡು ಪಂದ್ಯಗಳಲ್ಲಿ ಕ್ರಮವಾಗಿ 0 ಮತ್ತು 15 ರನ್ ಗಳಿಸಿದ್ದ ಪಂತ್ ಟೀಕಾಕಾರರಿಗೆ ಆಹಾರವಾಗಿದ್ದರು. 27 ವರ್ಷ ವಯಸ್ಸಿನ ವಿಕೆಟ್‌ಕೀಪರ್–ಬ್ಯಾಟರ್ ಪಂತ್ ಅವರು ಈ ಪಂದ್ಯದಲ್ಲಿ ಲಯ ಕಂಡುಕೊಳ್ಳುವ ಒತ್ತಡದಲ್ಲಿದ್ದಾರೆ. ಅಲ್ಲದೇ, ಇದೇ ಮೊದಲ ಬಾರಿಗೆ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಮಾಜಿ ಕೋಚ್ ರಿಕಿ ಪಾಂಟಿಂಗ್ ಅವರನ್ನು ಎದುರಿಸಲಿದ್ದಾರೆ. ಈ ಋತುವಿನಲ್ಲಿ ಪಾಂಟಿಂಗ್ ಪಂಜಾಬ್ ಕಿಂಗ್ಸ್ ತಂಡಕ್ಕೆ ಮಾರ್ಗದರ್ಶನ ನೀಡುತ್ತಿದ್ದಾರೆ. ಪಂತ್ ಈ ಹಿಂದೆ ಡೆಲ್ಲಿ ತಂಡವನ್ನು ಪ್ರತಿನಿಧಿಸಿದ್ದರು.



ರಿಷಭ್ ಪಂತ್ – ಪಿಟಿಐ ಚಿತ್ರ

ಗುಜರಾತ್ ಟೈಟನ್ಸ್ ವಿರುದ್ಧ 11 ರನ್‌ಗಳ ಜಯಸಾಧಿಸಿ ಪಂಜಾಬ್ ತಂಡವು ಐಪಿಎಲ್‌ನಲ್ಲಿ ಶುಭಾರಂಭ ಮಾಡಿದೆ. ಈ ಪಂದ್ಯದಲ್ಲಿ ಶ್ರೇಯಸ್ 42 ಎಸೆತಗಳಲ್ಲಿ ಅಜೇಯ 97 ರನ್ ಗಳಿಸಿ ತಮ್ಮ ಸಾಮರ್ಥ್ಯವನ್ನು ಮೊದಲ ಪಂದ್ಯದಲ್ಲೇ ಸಾಬೀತುಪಡಿಸಿದ್ದಾರೆ. ಕಳೆದ ಬಾರಿಯ ಚಾಂಪಿಯನ್ ಆಗಿದ್ದ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಮುನ್ನಡೆಸಿದ್ದ ಶ್ರೇಯಸ್, ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿ ಯಶಸ್ವಿಯಾಗಿದ್ದಾರೆ. ಹೀಗಾಗಿ ಅದೇ ಕ್ರಮಾಂಕವನ್ನು ಕಾಯ್ದುಕೊಳ್ಳುವ ಸಾಧ್ಯತೆಯಿದೆ.



ಶ್ರೇಯಸ್ ಅಯ್ಯರ್

ಬಲಾಬಲ

ಪಂದ್ಯ	4
ಲಖನೌ ಗೆಲುವು	3
ಪಂಜಾಬ್ ಗೆಲುವು	1

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ಸಂಕ್ಷಿಪ್ತ ಸುದ್ದಿ

ಕ್ರಿಕೆಟ್ ತರಬೇತಿ ಶಿಬಿರ 2ರಿಂದ

ಬೆಂಗಳೂರು: ಹೆರಾನ್ಸ್ ಕ್ರಿಕೆಟ್ ಕ್ಲಬ್‌ನ ಆಶ್ರಯದಲ್ಲಿ 26ನೇ ಕ್ರಿಕೆಟ್ ತರಬೇತಿ ಬೇಸಿಗೆ ಶಿಬಿರ ಇದೇ 2ರಿಂದ 22ರವರೆಗೆ ನಗರದ ಎನ್.ಆರ್. ಕಾಲೊನಿಯ ಎಪಿಎಸ್ ಕಾಲೇಜು ಮೈದಾನದಲ್ಲಿ ನಡೆಯಲಿದೆ. ಮಾಹಿತಿಗಾಗಿ ಸಂಘಟನಾ ಕಾರ್ಯದರ್ಶಿ ಕೆ. ಮುರಳೀಧರ (9845096056) ಅವರನ್ನು ಸಂಪರ್ಕಿಸಬೇಕು.

ಸೈಕ್ಲಿಂಗ್: ಕರ್ನಾಟಕಕ್ಕೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ಸೈಕ್ಲಿಂಗ್ ತಂಡವು ಹರಿಯಾಣದ ಪಂಚಕುಲಾದಲ್ಲಿ ಸೋಮವಾರ ನಡೆದ 21ನೇ ರಾಷ್ಟ್ರೀಯ ಮೌಂಟೇನ್ ಬೈಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು. ಕರ್ನಾಟಕದ ಸೈಕ್ಲಿಸ್ಟ್‌ಗಳು 11 ಚಿನ್ನ, 2 ಬೆಳ್ಳಿ ಮತ್ತು 2 ಕಂಚಿನ ಪದಕಗಳನ್ನು ಜಯಿಸಿದರು.

ವೈಯಕ್ತಿಕ ವಿಭಾಗದ ವಿಜೇತರು:ನಿಥಿಲಾ ದಾಸ್ (16 ವರ್ಷದೊಳಗಿನ ಬಾಲಕಿಯರ ವಿಭಾಗ ; 2 ಲ್ಯಾಪ್ಸ್ ಟೈಂ ಟ್ರಯಲ್ಸ್‌ನಲ್ಲಿ ಚಿನ್ನ, 2 ಲ್ಯಾಪ್ಸ್ ಮಾಸ್ ಸ್ಟಾರ್ಟ್‌ನಲ್ಲಿ ಚಿನ್ನ), ಕಯಾನಾ ಬರುವಾ (16 ವರ್ಷದೊಳಗಿನವ ಬಾಲಕಿಯರು–2 ಲ್ಯಾಪ್ಸ್ ಟೈಮ್ ಟ್ರಯಲ್ಸ್ ಚಿನ್ನ), ಧನುಷ್ ಪ್ರಶಾಂತ್ (16 ವರ್ಷದೊಳಗಿನ ಬಾಲಕರ ವಿಭಾಗ–2 ಲ್ಯಾಪ್ಸ್ ಟೈಂ ಟ್ರಯಲ್ಸ್ ಮತ್ತು 4 ಲ್ಯಾಪ್ಸ್ ಮಾಸ್ಸ್ಟಾರ್ಸ್ ಚಿನ್ನ), ರೆಹಾನ್ ರೋಷನ್ (ಕಂಚಿನ ಪದಕ), ಧನಂಜಯ ಎಸ್ ಟಿ(18 ವರ್ಷದೊಳಗಿನವರು; ಬೆಳ್ಳಿ), ಪವಿತ್ರಾ ಕುರ್ತಕೋಟಿ (18 ವರ್ಷದೊಳಗಿನ ಬಾಲಕಿಯರು; ಎರಡು ಚಿನ್ನ), ಸ್ಟಾರ್ ಸರಜಾರಿ (ಮಹಿಳೆಯರ ವಿಭಾಗ; ಎರಡು ಚಿನ್ನ), ಚರಿತ್‌ಗೌಡ (23 ವರ್ಷದೊಳಗಿನ ಬಾಲಕರು; ಚಿನ್ನ) ಸಮರ್ಪಣ್ ಜೈನ್ (18 ವರ್ಷದೊಳಗಿನ ಡೌನ್ ಹಿಲ್ ಬೆಳ್ಳಿ) .

ಕೊಡವ ಹಾಕಿ: ಕೆಳಪಂಡಕ್ಕೆ ಗೆಲುವು

ಮಡಿಕೇರಿ: ಕೆಳಪಂಡ ತಂಡವು ಇಲ್ಲಿ ನಡೆಯುತ್ತಿರುವ 'ಮುದ್ದಂಡ ಕಪ್' ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ 6–0 ಗೋಲುಗಳಿಂದ ತೆನ್ನಿರಾ ವಿರುದ್ಧ ಭರ್ಜರಿ ಜಯ ದಾಖಲಿಸಿತು.

ಇನ್ನುಳಿದ ಪಂದ್ಯಗಳಲ್ಲಿ; ಪುಚ್ಚಿಮಾಡ ತಂಡವು 3–0ಯಿಂದ ಮಂಡೀರ (ಮಾದಪುರ) ವಿರುದ್ಧ; ಚೆಯ್ಯಂಡ 5–0ಯಿಂದ ಮುಕ್ಕಾಟಿರ ವಿರುದ್ಧ; ಕಾಂಗಂಡ 2–0ಯಿಂದ ಪುಚ್ಚಿಮಂಡ ವಿರುದ್ಧ; ಕುಪ್ಪಂಡ 2–1ರಿಂದ ಬೊಳ್ಳೆಪಂಡ ವಿರುದ್ಧ; ಮರ್ಚಂಡ 5–0ಯಿಂದ ಮಾಣೀರ ವಿರುದ್ಧ; ಪಳೆಯಂಡ 3–0ಯಿಂದ ಗೌಡಂಡ ವಿರುದ್ಧ; ಚೆಟ್ಟಿಯಾರಂಡ 1–0ಯಿಂದ ಚಿಕ್ಕಂಡ ವಿರುದ್ಧ; ನಂದೇಟಿರ 2–1 ರಿಂದ ಕಲ್ಲೇಂಗಡ (ನಾಪೋಕ್ಲು) ವಿರುದ್ಧ; ದಾಸಂಡ 4–0ಯಿಂದ ಪಾಸುರ ವಿರುದ್ಧ; ಬೊಪ್ಪಂಡ 5–1ರಿಂದ ಕರ್ತುರ ವಿರುದ್ಧ ಜಯ ಗಳಿಸಿದವು.

ಮೈನಪಂಡ ತಂಡವು 3–2ರಿಂದ ಕೂಪದಿರ ಎದುರು; ಮಲ್ಲಮಾಡ 5–2ರಿಂದ ಮಲ್ಲಜಿರ ಎದುರು; ಮಾದಂಡ 4–0ಯಿಂದ ಕೇಕಡ ಎದುರು; ಚಂಗುಲಂಡ 3–1ರಿಂದ ಕಬ್ಬಚ್ಚಿರ ಎದುರು; ಮೆಚಂಡ 4–0ಯಿಂದ ಕೀತಿಯಂಡ ಎದುರು; ವಾಟೇರಿರ 3–0ಯಿಂದ ಕೆಟೋಳಿರ ಎದುರು ಹಾಗೂ ಕಿಚೆಟಿರ 2–1ರಿಂದ ಕೊದೆಂಗಡ ಎದುರು ಗೆಲುವು ಸಾಧಿಸಿದವು.

ಧೋನಿಗೆ ದೀರ್ಘ ಬ್ಯಾಟಿಂಗ್ ಅಸಾಧ್ಯ: ಸ್ಟೀಫನ್ ಫ್ಲೆಮಿಂಗ್

ಗುವಾಹಟಿ (ಪಿಟಿಐ): ಮಹೇಂದ್ರಸಿಂಗ್ ಧೋನಿ ಅವರು ಹತ್ತು ಓವರ್‌ಗಳಷ್ಟು ಬ್ಯಾಟಿಂಗ್ ಮಾಡುವ ಸಾಮರ್ಥ್ಯ ಹೊಂದಿಲ್ಲ. ಅವರಿಗೆ ಮೊಣಕಾಲಿನ ಗಾಯ ಪೂರ್ಣ ಶಮನವಾಗಿಲ್ಲ. ಆದ್ದರಿಂದಲೇ ಅವರು 13–14ನೇ ಓವರ್ ನಂತರ ಪರಿಸ್ಥಿತಿಯನ್ನು ಅವಲೋಕಿಸಿ ಬ್ಯಾಟಿಂಗ್ ಮಾಡಲು ಬರುತ್ತಿದ್ದಾರೆ ಎಂದು ಚೆನ್ನೈ ಸೂಪರ್ ಕಿಂಗ್ಸ್ ತಂಡದ ಮುಖ್ಯ ಕೋಚ್ ಸ್ಟೀಫನ್ ಫ್ಲೆಮಿಂಗ್ ಸ್ಪಷ್ಟಪಡಿಸಿದ್ದಾರೆ.

ಈಚೆಗೆ ಚೆಪಾಕ್‌ನಲ್ಲಿ ಚೆನ್ನೈ ತಂಡವು ರಾಯಲ್ ಚಾಲೆಂಜರ್ಸ್ ಬೆಂಗಳೂರು ಎದುರು 50 ರನ್‌ಗಳಿಂದ ಸೋತಿತ್ತು. ಆ ಪಂದ್ಯದಲ್ಲಿ ಧೋನಿ 9ನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದಿದ್ದರು. ಇದರಿಂದಾಗಿ ಅವರು ಸಾಮಾಜಿಕ ಜಾಲತಾಣಗಳಲ್ಲಿ ಅಪಾರ ಟೀಕೆಗಳನ್ನು ಎದುರಿಸಬೇಕಾಯಿತು.

ಈ ಕುರಿತು ಫ್ಲೆಮಿಂಗ್ ಅವರು ಭಾನುವಾರ ರಾಜಸ್ಥಾನ ರಾಯಲ್ಸ್ ಎದುರಿನ ಪಂದ್ಯದ ನಂತರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

'ಅವರ ದೇಹ ಮತ್ತು ಮೊಣಕಾಲುಗಳು ಈ ಹಿಂದೆ ಇದ್ದಂತೆ ಈಗ ಇಲ್ಲ. ಇನಿಂಗ್ಸ್‌ನಲ್ಲಿ 10 ಓವರ್‌ಗಳಷ್ಟು ಅವಧಿಯಲ್ಲಿ ಬ್ಯಾಟಿಂಗ್ ಮಾಡಿ ಓಡುವ ಸಾಮರ್ಥ್ಯ ಪೂರ್ಣಪ್ರಮಾಣದಲ್ಲಿ ಇಲ್ಲ. ಪಂದ್ಯದ ದಿನ ಅವರು ತಮ್ಮ ದೈಹಿಕ ಸಾಮರ್ಥ್ಯವನ್ನು ಅಳೆದುಕೊಂಡು ಯಾವ ಸಂದರ್ಭದಲ್ಲಿ ಬ್ಯಾಟಿಂಗ್‌ಗೆ ಬರಬೇಕು ಎಂಬುದನ್ನು ನಿರ್ಧರಿಸುತ್ತಾರೆ. ಒಂದು ವೇಳೆ ಪಂದ್ಯವು ಸಮತೋಲನವಾಗಿದ್ದರೆ (ರಾಜಸ್ಥಾನ ರಾಯಲ್ಸ್ ವಿರುದ್ಧದ ಹಣಾಹಣಿಯ ರೀತಿ) ಅವರು ಸ್ವಲ್ಪ ಮೇಲಿನ ಕ್ರಮಾಂಕದಲ್ಲಿ ಕ್ರೀಸ್‌ಗೆ ಬರುತ್ತಾರೆ. ಉಳಿದ ಆಟಗಾರರಿಗೆ ಬೆಂಬಲವಾಗಿ ನಿಲ್ಲುತ್ತಾರೆ. ಅವರು ಒಟ್ಟಾರೆ ಇನಿಂಗ್ಸ್ ಅನ್ನು ಸಮತೋಲನಗೊಳಿಸಲು ಪ್ರಯತ್ನಿಸುತ್ತಾರೆ. ನಾನು ಇದನ್ನು ಹೋದ ವರ್ಷವೂ ಹೇಳಿದ್ದೆ' ಎಂದರು.



ಧೋನಿ

'ನಮ್ಮ ತಂಡಕ್ಕೆ ಧೋನಿಯ ಮಹತ್ವ ಬಹಳ ಇದೆ. ಅವರ ನಾಯಕತ್ವ ಗುಣ, ಅನುಭವ ಮತ್ತು ವಿಕೆಟ್‌ಕೀಪಿಂಗ್ ಅಮೂಲ್ಯವಾದುದು' ಎಂದರು.

ಭಾನುವಾರ ರಾಜಸ್ಥಾನ ಎದುರಿನ ಪಂದ್ಯದಲ್ಲಿ ಧೋನಿ ಏಳನೇ ನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದರು. ಆಗ ತಂಡದ ಗೆಲುವಿಗೆ 25 ಎಸೆತಗಳಲ್ಲಿ 54 ರನ್‌ಗಳ ಅಗತ್ಯವಿತ್ತು. ಧೋನಿ 11 ಎಸೆತಗಳಲ್ಲಿ 16 ರನ್ ಮಾತ್ರ ಗಳಿಸಿದರು. ಚೆನ್ನೈ ತಂಡವು 6 ರನ್‌ಗಳಿಂದ ಸೋತಿತು.

ಅಕ್ಟೋಬರ್‌ನಲ್ಲಿ ಆಸ್ಟ್ರೇಲಿಯಾಕ್ಕೆ ಭಾರತ ಕ್ರಿಕೆಟ್ ತಂಡ

ಮೆಲ್ಬರ್ನ್(ಪಿಟಿಐ): ಭಾರತ ಕ್ರಿಕೆಟ್ ತಂಡವು ಅಕ್ಟೋಬರ್–ನವೆಂಬರ್‌ನಲ್ಲಿ ಆಸ್ಟ್ರೇಲಿಯಾ ಪ್ರವಾಸ ಮಾಡಲಿದೆ. ಈ ಸಂದರ್ಭದಲ್ಲಿ ಮೂರು ಏಕದಿನ ಮತ್ತು ಐದು ಟಿ20 ಪಂದ್ಯಗಳನ್ನು ಆಡಲಿದೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾ (ಸಿಎ) ಭಾನುವಾರ ತಿಳಿಸಿದೆ.

ಅಕ್ಟೋಬರ್ 19 ರಿಂದ ನವೆಂಬರ್ 8ರವರೆಗೆ ಈ ಸರಣಿಗಳು ನಡೆಯಲಿವೆ. ಏಕದಿನ ಪಂದ್ಯಗಳು ಹಗಲು–ರಾತ್ರಿ ಅವಧಿಯಲ್ಲಿ ನಡೆಯಲಿವೆ. ಟಿ20 ಪಂದ್ಯ ಗಳು ರಾತ್ರಿ ನಡೆಯಲಿವೆ. 2025–26ನೇ ಸಾಲಿನಲ್ಲಿ ಆಸ್ಟ್ರೇಲಿಯಾದ ಎಲ್ಲ ಎಂಟು ಕ್ರೀಡಾಂಗಣಗಳಲ್ಲಿ ನಡೆಯಲಿರುವ ಮೊದಲ ಸರಣಿ ಇದಾಗಿದೆ. ಕ್ಯಾನಬೆರಾ ಮತ್ತು ಹೋಬರ್ಟ್‌ಗಳಲ್ಲಿಯೂ ಟಿ20 ಪಂದ್ಯಗಳು ನಡೆಯಲಿವೆ.

ವೇಳಾಪಟ್ಟಿ: ಏಕದಿನ ಪಂದ್ಯಗಳು, ಪರ್ತ್ (ಅ.19), ಅಡಿಲೇಡ್ ಓವಲ್ (ಅ.23), ಸಿಡ್ನಿ (ಅ.25). ಟಿ20 ಪಂದ್ಯಗಳು: ಕ್ಯಾನ್‌ಬೆರಾ (ಅ.29), ಮೆಲ್ಬರ್ನ್ (ಅ.31), ಹೊಬರ್ಟ್ (ನ.2), ಗೋಲ್ಡ್‌ಕೋಸ್ಟ್ (ನ.6), ಬ್ರಿಸ್ಬೇನ್, ಗಾಬಾ (ನ.8)



ಅಖಿಲ ಭಾರತ ಅಂತರ ಕಾಲೇಜು ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದ ಬೆಂಗಳೂರಿನ ರಾಮಯ್ಯ ತಾಂತ್ರಿಕ ಕಾಲೇಜು ತಂಡ. ಎಡದಿಂದ (ನಿಂತವರು) ಆರೋನ್, ಅರಿಜೀತ್, ಧ್ರುವ, ಪ್ರಾಣೇಶ್, ಸಚಿನ್ ಬೆಳವಾಡಿ (ಕೋಚ್), ಶಿವಂ, ಜೋಶುವಾ, ಶ್ರೀನಿವಾಸ್ ಪಾರ್ಥಿವ್, ಆದರ್ಶ್. (ಕುಳಿತವರು) ಜಯದೇವ್, ಕನಿಷ್ಕ, ಚಿರಂತನ್, ವೇದ್ ಶೆಟ್ಟಿ, ರಣವೀರ್

ಯುಗಾದಿಯಂದು ಚೆನ್ನೈ, ಹೈದರಾಬಾದ್‌ಗೆ ಕಹಿ

ರಾಯಲ್ಸ್, ಡೆಲ್ಲಿಗೆ ಸಿಹಿ

ಗುವಾಹಟಿ (ಪಿಟಿಐ): ನಿತೀಶ್ ರಾಣಾ (81; 36ಎ, 4X10, 6X5) ಅವರ ಅಬ್ಬರದ ಅರ್ಧಶತಕ ಮತ್ತು ವಣಿಂದು ಹಸರಂಗ (35ಕ್ಕೆ4) ಅವರ ಚುರುಕಿನ ಬೌಲಿಂಗ್ ಬಲದಿಂದ ರಾಜಸ್ಥಾನ ರಾಯಲ್ಸ್ ತಂಡವು ಚೆನ್ನೈ ಸೂಪರ್ ಕಿಂಗ್ಸ್ ಎದುರು 6 ರನ್‌ಗಳಿಂದ ಗೆದ್ದಿತು.

ಬರ್ಸಾಪರ ಕ್ರಿಕೆಟ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಚೆನ್ನೈ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಿತೀಶ್ ಬ್ಯಾಟಿಂಗ್ ಬಲದಿಂದ ರಾಜಸ್ಥಾನ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 182 ರನ್ ಗಳಿಸಿತು. ಅದಕ್ಕುತ್ತರವಾಗಿ ಚೆನ್ನೈ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 176 ರನ್ ಗಳಿಸಿತು. ನಾಯಕ ಋತುರಾಜ್ ಗಾಯಕವಾಡ (63; 44ಎ, 4X7, 6X1) ಮತ್ತು ರವೀಂದ್ರ ಜಡೇಜ (ಔಟಾಗದೇ 32; 22ಎ, 4X2, 6X1) ಅವರ ಪ್ರಯತ್ನಕ್ಕೆ ಜಯ ಸಿಗಲಿಲ್ಲ. ಐಪಿಎಲ್‌ನಲ್ಲಿ ಸತತ ಎರಡನೇ ಪಂದ್ಯದಲ್ಲಿ ತಂಡವು ಸೋತಿತು.

'ನಮಗೆ ಉತ್ತಮ ಆರಂಭ ದೊರೆಯುತ್ತಿಲ್ಲ. ಆರಂಭಿಕ ಬ್ಯಾಟರ್‌ಗಳಿಂದ ಉತ್ತಮ ಆಟ ಮೂಡಿಬಂದರೆ ಪರಿಸ್ಥಿತಿ ಬೇರೆಯೇ ಆಗಿರುತ್ತದೆ. ಅಲ್ಲದೇ ನಾವು ಫೀಲ್ಡಿಂಗ್ ಲೋಪಗಳಿಂದಾಗಿ ಹೆಚ್ಚುವರಿ 8–10 ರನ್ ಬಿಟ್ಟುಕೊಟ್ಟೆವು. ಈ ವಿಭಾಗದಲ್ಲಿ ನಾವು ಇನ್ನೂ ಬಹಳಷ್ಟು ಸುಧಾರಣೆಯಾಗಬೇಕು' ಎಂದು ಪಂದ್ಯದ ನಂತರ ನಾಯಕ ಋತುರಾಜ್ ಮಾಧ್ಯಮದವರಿಗೆ ಹೇಳಿದರು.

ಈಚೆಗಷ್ಟೇ ಚೆನ್ನೈ ತಂಡವು ರಾಯಲ್ ಚಾಲೆಂಜರ್ಸ್ ಬೆಂಗಳೂರು ಎದುರು ಸೋತಿತ್ತು.

ಸಂಕ್ಷಿಪ್ತ ಸ್ಕೋರು: ರಾಜಸ್ಥಾನ ರಾಯಲ್ಸ್: 20 ಓವರ್‌ಗಳಲ್ಲಿ 9ಕ್ಕೆ182 (ಸಂಜು ಸ್ಯಾಮ್ಸನ್ 20, ನಿತೀಶ್ ರಾಣಾ 81, ರಿಯಾನ್ ಪರಾಗ್ 37, ಖಲೀಲ್ ಅಹಮದ್ 38ಕ್ಕೆ2, ನೂರ್ ಅಹಮದ್ 28ಕ್ಕೆ2, ಮಥೀಷ ಪಥಿರಾಣ 28ಕ್ಕೆ2) **ಚೆನ್ನೈ ಸೂಪರ್ ಕಿಂಗ್ಸ್:** 20 ಓವರ್‌ಗಳಲ್ಲಿ 6ಕ್ಕೆ176 (ರಾಹುಲ್ ತ್ರಿಪಾಠಿ 23, ಋತುರಾಜ್ ಗಾಯಕವಾಡ 63, ಶಿವಂ ದುಬೆ 18, ರವೀಂದ್ರ ಜಡೇಜ ಔಟಾಗದೇ 32, ಮಹೇಂದ್ರಸಿಂಗ್ ಧೋನಿ 16, ಹಸರಂಗಾ 35ಕ್ಕೆ4) ಫಲಿತಾಂಶ: ರಾಜಸ್ಥಾನ ರಾಯಲ್ಸ್ 6 ರನ್‌ಗಳ ಜಯ. ಪಂದ್ಯದ ಆಟಗಾರ: ನಿತೀಶ್ ರಾಣಾ.

ಸ್ಟಾರ್ಕ್ ದಾಳಿಗೆ ಕುಸಿದ ಸನ್

ವಿಶಾಖಪಟ್ಟಣ (ಪಿಟಿಐ): ವೇಗಿ ಮಿಚೆಲ್ ಸ್ಟಾರ್ಕ್ ಪರಿಣಾಮ ಕಾರಿ ದಾಳಿಯ ಮುಂದೆ ಸನ್‌ರೈಸರ್ಸ್ ಹೈದರಾಬಾದ ತಂಡದ ಬ್ಯಾಟರ್‌ಗಳ ಅಬ್ಬರ ಅಡಗಿತು. ಅಕ್ಷರ್ ಪಟೇಲ್ ನಾಯಕತ್ವದ ಡೆಲ್ಲಿ ಕ್ಯಾಪಿಟಲ್ಸ್ 7 ವಿಕೆಟ್‌ಗಳಿಂದ ಗೆದ್ದಿತು.

ಭಾನುವಾರ ಮಧ್ಯಾಹ್ನ ಎಸಿಎ–ವಿಡಿಸಿಎ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮಿಚೆಲ್ (3.4–0–35–5) ದಾಳಿಯ ಎದುರು ಸನ್‌ರೈಸರ್ಸ್ ತಂಡವು 18.4 ಓವರ್‌ಗಳಲ್ಲಿ 163 ರನ್ ಗಳಿಸಿತು. ಈ ಗುರಿಯನ್ನು ಡೆಲ್ಲಿ ತಂಡವು 16 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಮುಟ್ಟಿತು. ಫಾಫ್ ಡುಪ್ಲೆಸಿ 27 ಎಸೆತಗಳಲ್ಲಿ 50 ರನ್ ಹೊಡೆದರು. 3 ಬೌಂಡರಿ ಮತ್ತು 3 ಸಿಕ್ಸರ್ ಗಳಿಸಿದರು. ಕೆ.ಎಲ್. ರಾಹುಲ್ 5 ಎಸೆತಗಳಲ್ಲಿ 15 ರನ್ ಗಳಿಸಿದರು.

'ಸತತ ಎರಡು ಪಂದ್ಯಗಳಲ್ಲಿ ಸೋತಿದ್ದೇವೆ. ಆದರೆ ವಿಚಲಿತರಾಗಿಲ್ಲ. ಟೂರ್ನಿಯಲ್ಲಿ ಇನ್ನೂ ಸಮಯವಿದೆ. ತಿರುಗೇಟು ನೀಡಲು ಬದ್ಧರಾಗಿದ್ದೇವೆ' ಎಂದು ಹೈದರಾಬಾದ್ ತಂಡದ ನಾಯಕ ಪ್ಯಾಟ್ ಕಮಿನ್ಸ್ ಹೇಳಿದ್ದಾರೆ.

ಸಂಕ್ಷಿಪ್ತ ಸ್ಕೋರು: ಸನ್‌ರೈಸರ್ಸ್ ಹೈದರಾಬಾದ್: 18.4 ಓವರ್‌ಗಳಲ್ಲಿ 163 (ಟ್ರಾವಿಸ್ ಹೆಡ್ 22, ಅನಿಕೇತ್ ವರ್ಮಾ 74, ಎನ್ರಿಚ್ ಕ್ಲಾಸೆನ್ 32, ಮಿಚೆಲ್ ಸ್ಟಾರ್ಕ್ 35ಕ್ಕೆ5, ಮೋಹಿತ್ ಶರ್ಮಾ 25ಕ್ಕೆ1, ಕುಲದೀಪ್ ಯಾದವ್ 22ಕ್ಕೆ3) ಡೆಲ್ಲಿ ಕ್ಯಾಪಿಟಲ್ಸ್: 16 ಓವರ್‌ಗಳಲ್ಲಿ 3ಕ್ಕೆ166 (ಜೇಕ್ ಫ್ರೆಸರ್ ಮೆಕ್‌ಗುರ್ಕ್ 38, ಫಾಫ್ ಡುಪ್ಲೆಸಿ 50, ಅಭಿಷೇಕ್ ಪೊರೆಲ್ ಔಟಾಗದೇ 34, ಕೆ.ಎಲ್. ರಾಹುಲ್ 15, ಟ್ರಿಸ್ಟನ್ ಸ್ಟಬ್ಸ್ ಔಟಾಗದೇ 21, ಜೀಶನ್ ಅನ್ಸಾರಿ 42ಕ್ಕೆ3) ಪಂದ್ಯ ಆಟಗಾರ: ಮಿಚೆಲ್ ಸ್ಟಾರ್ಕ್.



ನಿತೀಶ್ ರಾಣಾ

ಮಿಚೆಲ್‌ಸ್ಟಾರ್ಕ್

ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್: ಭಾರತಕ್ಕೆ 10 ಪದಕ

ಪೂನಿಯಾ, ಉದಿತ್‌ಗೆ ಬೆಳ್ಳಿ

ಅಮ್ಮಾನ್ (ಪಿಟಿಐ): ಯುವ ಕುಸ್ತಿಪಟುಗಳಾದ ದೀಪಕ್ ಪೂನಿಯಾ ಮತ್ತು ಉದಿತ್ ಅವರು ಏಷ್ಯನ್ ಚಾಂಪಿಯನ್‌ಷಿಪ್‌ನ ಕೊನೆಯ ದಿನವಾದ ಭಾನುವಾರ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದರು. ಇದರೊಂದಿಗೆ 10 ಪದಕಗಳೊಂದಿಗೆ ಭಾರತ ಅಭಿಯಾನ ಮುಗಿಸಿತು.

25 ವರ್ಷ ವಯಸ್ಸಿನ ಪೂನಿಯಾಗೆ ಇದು ಮೂರನೇ ಬೆಳ್ಳಿ ಸೇರಿದಂತೆ ಒಟ್ಟಾರೆ ಐದನೇ ಪದಕ. 92 ಕೆ.ಜಿ ವಿಭಾಗದ ಫೈನಲ್ ಸ್ಪರ್ಧೆಯಲ್ಲಿ 0–10ರಿಂದ ವಿಶ್ವದ ಅಗ್ರಮಾನ್ಯ ಕುಸ್ತಿಪಟು ಅಮೀರ್ ಹುಸೇನ್ (ಇರಾನ್) ವಿರುದ್ಧ ಪರಾಭವಗೊಂಡರು.

ಇದಕ್ಕೂ ಮೊದಲು ಸೆಮಿಫೈನಲ್‌ನಲ್ಲಿ ಭಾರತದ ಪೈಲ್ವಾನ್ 8–1ರಿಂದ ಜಪಾನ್‌ನ ತಕಾಶಿ ಇಶಿಗುರೊ ವಿರುದ್ಧ ನಿರಾಯಾಸದ ಗೆಲುವು ಸಾಧಿಸಿದ್ದರು. ಕ್ವಾರ್ಟರ್‌ಫೈನಲ್‌ನಲ್ಲಿ 12–7ರಿಂದ ಕಜಕಿಸ್ತಾನದ ಬೆಕ್ಜತ್ ರಾಖಿಮೋವ್ ಅವರನ್ನು ಮಣಿಸಿದ್ದರು. ಪೂನಿಯಾ ಅವರು 2021 ಮತ್ತು 2022ರ ಆವೃತ್ತಿಯಲ್ಲಿ ಬೆಳ್ಳಿ ಪದಕ ಮತ್ತು 2019 ಮತ್ತು 2020ರ ಆವೃತ್ತಿಯಲ್ಲಿ ಕಂಚಿನ ಪದಕ ಗೆದ್ದಿದ್ದರು.



ಬೆಳ್ಳಿ ಪದಕದೊಂದಿಗೆ ದೀಪಕ್ ಪೂನಿಯಾ

ಉದಿತ್‌ಗೆ ಬೆಳ್ಳಿ: 61 ಕೆ.ಜಿ ವಿಭಾಗದ ಫೈನಲ್‌ನಲ್ಲಿ ಉದಿತ್ 4–6ರಿಂದ ವಿಶ್ವದ ಅಗ್ರಮಾನ್ಯ ಕುಸ್ತಿಪಟು ಟಕಾರಾ ಸುದಾ (ಜಪಾನ್) ವಿರುದ್ಧ ಮುಗ್ಗರಿಸಿದರು. ಇದಕ್ಕೂ ಮೊದಲು ಉದಿತ್ ಸೆಮಿಫೈನಲ್‌ನಲ್ಲಿ 2–0ಯಿಂದ ಚೀನಾದ ವಾನ್ಹಾವೊ ಝೌ ವಿರುದ್ಧ, ಕ್ವಾರ್ಟರ್ ಫೈನಲ್‌ನಲ್ಲಿ 9–6ರಿಂದ ಕಿರ್ಗಿಸ್ತಾನ ಬೆಕ್‌ಬೋಲೋಟ್ ಮೈರ್ಜಾಂಜರ್ ವಿರುದ್ಧ ಗೆಲುವು ಸಾಧಿಸಿದ್ದರು. ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಉದಿತ್‌ಗೆ ಇದು ಎರಡನೇ ಬೆಳ್ಳಿ ಪದಕವಾಗಿದೆ.

ದಿನೇಶ್‌ಗೆ ಕಂಚು: ಹೆವಿವೇಯ್ಟ್ (125 ಕೆ.ಜಿ) ವಿಭಾಗದಲ್ಲಿ ದಿನೇಶ್ ಕಂಚಿನ ಪದಕ ಗೆದ್ದರು. ಕ್ವಾರ್ಟರ್ ಫೈನಲ್‌ನಲ್ಲಿ ಭಾರತದ ಪೈಲ್ವಾನ್ 11–0ಯಿಂದ ಚೀನಾದ ಬುಹೀರ್ಡನ್ ಅವರನ್ನು ತಾಂತ್ರಿಕ ಶ್ರೇಷ್ಠತೆ ಆಧಾರದಲ್ಲಿ ಸೋಲಿಸಿದ್ದರು. ಆದರೆ, ಸೆಮಿಫೈನಲ್‌ನಲ್ಲಿ 1–5ರಿಂದ ಮಂಗೋಲಿಯಾದ ಲಖಾಗ್ವಾಗರೆಲ್ ಮುಂಖ್ತೂರ್ ವಿರುದ್ಧ ಪರಾಭವಗೊಂಡರು.

ಕಂಚಿನ ಪದಕದ ಪ್ಲೇ ಆಫ್ ಪಂದ್ಯದಲ್ಲಿ ದಿನೇಶ್ 14–12ರಿಂದ ತುರ್ಕಮೆನಿಸ್ತಾನದ ಸಪರೋವ್ ಝಿಯಮುಹಮ್ಮೆಟ್ ಅವರನ್ನು ಸೋಲಿಸಿದರು.

ಗುಲ್ವೀರ್ ಸಿಂಗ್: ವೈಯಕ್ತಿಕ ಅತ್ಯುತ್ತಮ ಪ್ರದರ್ಶನ

ನವದೆಹಲಿ (ಪಿಟಿಐ): ಭಾರತದ ದೂರ ಅಂತರದ ಓಟಗಾರ ಗುಲ್ವೀರ್ ಸಿಂಗ್ ದಿ ಟೆನ್ ಟ್ರ್ಯಾಕ್ ಫೆಸ್ಟಿವಲ್ ಕ್ರೀಡಾಕೂಟದ 10 ಸಾವಿರ ಮೀಟರ್ ಓಟದ ಸ್ಪರ್ಧೆಯಲ್ಲಿ ಸುಧಾರಿಸಿದ್ದು ವೈಯಕ್ತಿಕ ಅತ್ಯುತ್ತಮ ಪ್ರದರ್ಶನ ನೀಡಿದ್ದಾರೆ.



ಗುಲ್ವೀರ್ ಸಿಂಗ್

ಕ್ಯಾಲಿಫೋರ್ನಿಯಾದ ಸಾನ್ ಜುಹಾನ್ ಕ್ಯಾಪಿಸ್ಟ್ರಾನೊ ಕೂಟದಲ್ಲಿ 27:00.22 ನಿಮಿಷಗಳಲ್ಲಿ ಗುರಿ ಮುಟ್ಟಿ ಆರನೆ ಸ್ಥಾನ ಪಡೆದರು. ಕಳೆದ ವರ್ಷ ಜಪಾನ್‌ನಲ್ಲಿ ನಡೆದ ಕ್ರೀಡಾಕೂಟದಲ್ಲಿ ಗುಲ್ವೀರ್ ಸಿಂಗ್ 27:14.88 ನಿಮಿಷಗಳಲ್ಲಿ ಗುರಿಮುಟ್ಟಿದ್ದರು.

ಅಮೆರಿಕದ ಜೋಯೆ ಬೆರ್ರಿಯಾಟುವಾ 10ಕೆ ರೇಸ್ ಓಟದಲ್ಲಿ 4 ಸಾವಿರ ಮೀ.ಅನ್ನು 10:48.09 ಸೆಕೆಂಡುಗಳಲ್ಲಿ ಗುರಿಮುಟ್ಟಿದರು.

ಟೆನಿಸ್: ಜೇಕಬ್ ಚಾಂಪಿಯನ್

ಮಿಯಾಮಿ ಗಾರ್ಡನ್ಸ್ (ಎಪಿ): ಯುವ ಆಟಗಾರ ಜೇಕಬ್ ಮೆನ್ಸಿಕ್ ಅವರು ಮಿಯಾಮಿ ಓಪನ್‌ನ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಅನುಭವಿ ಆಟಗಾರ ನೊವಾಕ್ ಜೊಕೊವಿಚ್ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದುಕೊಂಡರು.

ಜೆಕ್ ರಿಪಬ್ಲಿಕ್‌ನ 19 ವರ್ಷ ವಯಸ್ಸಿನ ಜೇಕಬ್ 7-6 (4), 7-6 (4)ರಿಂದ ಸರ್ಬಿಯಾದ ಜೊಕೊವಿಚ್ ಅವರನ್ನು ಸೋಲಿಸಿದರು. 100ನೇ ಕಿರೀಟವನ್ನು ಮುಡಿಗೇರಿಸಿಕೊಳ್ಳುವ ತವಕದಲ್ಲಿದ್ದ ನಾಲ್ಕನೇ ಶ್ರೇಯಾಂಕದ ಜೊಕೊವಿಚ್ ಅವರಿಗೆ ನಿರಾಸೆಯಾಯಿತು. ಅವರು 24 ಗ್ರ್ಯಾನ್‌ಸ್ಲಾಮ್ ಸೇರಿದಂತೆ 99 ಪ್ರಶಸ್ತಿಗಳನ್ನು ಈಗಾಗಲೇ ಗೆದ್ದಿದ್ದಾರೆ.



ಪ್ರಶಸ್ತಿ ಗೆದ್ದ ಜೇಕಬ್ ಮೆನ್ಸಿಕ್ (ಬಲ) ಅವರನ್ನು ಅಭಿನಂದಿಸಿದ ಜೊಕೊವಿಚ್

ಇಲ್ಲಿ ಫೈನಲ್ ಪ್ರವೇಶಿಸುವ ಮೂಲಕ 37 ವರ್ಷವಯಸ್ಸಿನ ಜೊಕೊವಿಚ್ ಎಟಿಪಿ ಮಾಸ್ಟರ್ಸ್ 1000 ಫೈನಲ್ ತಲುಪಿದ ಅತ್ಯಂತ ಹಿರಿಯ ವಯಸ್ಸಿನ ಆಟಗಾರ ಎಂಬ ದಾಖಲೆಗೆ ಅವರು ಪಾತ್ರವಾಗಿದ್ದರು.

ಟೆನಿಸ್: ಮುಖ್ಯ ಸುತ್ತು ಇಂದಿನಿಂದ

ಬೆಂಗಳೂರು: ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆ (ಕೆಎಸ್‌ಎಲ್‌ಟಿಎ) ಆಶ್ರಯದಲ್ಲಿ ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಎಂ.ಕೃಷ್ಣ ಅವರ ಸ್ಮರಣಾರ್ಥ ಐಟಿಎಫ್ ವಿಶ್ವ ಟೆನಿಸ್ ಟೂರ್ ಪುರುಷರ ಎಂ25 ಟೂರ್ನಿಯ ಮುಖ್ಯಸುತ್ತು ಮಂಗಳವಾರ ಆರಂಭವಾಗಲಿದೆ.

ಕರ್ನಾಟಕದ ಕ್ರಿಶ್ ತ್ಯಾಗಿ, ಪ್ರಜ್ವಲ್ ದೇವ್, ರಿಷಿ ರೆಡ್ಡಿ, ಆದಿಲ್ ಕಲ್ಯಾಣಪುರ ಮತ್ತು ಸೂರಜ್ ಪ್ರಬೋಧ್ ಅವರು ಮುಖ್ಯಸುತ್ತಿನ ಸ್ಪರ್ಧೆಯಲ್ಲಿದ್ದಾರೆ. 18 ತಿಂಗಳ ಅನಾರೋಗ್ಯದ ನಂತರ ದಿಗ್ವಿಜಯ್ ಪ್ರತಾಪ್ ಸಿಂಗ್ ಮತ್ತೆ ಸ್ಪರ್ಧಾ ಕಣಕ್ಕೆ ಮರಳಿದ್ದಾರೆ.

ಭಾನುವಾರ ಮತ್ತು ಸೋಮವಾರ ನಡೆದ ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಮನ್ ಕೇಶರ್ವಾನಿ, ಅಭಿನವ್ ಸಂಜೀವ್ ಷಣ್ಮುಗಂ, ಕೋಡಿ ಪಿಯರ್‌ಸನ್, ನಿತಿನ್ ಕುಮಾರ್ ಸಿನ್ಹಾ, ಕಬೀರ್ ಹನ್ಸ್, ನಿಕಿತಾ ಇಯಾನಿನ್, ರಾಘವ್ ಜೈಸಿಂಘಾನಿ ಮತ್ತು ಸೂರಜ್ ಪ್ರಬೋಧ್ ಗೆದ್ದು ಮುಖ್ಯಸುತ್ತಿಗೆ ಮುನ್ನಡೆದಿದ್ದಾರೆ.

ಕಬ್ಬನ್ ಪಾರ್ಕ್‌ನಲ್ಲಿರುವ ಕೆಎಸ್‌ಎಲ್‌ಟಿಎ ಎಸ್.ಎಂ. ಕೃಷ್ಣ ಕ್ರೀಡಾಂಗಣದಲ್ಲಿ ಇದೇ 6ರವರೆಗೆ ನಡೆಯಲಿರುವ ಈ ಟೂರ್ನಿಯು ಒಟ್ಟು 25.67 ಲಕ್ಷ ಬಹುಮಾನ ಮೊತ್ತ ಒಳಗೊಂಡಿದೆ.

ರಿಯಾನ್ ಪರಾಗ್, ಪಾಂಡ್ಯಗೆ ₹ 12 ಲಕ್ಷ ದಂಡ

ಗುವಾಹಟಿ/ಅಹಮದಾಬಾದ್ (ಪಿಟಿಐ): ರಾಜಸ್ಥಾನ ರಾಯಲ್ಸ್ ತಂಡದ ಹಂಗಾಮಿ ನಾಯಕ ರಿಯಾನ್ ಪರಾಗ್ ಮತ್ತು ಮುಂಬೈ ಇಂಡಿಯನ್ಸ್ ತಂಡದ ನಾಯಕ ಅವರಿಗೆ ತಲಾ ₹ 12 ಲಕ್ಷ ದಂಡ ವಿಧಿಸಲಾಗಿದೆ.

'ಚೆನ್ನೈ ಸೂಪರ್ ಕಿಂಗ್ಸ್ ಎದುರಿನ ಭಾನುವಾರ ಪಂದ್ಯದಲ್ಲಿ ನಿಗದಿಯ ಅವಧಿಯೊಳಗೆ ಓವರ್‌ಗಳನ್ನು ಪೂರೈಸದ ಕಾರಣಕ್ಕೆ ರಾಯಲ್ಸ್ ನಾಯಕ ಪರಾಗ್ ಅವರಿಗೆ ₹ 12 ಲಕ್ಷ ದಂಡ ವಿಧಿಸಲಾಗಿದೆ. ಟೂರ್ನಿಯಲ್ಲಿ ರಾಜಸ್ಥಾನ ತಂಡದ ಮೊದಲ ಪ್ರಕರಣ ಇದಾಗಿದೆ' ಎಂದು ಐಪಿಎಲ್ ಆಡಳಿತ ಸಮಿತಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಗುಜರಾತ್ ಟೈಟನ್ಸ್ ವಿರುದ್ಧ ಶನಿವಾರದ ಪಂದ್ಯದಲ್ಲಿ ನಿಗದಿಯ ಸಮಯದೊಳಗೆ ಓವರ್‌ಗಳನ್ನು ಪೂರೈಸದ ಕಾರಣಕ್ಕೆ ಹಾರ್ದಿಕ್‌ಗೆ ದಂಡ ಹಾಕಲಾಗಿದೆ.